<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1370
ಸದಸ್ಯರ ಹೆಸರು	:	ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ)
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆ

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ಧಾರವಾಡ ತಾಲ್ಲೂಕಿನ ಇಟಿಗಟ್ಟಿ ಗ್ರಾಮದ ಹತ್ತಿರ ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ರಸ್ತೆಯು ಇಕ್ಕಟ್ಟಾಗಿದ್ದು, ಸರಣಿ ಭೀಕರ ಅಪಘಾತಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈ ಅಪಘಾತವನ್ನು ತಡೆಗಟ್ಟಲು ರಾಷ್ಟ್ರೀಯ ಹೆದ್ದಾರಿ-4 ರ ರಸ್ತೆ ಅಗಲೀಕರಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;	ಸದರಿ ರಸ್ತೆಯಲ್ಲಿಯ ಅಪಘಾತವನ್ನು ತಡೆಗಟ್ಟಲು ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ ಅಲ್ಲದೆ ಹುಬ್ಬಳ್ಳಿ-ಧಾರವಾಡ ಬೈಪಾಸ ರಸ್ತೆಯನ್ನು ನಾಲ್ಕು/ಆರು ಲೈನುಗಳ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ DPR ತಯಾರಿಕೆ NHAI ವತಿಯಿಂದ ಪ್ರಗತಿಯಲ್ಲಿದೆ.
ಇ)	ಹಾಗಿದ್ದಲ್ಲಿ, ಈವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	ಮಾನ್ಯ ಕೇಂದ್ರ ರಸ್ತೆ ಮತ್ತು ಭೂಸಾರಿಗೆ ಮಂತ್ರಿಗಳು ದಿನಾಂಕ: 11.02.2021 ರಂದು ಸಭೆ ಕರೆದು ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಸೂಚಿಸಿರುತ್ತಾರೆ. ಅದರಂತೆ ಸೂಕ್ತ ಕ್ರಮ ವಹಿಸಲಾಗುತ್ತಿದೆ.

ಕಡತ ಸಂಖ್ಯೆ: ಲೋಇ 84 ಸಿಎನ್‌ಹೆಚ್ 2021 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1373
ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ.
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದ ಸಾಸಲು ಹೋಬಳಿ ಮತ್ತು ಕಸಬಾ ಹೋಬಳಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
ಆ)	ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ಉದ್ಭವಿಸುವುದಿಲ್ಲ

ಸಂಖ್ಯೆ: ಸಕಇ 103 ಮೊದೇಶಾ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1374
ಸದಸ್ಯರ ಹೆಸರು	: ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸುವ ದಿನಾಂಕ	: 15-03-2021
ಉತ್ತರಿಸುವ ಸಚಿವರು	: ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಜನಾಂಗದ ಸಾರ್ವಜನಿಕರಿಗೆ ಸ್ಮಶಾನಕ್ಕೆ ಸ್ಥಳ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ;
ಆ)	ಬಂದಿದ್ದಲ್ಲಿ, ಸ್ಮಶಾನಕ್ಕೆ ಸ್ಥಳ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಸಾರ್ವಜನಿಕ ಸ್ಮಶಾನ ಭೂಮಿ ಕಲ್ಪಿಸಲು ಸರ್ಕಾರಿ ಜಮೀನು ಲಭ್ಯವಿರುವ ಕಡೆ ಕಾಯ್ದಿರಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ 71 ರಡಿ ಜಿಲ್ಲಾಧಿಕಾರಿಯವರಿಗೆ ಅಧಿಕಾರವಿರುತ್ತದೆ. ಸರ್ಕಾರಿ ಭೂಮಿ ಲಭ್ಯವಿಲ್ಲದ ಗ್ರಾಮಗಳಲ್ಲಿ ಗರಿಷ್ಠ ಎರಡು ಎಕರೆ ಖಾಸಗಿ ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ರಾಜ್ಯದಲ್ಲಿ ಸ್ಮಶಾನ ಭೂಮಿ ಸೌಲಭ್ಯ ಕಲ್ಪಿಸಲು ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆಗಳಲ್ಲಿ ಖಾಸಗಿಯವರಿಂದ ಜಮೀನು ಖರೀದಿಸಿ ಕಾಯ್ದಿರಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆಯಾ ಜಿಲ್ಲೆಗಳ ಅಗತ್ಯತೆಗಳಿಗೆ ಅನುಗುಣವಾಗಿ 2020-21 ನೇ ಸಾಲಿನಲ್ಲಿ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಸ್ಮಶಾನ ಭೂಮಿ ಅಗತ್ಯವಿರುವ ಗ್ರಾಮ ಮತ್ತು ನಗರಗಳಿಗೆ ಸ್ಮಶಾನ ಭೂಮಿ ಸೌಲಭ್ಯ ಒದಗಿಸುವ ಸಂಬಂಧ ಅಗತ್ಯ ಜಮೀನನ್ನು ಕಾಯ್ದಿರಿಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.

ಸಂಖ್ಯೆ: ಆರ್‌ಡಿ 46 ಎಲ್‌ಜಿಕ್ಯೂ 2021

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1378
ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉಡುಪಿ ಜಿಲ್ಲೆಯಲ್ಲಿ ನಮೂನೆ-53 ರಲ್ಲಿ ಅಕ್ರಮ-ಸಕ್ರಮ ಯೋಜನೆಯಡಿ ದಾಖಲಾಗಿರುವ ಅರ್ಜಿಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);</td><td>ಉಡುಪಿ ಜಿಲ್ಲೆಯಲ್ಲಿ ನಮೂನೆ-53 ರಲ್ಲಿ ಅಕ್ರಮ-ಸಕ್ರಮ ಯೋಜನೆಯಡಿ ಸ್ವೀಕೃತವಾಗಿರುವ ವಿಧಾನಸಭಾ ಕ್ಷೇತ್ರವಾರು ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿವೆ:-
<table>
<tr><th>ವಿಧಾನಸಭಾ ಕ್ಷೇತ್ರಗಳು</th><th>ಅರ್ಜಿಗಳ ಸಂಖ್ಯೆ</th></tr>
<tr><td>ಉಡುಪಿ</td><td>4815</td></tr>
<tr><td>ಕಾಪು</td><td>4855</td></tr>
<tr><td>ಕುಂದಾಪುರ</td><td>12614</td></tr>
<tr><td>ಕಾರ್ಕಳ</td><td>14608</td></tr>
<tr><td>ಬೈಂದೂರು</td><td>22585</td></tr>
<tr><td>ಒಟ್ಟು</td><td>59477</td></tr>
</table></td></tr>
<tr><td>ಆ)</td><td>2018-19, 2019-20 ಹಾಗೂ 2020-21 ನೇ ಸಾಲಿನಲ್ಲಿ ದಾಖಲಾಗಿರುವ ಅರ್ಜಿಗಳ ಪೈಕಿ ಮಂಜೂರಾತಿಗೊಂಡಿರುವ ಕಡತಗಳು ಎಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);</td><td rowspan="3">2018-19, 2019-20 ಹಾಗೂ 2020-21 ನೇ ಸಾಲುಗಳಲ್ಲಿ ನಮೂನೆ-53 ರಡಿಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. ಆದುದರಿಂದ ಸದರಿ ಸಾಲುಗಳ ಅರ್ಜಿಗಳ ಮಂಜೂರಾತಿ, ತಿರಸ್ಕೃತ ಮತ್ತು ಬಾಕಿಯ ಪ್ರಶ್ನೆ ಉದ್ಭವಿಸುವುದಿಲ್ಲ.</td></tr>
<tr><td>ಇ)</td><td>ಮೇಲ್ಕಂಡ ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಪೈಕಿ ಮಂಜೂರಾತಿಗೊಂಡಿರುವ ಕಡತಗಳು ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)</td></tr>
<tr><td>ಈ)</td><td>ಸದರಿ ಅವಧಿಯಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳು ಯಾವ ಕಾರಣಗಳಿಂದ ಮಂಜೂರಾತಿಗೆ ಬಾಕಿ ಇದೆ ಅಥವಾ ತಿರಸ್ಕೃತಗೊಂಡಿವೆ (ವಿವರ ನೀಡುವುದು)</td></tr>
<tr><td>ಉ)</td><td>ಕುಮ್ಕಿ ಮಿತಿಯಲ್ಲಿ ಹಾಗೂ ಡೀಮ್ಡ್ ಫಾರೆಸ್ಟ್ ಮಿತಿಯಲ್ಲಿ ಬಹುತೇಕ ಅಕ್ರಮ-ಸಕ್ರಮ ಅರ್ಜಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಕುಮ್ಕಿ ಹಾಗೂ ಡೀಮ್ಡ್ ಫಾರೆಸ್ಟ್ ಮಿತಿಯಲ್ಲಿರುವ ಜಮೀನಿನ ಅಕ್ರಮ-ಸಕ್ರಮ ಯೋಜನೆಯ ಅರ್ಜಿದಾರರಿಗೆ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಹೌದು.
ಕುಮ್ಕಿ ಜಮೀನನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಡೀಮ್ಡ್ ಫಾರೆಸ್ಟ್ ಜಮೀನನ್ನು ಡೀಮ್ಡ್ ಫಾರೆಸ್ಟ್ ಪಟ್ಟಿಯಿಂದ ಕೇಂದ್ರ ಸರ್ಕಾರವು ಕೈಬಿಡದ ಹೊರತು ಕಂದಾಯ ಇಲಾಖೆಯಿಂದ ಯಾವುದೇ ಕ್ರಮವನ್ನು ವಹಿಸುವಂತಿಲ್ಲ.</td></tr>
</table>

(ಕಡತ ಸಂಖ್ಯೆ:ಕಂಇ 33 ಎಲ್‌ಜಿಎ 2021)

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1380
2	ಸದಸ್ಯರ ಹೆಸರು	ಶ್ರೀ ಪರಮೇಶ್ವರ ನಾಯಕ್ ಪಿ.ಟಿ. (ಹಡಗಲಿ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಕಂದಾಯ ಗ್ರಾಮ ಗಳಿವೆ;	ಭೂದಾಖಲೆಗಳ ಪ್ರಕಾರ ರಾಜ್ಯದಲ್ಲಿ ಒಟ್ಟು 30,662 ಕಂದಾಯ ಗ್ರಾಮಗಳಿವೆ
ಆ)	ಈ ಎಲ್ಲಾ ಗ್ರಾಮಗಳು ಸರ್ಕಾರದ ನೀತಿಯಂತೆ ಪೋಡಿ ಮುಕ್ತ ಗ್ರಾಮಗಳಾಗಿ ಘೋಷಣೆಯಾಗಿ ದೆಯೇ; ಇಲ್ಲದಿದ್ದಲ್ಲಿ ಕಾರಣ ವೇನು;	ಪೋಡಿಮುಕ್ತ ಗ್ರಾಮ ಯೋಜನೆಯಡಿಯಲ್ಲಿ ಆಯ್ದ ಗ್ರಾಮಗಳ ಬಹು ಮಾಲೀಕತ್ವದ ಖಾಸಗಿ/ಹಿಡುವಳಿ ಜಮೀನುಗಳನ್ನು ಅಳತೆಗೆ ಒಳಪಡಿಸಿ ಏಕಮಾಲೀಕತ್ವಕ್ಕೆ ಪರಿವರ್ತಿಸಲು ಉದ್ದೇಶಿಸಲಾಗಿದೆ ಮತ್ತು ಈ ಯೋಜನೆ ಯನ್ನು ರಾಜ್ಯದಲ್ಲಿರುವ 224 ವಿಧಾನಸಭಾ ಕ್ಷೇತ್ರಗಳ ಪೈಕಿ ನಗರ ಪ್ರದೇಶದ ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿ, ಉಳಿದ 174 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಾರಂಭಿಸಲಾಗಿದ್ದು, 16,255 ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರ್ಣಗೊಳಿಸಲಾಗಿದೆ.
ಇ)	ಇದುವರೆವಿಗೂ ಎಷ್ಟು ಗ್ರಾಮ ಗಳನ್ನು ಪೋಡಿ ಮುಕ್ತ ಗ್ರಾಮ ಗಳೆಂದು ಘೋಷಿಸ ಲಾಗಿದೆ;	ಇದುವರೆವಿಗೂ ರಾಜ್ಯದ ಒಟ್ಟು 30,662 ಗ್ರಾಮಗಳ ಪೈಕಿ 16,255 ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರ್ಣಗೊಳಿಸಲಾಗಿದೆ.
ಈ)	ಈ ಯೋಜನೆಯು ನಿಗದಿತ ಕಾಲಮಿತಿ ಯಲ್ಲಿ ಅನುಷ್ಠಾನ ಗೊಳ್ಳದಿರಲು ಕಾರಣ ಗಳೇನು ಮತ್ತು ವಿಳಂಬಕ್ಕೆ ಕಾರಣರಾರು; (ವಿವರ ನೀಡುವುದು)	ಸರ್ಕಾರದ ನಿಯಮದಂತೆ ಸಾರ್ವಜನಿಕರು ದೈನಂದಿನ ಕೆಲಸ ಗಳಿಗಾಗಿ ಅಳತೆ ಕೋರಿ ಸಲ್ಲಿಸುವ 11ಇ, 11ಇ(ಅನ್ಯಕ್ರಾಂತ), ತತ್ಕಾಲ್ ಪೋಡಿ, ಹದ್ದುಬಸ್ತು ಇತ್ಯಾದಿ ಅರ್ಜಿಗಳ ಹಾಗೂ ತಾಲ್ಲೂಕುಗಳಲ್ಲಿ ಬರುವ ಸ್ಥಳೀಯ ತೊಂದರೆಗಳ ಬಗ್ಗೆ ಅಳತೆ ಕಾರ್ಯಗಳಿಗೆ ಮೊದಲ ಆದ್ಯತೆ ನೀಡಿ ಈ ಕಾರ್ಯಗಳನ್ನು ಪೂರೈಸಲು ಅವಶ್ಯಕವಾದ ಭೂಮಾಪಕರನ್ನು ಹೊರತುಪಡಿಸಿ ಉಳಿದ ಭೂಮಾಪಕರು ಗಳನ್ನು ಬಳಸಿಕೊಂಡು ಪೋಡಿ ಮುಕ್ತ ಗ್ರಾಮ ಅಭಿಯಾನ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. ಸಾರ್ವಜನಿಕರ ದೈನಂದಿನ ಕೆಲಸಗಳಿಗೆ ತೊಂದರೆ ಯಾಗದಂತೆ ಸರ್ಕಾರಿ ಮತ್ತು ಪರವಾನಗಿ ಭೂಮಾಪಕರ ಲಭ್ಯತೆಯ ಆಧಾರವಾಗಿ ವಿಧಾನ ಸಭಾ ಕ್ಷೇತ್ರವಾರು ಗ್ರಾಮಗಳನ್ನು ಹಂತ ಹಂತವಾಗಿ ಅಳತೆಗೆ ಆಯ್ಕೆ ಮಾಡಿಕೊಂಡು ಪೋಡಿ ಮುಕ್ತಗೊಳಿಸಲಾಗುತ್ತಿದೆ. ಅದರಂತೆ ಈಗಾಗಲೆ ರಾಜ್ಯದ ಒಟ್ಟು 30,662 ಗ್ರಾಮಗಳ ಪೈಕಿ 16,255 ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರೈಸುವ ಮೂಲಕ ಈ ಯೋಜನೆಯನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗುತ್ತಿದೆ.
ಉ)	ರಾಜ್ಯದಲ್ಲಿನ ಎಲ್ಲಾ ಗ್ರಾಮ ಗಳನ್ನು ಪೋಡಿ ಮುಕ್ತ ವೆಂದು ಯಾವ ಕಾಲಮಿತಿಯಲ್ಲಿ ಘೋಷಣೆ ಮಾಡಲಾಗುವುದು?	

ಸಂಖ್ಯೆ: ಕಂಇ 39 ಎಸ್‌ಎಸ್‌ಸಿ 2021

(ಆರ್.ಅಶೋಕ)

ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1385
ಮಾನ್ಯ ಸದಸ್ಯರ ಹೆಸರು	ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕೈವಾರ ಹೋಬಳಿ ದೊಡ್ಡಹಳ್ಳಿ, ಗ್ರಾಮದ ಸರ್ವೇ ನಂ.13 ರಲ್ಲಿ ಕನಕ ಸಮುದಾಯ ಭವನ ನಿರ್ಮಾಣ ಮಾಡಲು 2.00 ಎಕರೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೈವಾರ ಹೋಬಳಿ, ದೊಡ್ಡಹಳ್ಳಿ ಗ್ರಾಮದ ಸರ್ವೇ ನಂ.13 ರಲ್ಲಿ ಕನಕ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ 2.00 ಎಕರೆಯನ್ನು ಕಾಯ್ದಿರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ರವರ ಪತ್ರ ಸಂಖ್ಯೆ: ಹಿಂವಕ ಇ/ಚಿಪುರ/ಎಲ್ಎ/ಸಿಕ್ಯೂ/ಸಿ.ಆರ್-3/2020-21 ದಿನಾಂಕ : 05.03.2021 ರಲ್ಲಿ ತಿಳಿಸಿರುತ್ತಾರೆ.
ಆ	ಬಂದಿದ್ದಲ್ಲಿ. ಸದರಿ ಜಮೀನನ್ನು ಸರ್ವೇ ಮಾಡಿ ಇಲಾಖೆಯ ವಶಕ್ಕೆ ಪಡೆದು, ಈ ಭವನ ನಿರ್ಮಾಣ ಮಾಡಲು ಅನುದಾನ ಬಿಡುಗಡೆಗೆ ಸರ್ಕಾರದ ಕ್ರಮ ಕೈಗೊಂಡಿದಯೇ? (ವಿವರ ನೀಡುವುದು).	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ಸಂಸ್ಥೆಗಳು ನಿರ್ಮಿಸುತ್ತಿರುವ ಸಮುದಾಯ ಭವನ/ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಸರ್ಕಾರದ ಮಾರ್ಗಸೂಚಿ ಆದೇಶ ಸಂಖ್ಯೆ: ಹಿಂವಕ 695 ಬಿಎಂಎಸ್ 2014 (ಭಾಗ-2), ದಿನಾಂಕ:05.11.2014 ರನ್ವಯ ಸಹಾಯಧನ ಮಂಜೂರು ಮಾಡಲಾಗುತ್ತಿದೆ. ಹಿಂದುಳಿದ ವರ್ಗಗಳ ಅನುಕೂಲಕ್ಕೋಸ್ಕರ ಸಮುದಾಯ ಭವನಗಳನ್ನು ನಿರ್ಮಿಸಲು ಅವಶ್ಯಕತೆ ಇರುವ ಗ್ರಾಮಗಳಲ್ಲಿ/ಸ್ಥಳಗಳಲ್ಲಿ ನೋಂದಾಯಿತ ಸಂಘ/ಸ್ವಯಂಸೇವಾ ಸಂಸ್ಥೆಗಳು/ಟ್ರಸ್ಟ್ ಗಳು ಮುಂದೆ ಬಾರದೆ ಇದ್ದಲ್ಲಿ, ಅಥವಾ ಸಂಸ್ಥೆಗಳು ಇಲ್ಲದಿದ್ದಲ್ಲಿ, ಹಿಂದುಳಿದ ವರ್ಗಗಳ ಸಮುದಾಯ ಭವನಗಳು ಆ ಗ್ರಾಮಗಳಲ್ಲಿ ಅವಶ್ಯಕತೆ ಇದ್ದಲ್ಲಿ, ಅಂತಹ ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು ಸರ್ಕಾರಿ/ಗ್ರಾಮ ಪಂಚಾಯ್ತಿ ನಿವೇಶನವಿದ್ದಲ್ಲಿ, ಸಮುದಾಯ ಭವನಗಳನ್ನು ನಿರ್ಮಿತಿ ಕೇಂದ್ರ/ಕೆ.ಆರ್.ಐ.ಡಿ.ಎಲ್/ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಇತ್ಯಾದಿ ಸರ್ಕಾರಿ ಅಂಗ ಸಂಸ್ಥೆ/ಇಲಾಖೆಗಳ ಮುಖಾಂತರ ನಿರ್ಮಾಣ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಇಂತಹ ಪ್ರಸ್ತಾವನೆಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಸಿದ್ದಪಡಿಸಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ/ಮಂಜೂರಾತಿ ಪಡೆದು ಸಮುದಾಯ ಭವನ ನಿರ್ಮಾಣ ಮಾಡಲು ಅವಕಾಶವಿರುತ್ತದೆ. ಪ್ರಸ್ತುತ ಈ ಪ್ರಕರಣದಲ್ಲಿ ಜಿಲ್ಲೆಯಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ, ಪ್ರಸ್ತಾವನೆ ಸ್ವೀಕೃತವಾದ್ದಲ್ಲಿ, ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಈ ಕಾರ್ಯಕ್ರಮದಲ್ಲಿ ಒಟ್ಟಾರೆ ಲಭ್ಯವಾಗುವ ಅನುದಾನವನ್ನು ಆಧರಿಸಿ ನಿಯಮಾನುಸಾರ ಅನುದಾನ ಮಂಜೂರಾತಿಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಹಿಂವಕ 172 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ ವಿಧಾನ ಸಭಾ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1386**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಚಿಂತಾಮಣಿ ತಾಲ್ಲೂಕಿನ ಕಸಬಾ ಹೋಬಳಿಯ ಚಿನ್ನಸಂದ್ರ ಗ್ರಾಮದ ಸರ್ವೆ ನಂ.17 ರಲ್ಲಿ ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡಲು 5 ಎಕರೆ ಜಮೀನು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು. ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಚಿನ್ನಸಂದ್ರ ಗ್ರಾಮದ ಸರ್ವೆ ನಂ.17 ರಲ್ಲಿ 5 ಎಕರೆ ಸರ್ಕಾರಿ ಜಮೀನನ್ನು ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡಲು ಕಾಯ್ದಿರಿಸಲಾಗಿದೆ.
(ಆ)	ಬಂದಿದ್ದಲ್ಲಿ, ಸದರಿ ಜಮೀನನ್ನು ಸರ್ವೆ ಮಾಡಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರಿಸಿ ಅರ್ಹ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ ; ಹಾಗಿದ್ದಲ್ಲಿ, ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ? (ವಿವರ ನೀಡುವುದು)	ಚಿಂತಾಮಣಿ ತಾಲ್ಲೂಕಿನ ಚಿನ್ನಸಂದ್ರ ಗ್ರಾಮದ ಸರ್ವೆ ನಂ.17 ರಲ್ಲಿ ನಿವೇಶನ ಯೋಜನೆಯಡಿ ಕಾಯ್ದಿರಿಸಲಾದ 5 ಎಕರೆ ಸರ್ಕಾರಿ ಜಮೀನಿನ ಸರ್ವೆ ಕಾರ್ಯ (ಜಮೀನು ಸರ್ವೆ ಇಲಾಖೆಯ ಹಂತದಲ್ಲಿ) ಬಾಕಿ ಇರುತ್ತದೆ. ಸರ್ವೆ ಕಾರ್ಯ ಮುಗಿದ ನಂತರ ಜಮೀನನ್ನು ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಂತಾಮಣಿ ತಾಲ್ಲೂಕು ಇವರಿಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ :ವಇ 104 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1395
ಉತ್ತರಿಸಬೇಕಾದ ದಿನಾಂಕ	:	15.03.2021
ಸದಸ್ಯರ ಹೆಸರು	:	ಶ್ರೀ ಮಂಜುನಾಥ್.ಎ (ಮಾಗಡಿ)
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದ ತಾಲ್ಲೂಕು ತಹಶೀಲ್ದಾರ್ ಕಚೇರಿಗಳಲ್ಲಿ ಹಾಗೂ ನಾಡ ಕಚೇರಿಗಳಲ್ಲಿ ಸರ್ವರ್ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದ ತಾಲ್ಲೂಕು ತಹಶೀಲ್ದಾರ್ ಕಛೇರಿಗಳಲ್ಲಿ ಹಾಗೂ ನಾಡ ಕಛೇರಿಗಳಲ್ಲಿ ಸರ್ವರ್ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ	ಇದರಿಂದ ರೈತರಿಗೆ ಪಹಣಿ, ಮ್ಯುಟೇಶನ್, ಎಂ.ಆರ್ ಹಾಗೂ ಖಾತೆ ಇತ್ಯಾದಿ ಪ್ರತಿಗಳನ್ನು ಪಡೆಯಲು ತುಂಬಾ ತೊಂದರೆಯಾಗುತ್ತಿರುವುದು ನಿಜವೇ ;	ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾವುದೇ ತೊಂದರೆ ಇಲ್ಲದೇ ಪಹಣಿ ಮತ್ತು ಎಂ.ಆರ್ ಗಳನ್ನು ಶೀಘ್ರವಾಗಿ ಪಡೆಯಲು ತಹಶೀಲ್ದಾರ್ ಕಛೇರಿಯಲ್ಲಿ ಮಾತ್ರವಲ್ಲದೇ, ಗ್ರಾಮ ಪಂಚಾಯಿತಿ, ಸ್ಪಂದನ ಕೇಂದ್ರ ಮತ್ತು ನಾಡಕಛೇರಿಗಳಲ್ಲಿ, ಪಡೆಯಬಹುದಾಗಿರುತ್ತದೆ.
ಇ	ಹಾಗಿದ್ದಲ್ಲಿ, ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;	ಅನ್ವಯಿಸುವುದಿಲ್ಲ
ಈ	ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಹೊಸ ತಂತ್ರಜ್ಞಾನಗಳು ಏನಾದರೂ ಅಳವಡಿಸಿಕೊಳ್ಳಲು ಚಿಂತನೆ ನಡೆಸಿದೆಯೇ;	ಹೌದು
ಉ	ಹಾಗಿದ್ದಲ್ಲಿ, ಯಾವ ಹೊಸ ತಂತ್ರಜ್ಞಾನವನ್ನು ಅಳವಡಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)	ಭೂಮಿ ಉಸ್ತುವಾರಿ ಕೋಶವು **"ವೆಬ್ ಆಧಾರಿತ ನಮ್ಮ ಭೂಮಿ"** ಹೊಸ ತಂತ್ರಾಂಶವನ್ನು ಅಭಿವೃದ್ಧಿಪಡಿಸುತ್ತಿದ್ದು, ಪ್ರಾಯೋಗಿಕವಾಗಿ ರಾಜ್ಯದ 30 ತಾಲ್ಲೂಕುಗಳಲ್ಲಿ ಅಳವಡಿಸಲಾಗಿದೆ.

ಕಂಇ 55 ಎಂ ಆರ್ ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: ::1398
ಸದಸ್ಯರ ಹೆಸರು :: ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
ಉತ್ತರಿಸುವ ದಿನಾಂಕ :: 15.03.2021
ಉತ್ತರಿಸುವ ಸಚಿವರು :: ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಗೆ ಸೇರಿರುವ ಸರ್ಕಾರಿ ಜಮೀನೆಷ್ಟು; ಪ್ರಸ್ತುತ ಸದರಿ ಇಲಾಖೆಯಿಂದ ಬೇರೆ ಬೇರೆ ಇಲಾಖೆಗೆ ಹಂಚಿಕೆ ಮಾಡಿರುವ ಸರ್ಕಾರಿ ಜಮೀನೆಷ್ಟು;	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದ ವ್ಯಾಪ್ತಿಯಲ್ಲಿ ಒಟ್ಟು 296 ಎಕರೆ 20 ಗುಂಟೆ ಜಮೀನು ಕಂದಾಯ ಇಲಾಖೆಗೆ ಸೇರಿರುತ್ತದೆ. ಪ್ರಸ್ತುತ ಸದರಿ ಇಲಾಖೆಯಿಂದ ಬೇರೆ ಬೇರೆ ಇಲಾಖೆಗೆ ಒಟ್ಟು 30-00 ಎಕರೆ ಜಮೀನನ್ನು ಕಾಯ್ದಿರಿಸಲಾಗಿದೆ.
ಆ)	ಈ ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದವರಿಗೆ ಸ್ಮಶಾನ ಭೂಮಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ಸಮುದಾಯದವರಿಗೆ ಸ್ಮಶಾನ ಭೂಮಿ ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಸ್ಮಶಾನ ಭೂಮಿಗೆ ಬೇಡಿಕೆ ಇರುವ ಗ್ರಾಮಗಳು ಯಾವುವು;	ಬಂದಿದೆ:- 1) ಈಚನಾಳ 2)ಮರಗಟ್ಟನಾಳ 3) ಗುಂಡಸಾಗರ 4)ಚಿತ್ರನಾಳ 5)ಚಿಕ್ಕುಉಪ್ಪೇರಿ 6)ಹಿರೇಉಪ್ಪೇರಿ 7)ನೀರಲಕೇರಿ, 8)ಅಡವಿಭಾವಿ 9)ತೋರಲಬೆಂಚಿ 10) ಯರಗುಂಟಾ 11) ಸುಣಕಲ್ಲ 12)ಮಾವಿನಭಾವಿ ಪ್ರತಿ ಗ್ರಾಮಕ್ಕೆ 1-00 ಎಕರೆಯಂತೆ ಒಟ್ಟು 12-00 ಎಕರೆ ಸರ್ಕಾರಿ ಭೂಮಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಾಂಗಕ್ಕೆ ರುದ್ರ ಭೂಮಿಗಾಗಿ ನೀಡಲು ಪ್ರಸ್ತಾವನೆ ಅನುಮೋದನೆ ಹಂತದಲ್ಲಿ ಬಾಕಿ ಇರುತ್ತದೆ.
ಇ)	ಲಿಂಗಸುಗೂರು ತಾಲ್ಲೂಕಿನ ಯಲಗಟ್ಟಾ ಮತ್ತು ಇತರೆ 11 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿಗೆ ಕೆರೆ ನಿರ್ಮಾಣ ಮಾಡಲು 26 ಎಕರೆ ಜಮೀನನ್ನು ಭೂ ಸ್ವಾದೀನ ಪಡಿಸಿಕೊಳ್ಳಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಪ್ರಸ್ತಾವನೆ ಅನುಮೋದನೆ ಹಂತದಲ್ಲಿ ಬಾಕಿ ಇರುತ್ತದೆ.
ಈ)	ಈ ತಾಲ್ಲೂಕಿನ ಆನೆಹೊಸೂರು ಗ್ರಾಮದ ಸರ್ವೆ ನಂ.90/2/1ರ 4 ಎಕರೆ 22 ಗುಂಟೆ ಜಮೀನನ್ನು ಕುಡಿಯುವ ನೀರಿನ ಕಾಮಗಾರಿಗಳಿಗೆ ಭೂ ಸ್ವಾದೀನ ಪ್ರಕ್ರಿಯೆಗಾಗಿ ಅನುಮೋದನೆ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಪ್ರಸ್ತಾವನೆ ಸ್ವೀಕೃತಿಯಾಗಿದ್ದು, ಜಿಲ್ಲಾ ಮಟ್ಟದ ನೇರ ಖರೀದಿ ಸಮಿತಿಯ ಅನುಮೋದನೆಗೆ ಬಾಕಿಯಿದೆ.

ಸಂಖ್ಯೆ:ಕಂಇ 14 ಎಲ್‌ಜಿಆರ್ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ (ಮಂಗಳೂರು)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1463

ಉತ್ತರಿಸಬೇಕಾದ ದಿನಾಂಕ : 15.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇವು ಉತ್ಪಾದನೆಗಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ (ಸಂಪೂರ್ಣ ವಿವರ ನೀಡುವುದು)?	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇವು ಉತ್ಪಾದನೆಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 1. ಪ್ರಸಕ್ತ ಸಾಲಿನಲ್ಲಿ ಆಯುಕ್ತಾಲಯ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ರವರಿಂದ 104 ಮೇವಿನ ಬೀಜದ ಮಿನಿಕಿಟ್‌ಗಳು ಸರಬರಾಜು ಮಾಡಲಾಗಿದ್ದು, ರೈತರಿಗೆ ವಿತರಿಸಲಾಗಿರುತ್ತದೆ. 2. ಹೈಡ್ರೋಫೋನಿಕ್ಸ್ ಘಟಕ ಸ್ಥಾಪನೆ ಕಾರ್ಯಕ್ರಮ: a. 2018-19 ನೇ ಸಾಲಿನಲ್ಲಿ ಸಾಮಾನ್ಯ ರೈತರಿಗೆ ಶೇ 90 ರಷ್ಟು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ 99.00 ರಷ್ಟು ಸಹಾಯಾನುದಾನದಂತೆ ರೂ.6,85,800.00 ಗಳಲ್ಲಿ 13 ಫಲಾನುಭವಿಗಳಿಗೆ ಘಟಕ ನೀಡಲಾಗಿರುತ್ತದೆ. (ಸಾಮಾನ್ಯ 10, ಪ.ಜಾ-2, ಪಪಂ-1) b. 2019-21ನೇ ಸಾಲಿನಲ್ಲಿ ಸಾಮಾನ್ಯ ರೈತರಿಗೆ ಶೇ90 ರಷ್ಟು ಸಹಾಯಾನುದಾನದಲ್ಲಿ 6 ಫಲಾನುಭವಿಗಳಿಗೆ ರೂ.3,09,960.00 ಗಳಲ್ಲಿ ಹೈಡ್ರೋಫೋನಿಕ್ಸ್ ಘಟಕ ನೀಡಲಾಗಿರುತ್ತದೆ. c. 2019-20 ನೇ ಸಾಲಿನಲ್ಲಿ ಹೈಡ್ರೋಫೋನಿಕ್ಸ್ ವಿಧಾನದಲ್ಲಿ ಮೇವು ಬೆಳೆಯುವ ಬಗ್ಗೆ 550 ರೈತರಿಗೆ ಉಚಿತವಾಗಿ ತರಬೇತಿ ನೀಡಲಾಗಿರುತ್ತದೆ.

ಪಸಂಮೀ ಇ-78 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1465
ಸದಸ್ಯರ ಹೆಸರು : ಶ್ರೀ ಖಾದರ್.ಯು.ಟಿ. (ಮಂಗಳೂರು)
ಉತ್ತರಿಸುವ ದಿನಾಂಕ : 15.03.2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಶಾಲೆ, ಅಂಗನವಾಡಿ, ಘನತ್ಯಾಜ್ಯ ಘಟಕ, ಸ್ಮಶಾನ ಇತ್ಯಾದಿ ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಕಾಯ್ದಿರಿಸುವ ಪ್ರಸ್ತಾವನೆಯು ಮಂಜೂರಾತಿಗೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71 ರನ್ವಯ ಸರ್ಕಾರಿ ಉದ್ದೇಶಗಳಿಗೆ ಸರ್ಕಾರಿ ಜಮೀನುಗಳನ್ನು ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ.
ಆ)	ಬಂದಿದ್ದಲ್ಲಿ, ಈ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ, ಅತೀ ಶೀಘ್ರವಾಗಿ ಮಂಜೂರಾತಿ ನೀಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು;	
ಇ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಎಷ್ಟು ಕಡತಗಳು ಮಂಜೂರಾತಿಗೆ ಬಾಕಿ ಇರುತ್ತವೆ (ವಿವರ ನೀಡುವುದು);	ಇಂತಹ 18 ಕಡತಗಳು ಬಾಕಿ ಇದ್ದು. ಇವುಗಳು ಇತ್ತೀಚಿನ ಕಡತಗಳಾಗಿರುತ್ತವೆ. ಸದರಿ ಕಡತಗಳು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಕಚೇರಿಯಲ್ಲಿ ಪರಿಶೀಲನೆಯಲ್ಲಿರುತ್ತವೆ.
ಈ)	ಗ್ರಾಮ ಸಹಾಯಕರನ್ನು 'ಡಿ' ಗ್ರೂಪ್ ನೌಕರರನ್ನಾಗಿ ಪರಿಗಣಿಸುವ ಅಥವಾ ಅವರಿಗೆ ಪ್ರಸ್ತುತ ನೀಡಲಾಗುತ್ತಿರುವ ಸಂಭಾವನೆಯನ್ನು ಹೆಚ್ಚು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:4559-4562/1998 ರಲ್ಲಿ ದಿನಾಂಕ:06.11.2003 ರಂದು ನೀಡಿರುವ ತೀರ್ಪಿನ ಅನುಸಾರ ಗ್ರಾಮ ಸಹಾಯಕರ ಸೇವೆಯನ್ನು ಸಕ್ರಮೀಕರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ. ಗ್ರಾಮ ಸಹಾಯಕರು ಮಿತವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರಿಗೆ ಮಾಸಿಕ ಮಿತವೇತನವನ್ನು ಕಾಲಕಾಲಕ್ಕೆ ಹೆಚ್ಚಳ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಕಂಇ 83 ಬಿಎಸ್‌ಐ 2011, ದಿನಾಂಕ:26.03.2018ರಲ್ಲಿ ದಿನಾಂಕ:01.04.2018 ರಿಂದ ಅನ್ವಯವಾಗುವಂತೆ ಮಾಸಿಕ ಮಿತವೇತನವನ್ನು ರೂ.10,000/- ದಿಂದ ರೂ.12,000/- ಗಳಿಗೆ ಹೆಚ್ಚಿಸಲಾಗಿದೆ. ಪ್ರಸ್ತುತ ಮಾಸಿಕ ಮಿತವೇತನವನ್ನು ರೂ.12,000/- ದಿಂದ ರೂ.18,000/- ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
ಉ)	ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?	

(ಕಡತ ಸಂಖ್ಯೆ:ಕಂಇ 30 ಎಲ್‌ಜಿಎ 2021)

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1476
ಉತ್ತರಿಸಬೇಕಾದ ದಿನಾಂಕ : 15.03.2021
ಸದಸ್ಯರ ಹೆಸರು : ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕಂದಾಯ ಆದಾಲತ್ ಯೋಜನೆಯು ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಎಂಆರ್ಆರ್ 2020 ದಿನಾಂಕ 09-03-2021 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ನಗರ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಕಂದಾಯ ಅದಾಲತ್‌ಗಳನ್ನು ನಡೆಸಿ ಪಹಣಿ ತಿದ್ದುಪಡಿ ಮಾಡುವ ಅಧಿಕಾರವನ್ನು ಸಹಾಯಕ ಆಯುಕ್ತರಿಂದ ತಹಶೀಲ್ದಾರರಿಗೆ ದಿನಾಂಕ 31-12-2021 ರವರೆಗೆ ಪ್ರತ್ಯಾಯೋಜಿಸಿ ಆದೇಶ ಹೊರಡಿಸಲಾಗಿದೆ.
ಆ	ಬಂದಿದ್ದಲ್ಲಿ, ಈ ಯೋಜನೆಯನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು; (ಸಂಪೂರ್ಣ ವಿವರ ನೀಡುವುದು)	
ಇ	ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?	

ಕಂಇ 54 ಎಂ ಆರ್ ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1474
2	ಸದಸ್ಯರ ಹೆಸರು	ಶ್ರೀ ಭರತ್‌ಶೆಟ್ಟಿ ವೈ.ಡಾ. (ಮಂಗಳೂರು ನಗರ ಉತ್ತರ ಕ್ಷೇತ್ರ)
3	ವಿಷಯ	ದಾಖಲೆರಹಿತ ಕಂದಾಯ ಗ್ರಾಮಗಳು
4	ಉತ್ತರಿಸಬೇಕಾದ ದಿನಾಂಕ	15/03/2021
5	ಉತ್ತರಿಸುವ ಸಚಿವರು	ಮಾನ್ಯ ಕಂದಾಯ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡಲಾಗಿದೆ; ಕಂದಾಯ ಗ್ರಾಮಗಳನ್ನು ಮಾಡುವ ಬಗ್ಗೆ ಬಂದಿರುವ ಪ್ರಸ್ತಾವನೆಗಳೆಷ್ಟು?	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ತಾಂಡ, ಗೊಲ್ಲರ ಹಟ್ಟಿ, ವಡ್ಡರ ಹಟ್ಟಿ, ಕುರುಬರ ಹಟ್ಟಿ, ನಾಯಕರ ಹಟ್ಟಿ, ಕ್ಯಾಂಪು, ಹಾಡಿ ಮುಂತಾದವುಗಳು ಇರುವುದಿಲ್ಲವಾದುದರಿಂದ ಕಂದಾಯ ಗ್ರಾಮಗಳ ಪ್ರಸ್ತಾವನೆ ಇರುವುದಿಲ್ಲ.
ಆ)	ಈ ಜಿಲ್ಲೆಯ ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂದಾಯ ಗ್ರಾಮಗಳೆಷ್ಟು; (ವಿವರ ನೀಡುವುದು)	ಇರುವುದಿಲ್ಲ
ಇ)	ಈ ಕ್ಷೇತ್ರದ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?	ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂದಾಯ ಗ್ರಾಮಗಳು ಇರುವುದಿಲ್ಲವಾದ್ದರಿಂದ ಅಂತಹ ಪ್ರಸ್ತಾವನೆಗಳು ಇರುವುದಿಲ್ಲ.

ಕಂಇ 07 ಪಿಎಲ್‌ಸಿ 2021

(ಆರ್. ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1478
ಸದಸ್ಯರ ಹೆಸರು	:	ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸುವ ದಿನಾಂಕ	:	15.03.2021.
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆ

ಕ್ರಮ ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ತಾಲ್ಲೂಕಿನ ಸರ್ಕ್ಯೂಟ್ ಹೌಸ್ ರಸ್ತೆಯನ್ನು ಅಭಿವೃದ್ಧಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಾಮಗಾರಿಯು ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು)	ಮೈಸೂರು ತಾಲ್ಲೂಕಿನಲ್ಲಿ ಬರುವ ಸರ್ಕ್ಯೂಟ್ ಹೌಸ್ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಕಿ.ಮೀ.0.00 ರಿಂದ 9.60 ವರೆಗೆ (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿ ಕಾಮಗಾರಿಯು 2016-17ನೇ ಸಾಲಿನಲ್ಲಿ ಮಂಜೂರಾಗಿರುವ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಯೋಜನೆಯಡಿ ಕೈಗೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದಲ್ಲಿ ಮೆ: ಅನ್ನಪೂರ್ಣೇಶ್ವರಿ ಕನ್ಸಟ್ರಕ್ಷನ್ಸ್ ಪ್ರೈ ಲಿಮಿಟೆಡ್ ಮೈಸೂರು ಇವರಿಗೆ ಟೆಂಡರ್ ಕರಾರು ಸಂಖ್ಯೆ: 05/2019-20 ದಿ: 16.05.2019 ರಲ್ಲಿ ವಹಿಸಲಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಯನ್ನು 9 (ಒಂಬತ್ತು) ತಿಂಗಳು ಕಾಲಮಿತಿಯೊಳಗೆ ಅಂದರೆ ಫೆಬ್ರವರಿ-20ರೊಳಗೆ ಪೂರ್ಣಗೊಳಿಸಬೇಕಾಗಿತ್ತು. ಆದರೆ ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಳಂಬವಾಗಿದ್ದು, ಒಟ್ಟು 7.80 ಕಿ.ಮೀ ರಸ್ತೆ ಅಭಿವೃದ್ಧಿಯಲ್ಲಿ ಪ್ರಸ್ತುತ 2.00 ಕಿ.ಮೀ. ಡಿ.ಬಿ.ಎಂ. ಹಂತದವರೆಗೆ ಪೂರ್ಣಗೊಳಿಸಿರುತ್ತಾರೆ. ಉಳಿಕೆ ಕಾಮಗಾರಿಯನ್ನು ತಕ್ಷಣ ಪೂರ್ಣಗೊಳಿಸುವಂತೆ ನೋಟೀಸ್‌ಗಳನ್ನು ನೀಡಲಾಗಿರುತ್ತದೆ. ಗುತ್ತಿಗೆದಾರರು ಸಿ.ಆರ್.ಎಫ್. ಲೆಕ್ಕಶೀರ್ಷಿಕೆ ಅನುದಾನದಲ್ಲಿ ಈಗಾಗಲೇ ಪೂರ್ಣಗೊಳಿಸಿರುವ, ಇತರೆ ಕಾಮಗಾರಿಗಳ ಬಿಲ್ಲುಗಳ ಹಣ ಪಾವತಿಯಾಗದೇ ಇರುವುದರಿಂದ, ಆರ್ಥಿಕ ಮುಗ್ಗಟ್ಟಿನಿಂದಾಗಿ ಹಾಗೂ COVID-19 ರ ಕಾರಣ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿದೆಯೆಂದು ತಿಳಿಸಿರುತ್ತಾರೆ.
ಆ)	ಸರ್ಕ್ಯೂಟ್ ಹೌಸ್ ರಸ್ತೆಯನ್ನು ಯಾವ ಯೋಜನೆಯಡಿ ಅಭಿವೃದ್ಧಿಪಡಿಸಲಾಗುವುದು;	ಸರ್ಕ್ಯೂಟ್ ಹೌಸ್ ರಸ್ತೆಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ಕೇಂದ್ರ ಪುರಸ್ಕೃತ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ.
ಇ)	ಈ ರಸ್ತೆಯ ಅಭಿವೃದ್ಧಿಗಾಗಿ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು; ಇದುವರೆಗೆ ಬಿಡುಗಡೆಯಾಗಿರುವ ಮತ್ತು ವೆಚ್ಚವಾಗಿರುವ ಮೊತ್ತವೆಷ್ಟು? (ಸಂಪೂರ್ಣ ವಿವರ ನೀಡುವುದು)	ಈ ರಸ್ತೆಯ ಅಭಿವೃದ್ಧಿಗೆ ರೂ.10.00 ಕೋಟಿ ಅನುದಾನ ನಿಗದಿಯಾಗಿರುತ್ತದೆ. ಇದುವರೆಗೆ ಗುತ್ತಿಗೆದಾರರು ರೂ.3.28 ಕೋಟಿ ಮೊತ್ತದ ಕಾಮಗಾರಿ ಪೂರ್ಣಗೊಳಿಸಿದ್ದು, ಇದುವರೆಗೂ ಸದರಿ ಕಾಮಗಾರಿಗೆ ಗುತ್ತಿಗೆದಾರರಿಗೆ ಹಣ ಪಾವತಿಯಾಗಿರುವುದಿಲ್ಲ, ಅನುದಾನ ಬಿಡುಗಡೆಯ ಅನುಗುಣವಾಗಿ ಬಿಲ್ ಪಾವತಿ ಮಾಡಲಾಗುವುದು.

ಕಡತ ಸಂಖ್ಯೆ: ಲೋಇ 86 ಸಿಎನ್‌ಹೆಚ್ 2021 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1479
ಮಾನ್ಯ ಸದಸ್ಯರ ಹೆಸರು	ಶ್ರೀ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ|| (ಖಾನಾಪುರ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಖಾನಾಪೂರ ವಿಧಾನಸಭಾ ಕ್ಷೇತ್ರದ ಕಡತನ ಬಾಗೇವಾಡಿಯಲ್ಲಿ ವಸತಿ ಶಾಲೆ ನಿರ್ಮಿಸಲು 15 ಎಕರೆ ಭೂಮಿಯನ್ನು ಕಾಯ್ದಿರಿಸಿದ್ದರೂ, ಅಲ್ಲಿ ವಸತಿ ಶಾಲೆ ತೆರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ. ಬಿಸಿಡಬ್ಲ್ಯೂ 335 ಬಿಎಂಎಸ್ 2012, ದಿ:21.11.2012 ರಲ್ಲಿ ಖಾನಾಪೂರ ತಾಲ್ಲೂಕಿಗೆ ಹಿಂದುಳಿದ ವರ್ಗದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಂಜೂರಾಗಿರುತ್ತದೆ. ಪ್ರಸ್ತುತದವರೆಗೆ ಸದರಿ ಶಾಲೆಗೆ ಹುದ್ದೆಗಳು ಮಂಜೂರಾಗದೇ ಇರುವ ಹಿನ್ನೆಲೆಯಲ್ಲಿ ವಸತಿ ಶಾಲೆಯನ್ನು ಪ್ರಾರಂಭಿಸಿರುವುದಿಲ್ಲ. ಹುದ್ದೆಗಳನ್ನು ಮಂಜೂರು ಮಾಡಲು ಸಮಾಜ ಕಲ್ಯಾಣ ಇಲಾಖೆಯ ಕಡತ ಸಂಖ್ಯೆ:ಸಕಇ 196 ಎಂಡಿಎಸ್ 2017ರಲ್ಲಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಹುದ್ದೆಗಳ ಸೃಜನೆಯ ನಂತರ ಶಾಲೆಯನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.
ಆ)	ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಮಂಜೂರಾದ ವಸತಿ ಶಾಲೆಗಳು ಎಷ್ಟು;	ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಮಂಜೂರಾದ 08 ವಸತಿ ಶಾಲೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
	ಈ ಕ್ಷೇತ್ರದ ಕಡತನ ಬಾಗೇವಾಡಿಯಲ್ಲಿ ವಸತಿ ಶಾಲೆ ಆರಂಭಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?	ಖಾನಾಪುರ ತಾಲ್ಲೂಕಿಗೆ ಮಂಜೂರಾದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಹುದ್ದೆ ಮಂಜೂರಾತಿಯಾದ ನಂತರ ವಸತಿ ಶಾಲೆಯನ್ನು ಪ್ರಾರಂಭಿಸಲಾಗುವುದು.

ಸಂಖ್ಯೆ:ಹಿಂವಕ 197 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1481
ಸದಸ್ಯರ ಹೆಸರು	ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್
ಉತ್ತರಿಸುವ ದಿನಾಂಕ:	15-03-2021
ಉತ್ತರಿಸುವವರು	ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

	ಪ್ರಶ್ನೆ	ಉತ್ತರ
ಅ	ಖಾನಾಪುರ ವಿಧಾನಸಭಾ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಯ ದೇವಸ್ಥಾನಗಳು ಬಹಳ ವರ್ಷಗಳಿಂದ ಅಭಿವೃದ್ಧಿ ಕಾಣದೆ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳಿಲ್ಲದ ಪರಿಣಾಮ ಭಕ್ತರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಖಾನಾಪುರ ವಿಧಾನಸಭಾ ಕ್ಷೇತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳು ಬಹಳ ವರ್ಷಗಳಿಂದ ಅಭಿವೃದ್ಧಿ ಕಾಣದೆ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳಿಲ್ಲದ ಪರಿಣಾಮ ಭಕ್ತರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ.
ಆ	ಈ ಕ್ಷೇತ್ರದಲ್ಲಿರುವ ಮುಜರಾಯಿ ಇಲಾಖೆಯ ನಿರ್ವಹಣೆಯಲ್ಲಿರುವ ದೇವಸ್ಥಾನಗಳಾವುವು; (ವಿವರ ನೀಡುವುದು)	ಖಾನಾಪುರ ವಿಧಾನಸಭಾ ಕ್ಷೇತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ/ನಿರ್ವಹಣೆಯಲ್ಲಿ ಒಟ್ಟು 485 ಅಧಿಸೂಚಿತ ದೇವಾಲಯಗಳಿರುತ್ತವೆ. ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.
ಇ	ಈ ಪೈಕಿ ಸಮುದಾಯ ಭವನ, ಶೌಚಾಲಯ ಮುಂತಾದ ಮೂಲಭೂತ ಸೌಕರ್ಯಗಳ ಕೊರತೆಯಿರುವ ದೇವಸ್ಥಾನಗಳು ಯಾವುವು; (ವಿವರ ನೀಡುವುದು)	ಈ ಪೈಕಿ ಸಮುದಾಯ ಭವನ, ಶೌಚಾಲಯ ಮುಂತಾದ ಮೂಲಭೂತ ಸೌಕರ್ಯಗಳ ಕೊರತೆಯಿರುವ ಬಗ್ಗೆ ಸಂಬಂಧಪಟ್ಟ ದೇವಾಲಯ/ಆಡಳಿತ ಮಂಡಳಿ ಸಮಿತಿಯಿಂದ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ.
ಈ	ಸದರಿ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಖಾನಾಪುರ ವಿಧಾನಸಭಾ ಕ್ಷೇತ್ರದ ದೇವಾಲಯಗಳು/ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳಡಿ ಒಟ್ಟು ರೂ.31.38ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ.

(ಮೊತ್ತ ರೂ.ಲಕ್ಷಗಳಲ್ಲಿ)

ಯೋಜನೆ ವಿವರ	2019-20	2020-21
ದುರಸ್ತಿ/ಜೀರ್ಣೋದ್ಧಾರ/ ಅಭಿವೃದ್ಧಿ	10.00	0.00
ಆರಾಧನಾ ಯೋಜನೆ	4.24	3.30
ಪರಿಶಿಷ್ಟಜಾತಿ ಉಪಯೋಜನೆ	6.76	5.28
ಗಿರಿಜನ ಉಪಯೋಜನೆ	1.01	0.79
ಒಟ್ಟು	22.01	9.37

(ಸಂಖ್ಯೆ:ಕಂಇ 56 ಮುಸಪ್ರ 2021)

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1483
ಮಾನ್ಯ ಸದಸ್ಯರ ಹೆಸರು	ಶ್ರೀ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ|| (ಖಾನಾಪುರ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿ ಶಾಲಾ ಮಕ್ಕಳು (ವಿಶೇಷವಾಗಿ ಹೆಣ್ಣು ಮಕ್ಕಳು) ಕಾಡುದಾರಿಯಲ್ಲಿ ತಮ್ಮ ಗ್ರಾಮಗಳಿಂದ ಶಾಲೆ-ಕಾಲೇಜುಗಳಿಗೆ ಹೋಗಿ ಬರಲು ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಈ ಹೆಣ್ಣುಮಕ್ಕಳ ಅನುಕೂಲಕ್ಕಾಗಿ ಶಿರೋಲಿ, ಜಾಂಬೋಟಿ ಮತ್ತು ಕಣಕುಂಬಿ ಗ್ರಾಮಗಳಲ್ಲಿ ಹಿಂದುಳಿದ ವರ್ಗಗಳ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?	ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕಿನ ಜಾಂಬೋಟಿ ಮತ್ತು ಶಿರೋಲಿ ಗ್ರಾಮಗಳಲ್ಲಿ ಮೆಟ್ರಿಕ್-ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿ ಆರ್ಥಿಕ ಇಲಾಖೆಯು ಅನುದಾನ ಲಭ್ಯತೆಯಿದ್ದಲ್ಲಿ ಮಾತ್ರ ಪ್ರಸ್ತಾವನೆ ಸಲ್ಲಿಸುವಂತೆ ಅಭಿಪ್ರಾಯಿಸಿರುತ್ತದೆ. ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನು ಆಧರಿಸಿರುತ್ತದೆ.

ಸಂಖ್ಯೆ:ಹಿಂವಕ 197 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1694

ಉತ್ತರಿಸಬೇಕಾದ ದಿನಾಂಕ : 16/03/2021.

ಸದಸ್ಯರ ಹೆಸರು : ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ)

ಉತ್ತರಿಸುವ ಸಚಿವರು : ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಗ್ರಾಮೀಣ ಭಾಗದ ಯುವಕರನ್ನು ದೇಸಿ ಕ್ರೀಡೆಯತ್ತ ಸೆಳೆಯಲು ಗ್ರಾಮೀಣ ಭಾಗದಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ಗ್ರಾಮೀಣ ಭಾಗದಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಪ್ರಾರಂಭ ಮಾಡುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗಿದೆ.
ಆ)	ಹಾಗಿದ್ದಲ್ಲಿ, ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಪ್ರಾರಂಭ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವೈಎಸ್‌ಡಿ-ಇಬಿಬಿ/40/2021.

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1788
2	ಸದಸ್ಯರ ಹೆಸರು	ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪರವಾನಗಿ ಪಡೆದು ಕಾರ್ಯ ನಿರ್ವಹಿಸುತ್ತಿರುವ ಭೂಮಾಪಕರು ಎಷ್ಟು; ಇವರಿಗೆ ಅತ್ಯಂತ ಕಡಿಮೆ ವೇತನ ನೀಡುತ್ತಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;(ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 2908 ಪರವಾನಗಿ ಭೂಮಾಪಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಪರವಾನಗಿ ಭೂಮಾಪಕರಿಗೆ ಸರ್ಕಾರದ ಆದೇಶ ಸಂಖ್ಯೆ ಕಂಇ 279 ಭೂದಾಸ 2011 ದಿನಾಂಕ 21-10-2013ರಲ್ಲಿ ಸೇವಾ ಶುಲ್ಕ ಪ್ರತಿ ಅರ್ಜಿಗೆ ಕನಿಷ್ಠ ರೂ. 800/- ಮತ್ತು ಪ್ರತಿ ಹೆಚ್ಚುವರಿ ಬ್ಲಾಕ್ ಗೆ ರೂ.150/- ಗಳನ್ನು ಪಾವತಿಸುವಂತೆ ಆದೇಶಿಸಲಾಗಿದೆ.
ಆ)	ಬಂದಿದ್ದಲ್ಲಿ, ಪರವಾನಗಿ ಭೂಮಾಪಕರ ವೇತನ ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ವೇತನ ಹೆಚ್ಚಳ ಮಾಡಲಾಗುವುದು;	ಪರವಾನಗಿ ಭೂಮಾಪಕರ ಸೇವಾ ಶುಲ್ಕ ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.
ಇ)	ಪರವಾನಗಿ ಭೂಮಾಪಕರನ್ನು ಖಾಯಂ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ, ಯಾವಾಗ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು)	ಪರವಾನಗಿ ಭೂಮಾಪಕರ ಸೇವೆಯನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಸಂಖ್ಯೆ: ಕಂಇ 38 ಎಸ್ಎಸ್ಸಿ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1795
ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ [ಇಂಡಿ]
ವಿಷಯ	:	ಸಹಾಯಧನ ನಿಡುವುದು
ಉತ್ತರಿಸಬೇಕಾದ ದಿನಾಂಕ	:	15/3/2021
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಬಡವರಿಗೆ ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಮೊದಲಾದ ಸಾಮಾಜಿಕ ಭದ್ರತಾ ಯೋಜನೆಗಳು ಸೇರಿದಂತೆ ಹಾಗೂ ಮೃತರಾದ ಬಡ ಕುಟುಂಬದವರಿಗೆ ಅಂತ್ಯಸಂಸ್ಕಾರಕ್ಕೆ ಸರ್ಕಾರದಿಂದ ಸಹಾಯಧನ ನೀಡುತ್ತಿರುವುದು ನಿಜವೇ:	ಸರ್ಕಾರವು ಬಡವರಿಗೆ ಅನೇಕ ಸಾಮಾಜಿಕ ಭದ್ರತಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ / *IFSC CODE / PIN CODE* ಮಾಹಿತಿಯನ್ನು ನಿಖರವಾಗಿ ನೀಡದೆ ಇರುವ ಕಾರಣ *NO SUCH ACCOUNT / INVALID BANK DETAILS* ಮತ್ತು *INVALID ADDRESS* ಕಾರಣದಿಂದ ಪಿಂಚಣಿ ಪಾವತಿಯಾಗದೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಗತ್ಯ ಮಾಹಿತಿ ಸಂಗ್ರಹಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಫಲಾನುಭವಿಗಳು ಅಗತ್ಯ ಮಾಹಿತಿ ನೀಡಿದಲ್ಲಿ ನ್ಯೂನತೆಯನ್ನು ಸರಿಪಡಿಸಿ ತಂತ್ರಾಂಶದಲ್ಲಿ ಮೇಲ್ಕಂಡ ನ್ಯೂನ್ಯತೆಗಳನ್ನು ಸರಿಪಡಿಸಿ ಪಿಂಚಣಿ ಪಾವತಿ ಚಾಲನೆಗೊಳಿಸಲು ತಹಸೀಲ್ದಾರ್‌ರರಿಗೆ ಅವಕಾಶ ಕಲ್ಪಿಸಲಾಗಿದ್ದು ತಹಸೀಲ್ದಾರ್‌ರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮ ವಹಿಸಲಾಗುತ್ತಿದೆ. ನಿಗಧಿತ ಸಮಯದಲ್ಲಿ ಪಿಂಚಣಿ ಸಂದಾಯ ಮಾಡಲಾಗುತ್ತಿದೆ
ಆ	ಹಾಗಿದ್ದಲ್ಲಿ, ಈ ಸಹಾಯಧನಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ :	
ಇ	ಬಂದಿದ್ದಲ್ಲಿ, ಕಳೆದ ಎಷ್ಟು ತಿಂಗಳಿನಿಂದ ಹಣ ಮಂಜೂರು ಮಾಡಿರುವುದಿಲ್ಲ : ಇದುವರೆಗೂ ಮಂಜೂರು ಮಾಡದಿರಲು ಕಾರಣಗಳೇನು [ಜಿಲ್ಲಾವಾರು ಪ್ರಕರಣವಾರು ವಿವರ ನೀಡುವುದು]	
ಈ	ಬಾಕಿ ಇರುವ ಪ್ರಕರಣಗಳಿಗೆ ಯಾವ ಕಾಲಾವಧಿಯೊಳಗೆ ಸಹಾಯಧನ ಮಂಜೂರು ಮಾಡಲಾಗುವುದು [ವಿವರ ನೀಡುವುದು]	

ಸಂಖ್ಯೆ : ಡಿಎಸ್‌ಎಸ್‌ಪಿ - ಎಲ್‌ಎಕ್ಯೂ 10/2021

[ಆರ್. ಅಶೋಕ],
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1797
ಸದಸ್ಯರ ಹೆಸರು : ಶ್ರೀ ಐಹೊಳೆ ಡಿ.ಮಹಾಲಿಂಗಪ್ಪ.
ಉತ್ತರಿಸುವ ದಿನಾಂಕ : 15-03-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ಮೇಖಳಿ ಗ್ರಾಮದಲ್ಲಿ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಬಂದಿದೆ.
ಆ)	ಈ ವಸತಿ ಶಾಲೆ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗಿರುವ ಜಮೀನನ್ನು ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ವಸತಿ ಶಾಲೆಯ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆ ರಾಯಭಾಗ್ ತಾಲ್ಲೂಕು, ಮೇಕಳಿ ಗ್ರಾಮದ ಸರ್ವೆ ನಂ:99 ರಲ್ಲಿ 26 ಎಕರೆ 28 ಗುಂಟೆ ಜಮೀನಿನ ಪೈಕಿ 10.00 ಎಕರೆ ಜಮೀನನ್ನು ಕಾಯ್ದಿರಿಸಲಾಗಿದೆ.
ಇ)	ಬಂದಿದ್ದಲ್ಲಿ, ಸದರಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?	ಅನುದಾನದ ಲಭ್ಯತೆ ಆಧಾರದ ಮೇಲೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಶಾಲಾ ಸಂಕೀರ್ಣ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು.
ಈ)	ಹಾಗಿದ್ದಲ್ಲಿ, ಪ್ರಸಕ್ತ ವರ್ಷದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿ ಪ್ರಾರಂಭಿಸಲಾಗುವುದೇ ?	
ಉ)	ಇಲ್ಲದಿದ್ದಲ್ಲಿ, ಈ ವಸತಿ ಶಾಲೆ ಕಟ್ಟಡ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ? (ವಿವರ ನೀಡುವುದು)	

ಸಂಖ್ಯೆ: ಸಕಇ 102 ಮೊದೇಶಾ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1) **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** 1799
2) **ಸದಸ್ಯರ ಹೆಸರು** ಐಹೊಳೆ ಡಿ.ಮಹಾಲಿಂಗಪ್ಪ (ರಾಯಭಾಗ)
3) **ಉತ್ತರಿಸಬೇಕಾದ ದಿನಾಂಕ** 15-03-2021
4) **ಉತ್ತರಿಸಬೇಕಾದ ಸಚಿವರು** ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ರಾಯಭಾಗ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಮೀನುಗಾರಿಕೆ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಅತ್ಯಮೂಲ್ಯ ನಿವೇಶನವನ್ನು ಮೀಸಲಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ರಾಯಭಾಗ ಪಟ್ಟಣದ ಚಿಂಚಲಿ ರಸ್ತೆಯಲ್ಲಿರುವ ಮೀನುಗಾರಿಕೆ ಇಲಾಖೆಯ ಕಚೇರಿ ಮತ್ತು 4 ಮೀನುಮರಿ ಪಾಲನಾ ಕೊಳಗಳು, ಒಂದು ತೆರೆದ ಭಾವಿ, ಒಂದು ನೀರು ಸಂಗ್ರಹಣಾ ಕೊಳ ಮತ್ತು ಒಂದು ಒವರ್ ಹೆಡ್ ಟ್ಯಾಂಕ್ ಇದ್ದು, ಈ ಜಾಗದಲ್ಲಿ ಗ್ರಂಥಾಲಯದ ಪಕ್ಕದಲ್ಲಿ 2 ಮೀನುಮರಿ ಪಾಲನಾ ಕೊಳಗಳನ್ನು ಸಂಪೂರ್ಣವಾಗಿ ನೆಲಸಮ ಮಾಡಿ ಮತ್ತು ಒಂದು ನೀರು ಸಂಗ್ರಹಣಾ ಕೊಳವನ್ನು ಭಾಗಶಃ ನೆಲ ಸಮ ಮಾಡಿ ಚಿಂಚಲಿ ರಸ್ತೆ ಮತ್ತು ಹಾರೋಗೇರಿ ರಸ್ತೆಗಳನ್ನು ಜೋಡಿಸಲು ಒಂದು ಕಚ್ಚಾ ರಸ್ತೆಯನ್ನು ಪಟ್ಟಣ ಪಂಚಾಯತ್ ದಿಂದ ನಿರ್ಮಿಸಲಾಗಿರುತ್ತದೆ. ಪಟ್ಟಣ ಪಂಚಾಯಿತಿ ಆಸ್ತಿ ಸಂಖ್ಯೆ: ಟಿಪಿಸಿನಂ.2074/2667 ರಲ್ಲಿ ಮೀನುಗಾರಿಕೆ ಇಲಾಖೆಯ ಆಸ್ತಿಯ ವಿಸ್ತೀರ್ಣವು ಕೇವಲ 20 * 25 (ಅರ್.ಸಿ.ಸಿ. ಒಂದು ರೂಮ್ ಮತ್ತು ಕೆಂಪು ಹಂಚು ಒಂದು ರೂಮ್) ಮಾತ್ರ ತೋರಿಸಲಾಗಿದೆ.
ಆ)	ಬಂದಿದ್ದಲ್ಲಿ, ಸದರಿ ನಿವೇಶನಕ್ಕೆ ಖಾಸಗೀ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಸದಾಗಿ ರಾಯಭಾಗ ಪಟ್ಟಣ ಪಂಚಾಯತ್ ದಿಂದ ನಿರ್ಮಿಸಲಾದ ಸದರಿ ಕಚ್ಚಾ ರಸ್ತೆಯಲ್ಲಿ ಮೀನುಮರಿ ಪಾಲನಾ ಕೊಳಗಳಿದ್ದ ಜಾಗದಲ್ಲಿ ಖಾಸಗಿಯವರು ಒತ್ತುವರಿ ಮಾಡಿ ಗೂಡಂಗಡಿಗಳನ್ನು ಇಟ್ಟಿರುತ್ತಾರೆ.
ಇ)	ಬಂದಿದ್ದಲ್ಲಿ, ಸರ್ಕಾರ ಈ ಮೀನುಗಾರಿಕೆ ಕಛೇರಿಯ ಕಟ್ಟಡದ ನಿವೇಶನವನ್ನು ವಶಕ್ಕೆ ಪಡೆದುಕೊಂಡು, ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಸೃಷ್ಟಿಸಿರುವ ನಕಲಿ ದಾಖಲೆಗಳನ್ನು ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳುವುದೇ;	ಈಗಾಗಲೇ ಕಂದಾಯ ಇಲಾಖೆಯಿಂದ ಸಮಗ್ರ ವರದಿಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಇಲಾಖೆಗೆ ನಿಗದಿಪಡಿಸಿದ ನಿವೇಶನ (ಜಾಗ) ಇದ್ದಲ್ಲಿ ಒತ್ತುವರಿಯಾದ ಜಾಗವನ್ನು ಹಿಂಪಡೆಯಲಾಗುವುದು.
ಈ)	ಹಾಗಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರ್ಕಾರ ಕಾನೂನಾತ್ಮಕ ಕಠಿಣ ಶಿಸ್ತು ಕ್ರಮಗಳನ್ನು ಜರುಗಿಸು ವುದೇ; ಇಲ್ಲವಾದಲ್ಲಿ, ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)	ರಾಯಭಾಗ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮೀನುಗಾರಿಕೆ ಇಲಾಖೆಯ ಆಸ್ತಿಯ ಸರಿಯಾದ ದಾಖಲೆಗಳು ಮೀನುಗಾರಿಕೆ ಇಲಾಖೆಯ ತಾಲೂಕು ಮತ್ತು ಜಿಲ್ಲಾ ಕಚೇರಿಗಳಲ್ಲಿ ಮತ್ತು ಪಟ್ಟಣ ಪಂಚಾಯತ್ ನಲ್ಲಿ ಲಭ್ಯವಿರದ ಕಾರಣಗಳಿಂದ ಅವುಗಳನ್ನು ಕಂದಾಯ ಇಲಾಖೆಯಿಂದ ಪಡೆಯಲು ಪತ್ರ ವ್ಯವಹರಿಸಲಾಗಿದ್ದು, ಸದರಿ ದಾಖಲೆಗಳನ್ನು ಪಡೆದ ನಂತರ ಸೂಕ್ತ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲಾಗುವುದು.

ಸಂಖ್ಯೆ: ಪಸಂಮೀ ಇ-85 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1951
ಉತ್ತರಿಸುವ ದಿನಾಂಕ	15.03.2021
ಉತ್ತರಿಸುವ ಸಚಿವರು	ವಸತಿ ಸಚಿವರು

ಅನು ಕ್ರಮ	ಪ್ರಶ್ನೆ	ಉತ್ತರ
ಅ	2020-21ನೇ ಸಾಲಿನಲ್ಲಿ ಪುತ್ತೂರು ವಿಧಾನ ಸಭಾ ಕ್ಷೇತ್ರದ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಸತಿ ಯೋಜನೆಯಡಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)	2020-21ನೇ ಸಾಲಿನಲ್ಲಿ ಪುತ್ತೂರು ವಿಧಾನ ಸಭಾ ಕ್ಷೇತ್ರದ ನಗರಸಭೆ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ 108 ಮನೆಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಇದು ಕೇಂದ್ರ ಸರ್ಕಾರದಿಂದ ಅನುಮೋದನೆಯಾಗುವುದು ಬಾಕಿ ಇರುತ್ತದೆ.
ಆ	2020-2021ನೇ ಸಾಲಿಗೆ ಮನೆಗಳನ್ನು ಮಂಜೂರು ಮಾಡಲು ಸರ್ಕಾರ ಯಾವ ತೀರ್ಮಾನ ಕೈಗೊಂಡಿದೆ ;	ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿ ಪ್ರತಿ ಫಲಾನುಭವಿಗೆ ಕೇಂದ್ರ ಸರ್ಕಾರದ ಪಾಲಿನ ಮೊತ್ತ ರೂ. 1.50 ಲಕ್ಷ ಪಡೆಯಲು ಸ್ಥಳೀಯ ಸಂಸ್ಥೆ ಸಲ್ಲಿಸುವ ಎಲ್ಲಾ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲಾಗುವುದು. ಸದರಿ ಯೋಜನೆಯಡಿ ಯಾವುದೇ ಭೌತಿಕ ಗುರಿ / ಮಿತಿ ಇರುವುದಿಲ್ಲ.
ಇ	ನಗರ ಪ್ರದೇಶದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನರಿರುವ ಸ್ಥಳಾವಕಾಶ ಕಡಿಮೆ ಇರುವಂತಹ ಪ್ರದೇಶದಲ್ಲಿ ಜಿ ಪ್ಲಸ್ ಮಾದರಿಯಲ್ಲಿ ಬಹು ವಸತಿ ಸಮುಚ್ಛಯಗಳನ್ನು ನಿರ್ಮಾಣ ಮಾಡವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಸಂಪೂರ್ಣ ಮಾಹಿತಿ ಒದಗಿಸುವುದು)	ಪುತ್ತೂರು ನಗರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರಿರುವ ಸ್ಥಳಾವಕಾಶ ಕಡಿಮೆ ಇರುವಂತಹ ಪ್ರದೇಶದಲ್ಲಿ ಜಿ+ ಮಾದರಿಯಲ್ಲಿ ಬಹು ವಸತಿ ಸಮುಚ್ಛಯಗಳನ್ನು ನಿರ್ಮಾಣ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

[ಸಂಖ್ಯೆ: ವಇ 60 ಹೆಚ್‌ಎಫ್‌ಎ 2021]

(ವಿ. ಸೋಮಣ್ಣ)
ವಸತಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :: 1999
ಸದಸ್ಯರ ಹೆಸರು :: ಶ್ರೀ ಗೌರಿಶಂಕರ್ ಡಿ.ಸಿ (ತುಮಕೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ :: 15.03.2021
ಉತ್ತರಿಸುವ ಸಚಿವರು :: ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬೆಳ್ಳಾವಿ ಹೋಬಳಿ ಸೋರೆಕುಂಟೆ ಗ್ರಾಮದ ಸರ್ವೇ ನಂ.41ರಲ್ಲಿ ಕಾನೂನು ಬಾಹಿರವಾಗಿ ಬಗರ್ ಹುಕುಂ ಸಾಗುವಳಿ ಚೀಟಿಯನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತಪ್ಪಿತಸ್ಥರ ವಿರುದ್ದ ಶಿಸ್ತು ಕ್ರಮ ಕೈಗೊಳ್ಳಲು ಇರುವ ತೊಂದರೆಗಳೇನು;	–ಬಂದಿದೆ– ಸದರಿ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಸರ್ಕಾರದ ಹಂತದಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುತ್ತಿದ್ದು, ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ಸೇವಾ ವಿವರದ ಮಾಹಿತಿಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿ, ತುಮಕೂರು ಇವರಿಗೆ ಪತ್ರ ಬರೆಯಲಾಗಿದ್ದು, ಮಾಹಿತಿ ನಿರೀಕ್ಷಣೆಯಲ್ಲಿದೆ.
ಆ)	ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ತಪ್ಪಿತಸ್ಥರ ವಿರುದ್ದ ಶಿಸ್ತು ಕ್ರಮ ಜರುಗಿಸಲು ವರದಿ ಸಲ್ಲಿಸಿರುತ್ತಾರೆಯೇ; ವರದಿ ಸಲ್ಲಿಸಿದ್ದಲ್ಲಿ, ಸರ್ಕಾರ ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು;	ಜಿಲ್ಲಾಧಿಕಾರಿ, ತುಮಕೂರು ಇವರು ದಿ:05.07.2019 ರಂದು ಈ ಪ್ರಕರಣದಲ್ಲಿ ಶ್ರೀ ಕೆ.ಆರ್.ನಾಗರಾಜ್, ಹಿಂದಿನ ತಹಶೀಲ್ದಾರ್, ಇವರ ವಿರುದ್ದ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ತನಿಖಾ ತಂಡದ ವರದಿಯ ಆಧಾರದ ಮೇಲೆ ಅಧಿಕಾರಿ/ನೌಕರರ ವಿರುದ್ದ ಶಿಸ್ತು ಕ್ರಮ ಜರುಗಿಸಲು ಅವರುಗಳ ಸೇವಾ ವಿವರವನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ, ತುಮಕೂರು ಇವರಿಗೆ ಪತ್ರ ಬರೆಯಲಾಗಿದ್ದು, ಮಾಹಿತಿ ನಿರೀಕ್ಷಣೆಯಲ್ಲಿದೆ.
ಇ)	ಜಿಲ್ಲಾಧಿಕಾರಿಗಳು ಶಿಸ್ತು ಕ್ರಮ ಕೈಗೊಳ್ಳಲು ವರದಿ ನೀಡಿ ದಿನಾಂಕ:05.07.2019 ರಂದು ಒಂದೂವರೆ ವರ್ಷ (1, 1/2) ಕಳೆದರೂ ಶಿಸ್ತು ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸರ್ಕಾರ ಕ್ರಮಕೈಗೊಳ್ಳುವುದು?	ಜಿಲ್ಲಾಧಿಕಾರಿ, ತುಮಕೂರು ಇವರ ದಿ:05.07.2019 ರ ವರದಿಯ ಆಧಾರದ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಕಡತ ಸಂ: ಆರ್‌ಡಿ 90 ಎಡಿಇ 2019 ರಲ್ಲಿ ಇಲಾಖಾ ವಿಚಾರಣೆ ನಡೆಸಲು ಉದ್ದೇಶಿಸಿದ್ದು, ಸೇವಾ ವಿವರದ ಮಾಹಿತಿಯನ್ನು ಜಿಲ್ಲಾಧಿಕಾರಿ, ತುಮಕೂರು ಇವರಿಂದ ಸ್ವೀಕೃತವಾದ ಕೂಡಲೇ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ:ಕಂಇ 13 ಎಲ್‌ಜಿಟಿ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2001
ಸದಸ್ಯರ ಹೆಸರು	ಡಾ|| ಅಜಯ್ ಧರ್ಮಸಿಂಗ್ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಾಲಿ ಇರುವ ದೊಡ್ಡ ಜಿಲ್ಲೆಗಳನ್ನು ಹೊಸ ಜಿಲ್ಲೆಗಳಾಗಿ ವಿಭಜನೆ ಮಾಡುವಂತೆ ಸರ್ಕಾರದ ಮುಂದೆ ಬೇಡಿಕೆಗಳೇನಾದರೂ ಇದೆಯೇ;	ಹೌದು
ಆ)	ಹಾಗಿದ್ದಲ್ಲಿ, ಯಾವ ಜಿಲ್ಲೆಗಳನ್ನು ವಿಭಜಿಸಿ ಹೊಸ ಜಿಲ್ಲೆ ರಚನೆ ಮಾಡುವಂತೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ; (ವಿವರ ನೀಡುವುದು)	ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ತುಮಕೂರು ಜಿಲ್ಲೆಯ, ತಿಪಟೂರು ಮತ್ತು ಮಧುಗಿರಿ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಹಾಗೂ ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕುಗಳನ್ನು ಹೊಸ ಜಿಲ್ಲೆಗಳನ್ನಾಗಿ ರಚಿಸುವಂತೆ ಕೋರಿಕೆಗಳು ಸ್ವೀಕೃತವಾಗಿರುತ್ತವೆ.
ಇ)	ಪ್ರಸ್ತುತವಿರುವ ಕೆಲವು ದೊಡ್ಡ ಜಿಲ್ಲೆಗಳನ್ನ ಅಭಿವೃದ್ಧಿಯ ದೃಷ್ಟಿಯಿಂದ ವಿಭಜಿಸಲು ಸರ್ಕಾರಕ್ಕಿರುವ ತೊಂದರೆಗಳೇನು?	ಯಾವುದೇ ಒಂದು ಪ್ರದೇಶ/ತಾಲ್ಲೂಕನ್ನು ಜಿಲ್ಲೆಯನ್ನಾಗಿ ರಚಿಸುವ ಸಂದರ್ಭದಲ್ಲಿ ಅಲ್ಲಿನ ಭೌಗೋಳಿಕ ಸನ್ನಿವೇಶ, ಜನಸಂಖ್ಯೆ, ಹಿಂದುಳಿದಿರುವಿಕೆ, ಜಿಲ್ಲೆಗಳ ರಚನೆಯಿಂದಾಗುವ ಅನುಕೂಲ, ಸಾರ್ವಜನಿಕ ಆಶೋತ್ತರಗಳಿಗೆ ಸ್ಪಂದನೆ, ತಾಲ್ಲೂಕು ಕೇಂದ್ರ ಮತ್ತು ಜಿಲ್ಲಾ ಕೇಂದ್ರಗಳಿಗಿರುವ ದೂರ ಸೇರಿದಂತೆ ಸಾರ್ವಜನಿಕ ಹಿತಾಸಕ್ತಿ ಮತ್ತು ಆಡಳಿತಾತ್ಮಕ ಆಡಳಿತಾತ್ಮಕ ಅಂಶಗಳನ್ನು ಪರಾಮರ್ಶಿಸಲಾಗುತ್ತದೆ. ಇದರ ಜೊತೆಗೆ, ನೂತನ ಜಿಲ್ಲೆಗಳನ್ನು ರಚಿಸುವ ವಿಷಯವು ಸರ್ಕಾರದ ನೀತಿಗೆ ಸಂಬಂಧಿಸಿದ್ದಾಗಿದೆ. ಯಾವುದೇ ಒಂದು ಪಟ್ಟಣ/ ಪ್ರದೇಶವನ್ನು ಜಿಲ್ಲೆಯನ್ನಾಗಿ ರಚಿಸಬೇಕಾದರೆ ಭೌಗೋಳಿಕ ಮತ್ತು ಆಡಳಿತಾತ್ಮಕ ಅಗತ್ಯತೆಗಳ ಜೊತೆಗೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಅದರಂತೆ ಹೊಸ ಜಿಲ್ಲೆಗಳನ್ನು ರಚಿಸುವ ಪ್ರಸ್ತಾವನೆಗಳು ಹಣಕಾಸಿನ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹಣಕಾಸಿನ ಇತಿಮಿತಿಗಳನ್ನು ಒಳಗೊಂಡಿರುತ್ತದೆ. ಇಂತಹ ಅಂಶಗಳನ್ನು ನೂತನ ಜಿಲ್ಲೆಗಳನ್ನು ರಚಿಸುವ ಸಂದರ್ಭದಲ್ಲಿ ಪರಿಶೀಲಿಸ ಲಾಗುತ್ತದೆ.

ಸಂಖ್ಯೆ: ಕಂಇ 21 ಎಲ್ಆರ್‌ಡಿ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	2004
ಸದಸ್ಯರ ಹೆಸರು	:	**ಡಾ|| ಅಜಯ್ ಧರ್ಮಸಿಂಗ್**
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	**ಸಮಾಜ ಕಲ್ಯಾಣ ಸಚಿವರು**

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಎಷ್ಟು ವಸತಿ ಶಾಲೆಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ; (ವಿವರ ನೀಡುವುದು)	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ 149 ವಸತಿ ಶಾಲೆಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ. ವಿವರಗಳನ್ನು ಅನುಬಂಧ-01 ರಲ್ಲಿ ನೀಡಿದೆ.
ಆ)	ಸದರಿ ಶಾಲೆಗಳ ಪೈಕಿ ಕಾಮಗಾರಿ ಪೂರ್ಣಗೊಳಿಸಲಾದ ಶಾಲೆಗಳೆಷ್ಟು; (ವಿವರ ನೀಡುವುದು)	ಸಮಾಜ ಕಲ್ಯಾಣ ಇಲಾಖೆ/ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 57 ವಸತಿ ಶಾಲಾ/ಕಾಲೇಜು ಸಂಕೀರ್ಣ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ವಿವರಗಳನ್ನು ಅನುಬಂಧ-02 ರಲ್ಲಿ ನೀಡಿದೆ.
ಇ)	ಇನ್ನೂ ಎಷ್ಟು ಶಾಲೆಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ; ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ನಿರ್ಧರಿಸಿದೆ; (ವಿವರ ನೀಡುವುದು)	ಸಮಾಜ ಕಲ್ಯಾಣ ಇಲಾಖೆ/ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 92 ವಸತಿ ಶಾಲೆ/ ಕಾಲೇಜುಗಳ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಪೂರ್ಣಗೊಳಿಸಲು ಬೇಕಾಗಬಹುದಾದ ಕಾಲಮಿತಿ ವಿವರಗಳನ್ನು ಅನುಬಂಧ-03 ರಲ್ಲಿ ನೀಡಿದೆ.
ಈ)	ಸದರಿ ಶಾಲೆಗಳ ಪೈಕಿ ಜೇವರ್ಗಿ ಮತಕ್ಷೇತ್ರದಲ್ಲಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಶಾಲೆಗಳೆಷ್ಟು? (ವಿವರ ನೀಡುವುದು)	ಸದರಿ ಶಾಲೆಗಳ ಪೈಕಿ ಜೇವರ್ಗಿ ಮತಕ್ಷೇತ್ರಕ್ಕೆ 03 ವಸತಿ ಶಾಲೆಗಳು ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿವೆ. ವಿವರಗಳನ್ನು ಅನುಬಂಧ-04 ರಲ್ಲಿ ನೀಡಿದೆ.

ಸಂಖ್ಯೆ: ಸಕಇ 104 ಮೊದೇಶಾ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1)	**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ**	2005
2)	**ಸದಸ್ಯರ ಹೆಸರು**	ಶ್ರೀ ಸುರೇಶ್ ಗೌಡ (ನಾಗಮಂಗಲ)
3)	**ಉತ್ತರಿಸಬೇಕಾದ ದಿನಾಂಕ**	15-03-2021
4)	**ಉತ್ತರಿಸಬೇಕಾದ ಸಚಿವರು**	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ನಾಗಮಂಗಲ ಮತಕ್ಷೇತ್ರಕ್ಕೆ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; ಈ ಪೈಕಿ ಅರ್ಹ ಫಲಾನುಭವಿಗಳಿಗೆ ಎಷ್ಟು ಮನೆಗಳನ್ನ ಹಂಚಲಾಗಿದೆ; (ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ನಾಗಮಂಗಲ ಮತಕ್ಷೇತ್ರಕ್ಕೆ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ 25 ಮನೆಗಳು ಮಂಜೂರಾಗಿದ್ದು, ಯಾವುದೇ ಫಲಾನುಭವಿಗಳಿಗೆ ಮನೆಗಳು ಹಂಚಿಕೆಯಾಗಿರುವುದಿಲ್ಲ. ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಅರ್ಹ ಮೀನುಗಾರ ಫಲಾನುಭವಿಗಳು ಇದ್ದರೂ ಸಹ ಅಂತಹ ಕ್ಷೇತ್ರಗಳಿಗೆ ಮನೆಗಳು ಹಂಚಿಕೆಯಾಗದ ಬಗ್ಗೆ ಪುನರ್ ಪರಿಶೀಲಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ನಾಗಮಂಗಲ ಮತ್ತು ಇನ್ನುಳಿದ ಮತಕ್ಷೇತ್ರಕ್ಕೆ ಹಂಚಿಕೆಯಾದ ಮನೆಗಳನ್ನು ರದ್ದುಪಡಿಸಲಾಗಿದೆ.
ಆ)	ಮಂಜೂರಾದ ಮನೆಗಳನ್ನು ವಿನಾಕಾರಣ ಹಿಂಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಅರ್ಹ ಮೀನುಗಾರ ಫಲಾನುಭವಿಗಳು ಇದ್ದರೂ ಸಹ ಅಂತಹ ಕ್ಷೇತ್ರಗಳಿಗೆ ಮನೆಗಳು ಹಂಚಿಕೆಯಾಗದ ಬಗ್ಗೆ ಪುನರ್ ಪರಿಶೀಲಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ಹಂಚಿಕೆಯಾದ ಮನೆಗಳ ಆದೇಶವನ್ನು ತಡೆಹಿಡಿದು ಬೇಡಿಕೆಗನುಗುಣವಾಗಿ ಮರುಹಂಚಿಕೆಗೆ ಕ್ರಮವಹಿಸಲಾಗಿದೆ.
ಇ)	ಬಂದಿದ್ದಲ್ಲಿ, ಮನೆಗಳನ್ನು ಹಿಂಪಡೆಯಲು ಕಾರಣವೇನು? (ಮಾಹಿತಿ ನೀಡುವುದು)	

ಸಂಖ್ಯೆ: ಪಸಂಮೀ ಇ-86 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2008**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	2020-21 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಲ ನಿವಾಸಿ ಜನಾಂಗವಾದ ಕೊರಗ ಸಮುದಾಯದವರಿಗೆ ಮನೆ ನಿರ್ಮಾಣಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;	ಮೂಲ ನಿವಾಸಿಗಳಾದ ಜೇನು ಕುರುಬ ಹಾಗೂ ಕೊರಗ ಸಮುದಾಯದವರ 2732 ಮನೆಗಳ ನಿರ್ಮಾಣಕ್ಕೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ನವದೆಹಲಿ ಇವರಿಂದ ರೂ.21.31 ಕೋಟಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 26.50 ಕೋಟಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದಿಂದ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆಯಡಿ ರೂ.47.81 ಕೋಟಿ ನಿಗಧಿಪಡಿಸಲಾಗಿದೆ. 2732 ಮನೆಗಳ ಪೈಕಿ 112 ಮನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಮೂಲ ನಿವಾಸಿ ಜನಾಂಗದವರಾದ ಕೊರಗ ಸಮುದಾಯದವರಿಗೆ ನಿಗಧಿಪಡಿಸಲಾಗಿದೆ. ಈ ಯೋಜನೆಗೆ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ರೂ.47.81 ಕೋಟಿಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
(ಆ)	ಬೇಡಿಕೆಗನುಗುಣವಾಗಿ ಹೆಚ್ಚುವರಿ ಮನೆ ನಿರ್ಮಾಣಗೊಳಿಸಲು ಅನುದಾನ ಬಿಡುಗಡೆ ಮಾಡಲು ಕ್ರಮದ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಸಂಪೂರ್ಣ ಮಾಹಿತಿ ಒದಗಿಸುವುದು)	

ಸಂಖ್ಯೆ :ವಇ 110 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

1	**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ**	2013
2	**ಸದಸ್ಯರ ಹೆಸರು**	ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
3	**ಉತ್ತರಿಸಬೇಕಾದ ದಿನಾಂಕ**	15-03-2021
4	**ಉತ್ತರಿಸಬೇಕಾದವರು**	ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಗಂಗೊಳ್ಳಿ-ಕೋಡಿ ಅಳಿವೆ ಪ್ರದೇಶದಲ್ಲಿ ತುಂಬಿಕೊಂಡಿರುವ ಹೂಳು ತೆಗೆಯದೇ ಇರುವುದರಿಂದ ಮೀನುಗಾರಿಕೆ ಯಾಂತ್ರೀಕೃತ ಬೋಟ್ ಮತ್ತು ನಾಡದೋಣಿಗಳು ಬಂದರು ಒಳಗೆ ಬರಲು ಹೊರಗೆ ಹೋಗಲು ಆಗದೇ ಅನಾಹುತಗಳ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಅಪಾಯ ಸಂಭವಿಸುವ ಮೊದಲೇ ಹೂಳೆತ್ತಿ ಸಮಸ್ಯೆ ನಿವಾರಿಸುವಲ್ಲಿ ಸರ್ಕಾರದ ನಿಲುವೇನು? (ವಿವರ ನೀಡುವುದು).	ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ 2021-22ನೇ ಸಾಲಿನಲ್ಲಿ ಹೂಳೆತ್ತುವ ಕಾಮಗಾರಿಗಳಿಗೆ ಪ್ರಸ್ತಾಪಿಸಿದ್ದು, ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರಾದಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ಪಸಂಮೀ ಇ-83 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

1)	**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ**	2014
2)	**ಸದಸ್ಯರ ಹೆಸರು**	ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
3)	**ಉತ್ತರಿಸಬೇಕಾದ ದಿನಾಂಕ**	15-03-2021
4)	**ಉತ್ತರಿಸಬೇಕಾದ ಸಚಿವರು**	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಬಡ ಮೀನುಗಾರರಿಗೆ ನೀಡಲಾಗುತ್ತಿರುವ ಸಹಾಯಧನದ ರೂ.1.20 ಲಕ್ಷ ಮೊತ್ತವನ್ನು ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ;	ಇಲ್ಲ.
ಆ)	ಪ್ರಸ್ತುತ ಮನೆ ಕಟ್ಟುವ ಕಚ್ಚಾ ವಸ್ತುಗಳ ಬೆಲೆ ವಿಪರೀತ ಹೆಚ್ಚಳವಾಗಿರುವುದರಿಂದ ಪ್ರಸ್ತುತ ನೀಡಲಾಗುತ್ತಿರುವ ಸಹಾಯಧನದ ಮೊಬಲಗಿನಲ್ಲಿ ಬಡವರು ಮನೆ ಕಟ್ಟಿಕೊಳ್ಳಲು ಸಾಧ್ಯವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಇ)	ಹಾಗಿದ್ದಲ್ಲಿ, ಸದರಿ ಸಹಾಯಧನವನ್ನು ರೂ.3.00 ಲಕ್ಷದವರೆಗೆ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಸಹಾಯಧನವನ್ನು ರೂ.3.00 ಲಕ್ಷದವರೆಗೆ ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: ಪಸಂಮೀ ಇ-87 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2109
ಸದಸ್ಯರ ಹೆಸರು	:	ಶ್ರೀ.ಗಣೇಶ್.ಜೆ.ಎನ್ (ಕಂಪ್ಲಿ)
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಕಂಪ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಮಸಾಗರ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಸ್ಥಳಾಂತರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ;	ಹೌದು.
ಆ)	ಹಾಗಿದ್ದಲ್ಲಿ, ಸ್ಥಳಾಂತರ ಮಾಡಲು ಕಾರಣಗಳೇನು; (ಪೂರ್ಣ ಮಾಹಿತಿ ನೀಡುವುದು)	ರಾಮುಸಾಗರದಲ್ಲಿ Red dane project ಯೋಜನೆಯಡಿ ಈ ಹಿಂದೆ ಉಪನಿರ್ದೇಶಕರು ಜಾನುವಾರು ತಳಿ ಸಂವರ್ಧನ ತರಬೇತಿ ಕೇಂದ್ರ ಮುನಿರಾಬಾದ್ ರವರ ಅಧೀನದಲ್ಲಿ ಕೃತಕ ಗರ್ಭಧಾರಣಾ ಕೇಂದ್ರವು ಕಾರ್ಯನಿರ್ವಹಿಸುತ್ತಿತ್ತು, Red dane project ಸ್ಥಗಿತಗೊಂಡ (windup) ಕಾರಣ ಇಲಾಖಾ ಪುನರ್ ರಚನೆಯ ಆದೇಶದಲ್ಲಿ ಜಾನುವಾರು ಸಂವರ್ಧನಾ ತರಬೇತಿ ಕೇಂದ್ರ, ಮುನಿರಾಬಾದ್‌ನಲ್ಲಿನ 12 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳ ಪೈಕಿ 02 ಹುದ್ದೆಗಳನ್ನು ಮಾತ್ರ ಮಂಜೂರು ಮಾಡಿ ಆದೇಶಿಸಲಾಗಿತ್ತು. ಈ ಹಿನ್ನೆಲೆಯಲ್ಲಿ 10 ಜನ ನೌಕರರನ್ನು ಸರ್ಕಾರದ ಆದೇಶದ ಸಂಖ್ಯೆ ಪಸಂಮೀ 175 ಪಸಸೇ 2013 ದಿನಾಂಕ:01.03.2014 ರ ಪ್ರಕಾರ ಹುದ್ದೆಗಳೊಂದಿಗೆ ಬೇರೆ ಕಡೆ ಸ್ಥಳಾಂತರ ಮಾಡಲಾಗಿದೆ.

ಸಂ: ಪಸಂಮೀ ಇ-29 ಪಸಸೇ 2021

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
9ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2110
ಮಾನ್ಯ ಸದಸ್ಯರ ಹೆಸರು	:	ಶ್ರೀ. ನರೇಂದ್ರ ಆರ್. (ಹನೂರು)
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳಗಳಾದ ಮಲೆಮಹದೇಶ್ವರ ಬೆಟ್ಟ ಹಾಗೂ ಚಿಕ್ಕಲೂರು ಧಾರ್ಮಿಕ ಕ್ಷೇತ್ರಕ್ಕೆ ಸತ್ತೇಗಾಲ ಗ್ರಾಮದಿಂದ ಸಂಪರ್ಕ ಕಲ್ಪಿಸುವ ಉಗನೀಯ ಹಾಗೂ ಪಾಳ್ಯ ಮಾರ್ಗದ ರಸ್ತೆಯು ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿಗೆ ಸಂಬಂಧಿಸಿದಂತೆ ಪಾಳ್ಯ ಗ್ರಾಮದ ಮೂಲಕ ಹಾದು ಹೋಗುವ ನರೀಪುರದಿಂದ ಮತ್ತೀಪುರ ಕ್ರಾಸ್‌ಗೆ ಸಂಪರ್ಕಿಸುವ ಜಿಲ್ಲಾ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿರುತ್ತದೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-4 (ಘಟ್ಟ-1) ರಡಿ ಪ್ಯಾಕೇಜ್ 344 (ಬಿ) ರಲ್ಲಿ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ನರಿಪುರದಿಂದ ಪಾಳ್ಯ ಮಾರ್ಗವಾಗಿ ಮತ್ತಿಪುರ ಕ್ರಾಸ್ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 0.27 ಕಿ.ಮೀ ರಿಂದ ಸರಪಳಿ 5.53 ಕಿ.ಮೀ ಹಾಗೂ ಸರಪಳಿ 9.70 ಕಿ.ಮೀ ರಿಂದ ಸರಪಳಿ 10.00 ಕಿ.ಮೀ. ವರೆಗೆ (ಆಯ್ದಭಾಗಗಳಲ್ಲಿ) ಒಟ್ಟು 5.53 ಕಿ.ಮೀ ರಸ್ತೆಯನ್ನು ರೂ 526.38 ಲಕ್ಷ ಮೊತ್ತದಲ್ಲಿ ಅಭಿವೃದಿಪಡಿಸಲು ಯೋಜಿಸಲಾಗಿರುತ್ತದೆ. ಕಾಮಗಾರಿಯು ಪ್ರಗತಿಯಲ್ಲಿದ್ದು ಫೆಬ್ರವರಿ ಅಂತ್ಯಕ್ಕೆ 1.52 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಸಂಖ್ಯೆ. ಲೋಇ E-97 ಇಎಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಡಾ: ರಂಗನಾಥ್ ಹೆಚ್.ಡಿ (ಕುಣಿಗಲ್)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2020**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕುಣಿಗಲ್ ವಿಧಾನ ಸಭಾ ಕ್ಷೇತ್ರವು ಗ್ರಾಮಾಂತರ ಪ್ರದೇಶಗಳಿಂದ ಕೂಡಿದ್ದು, ಬಡ ರೈತ ಕುಟುಂಬಗಳು ವಾಸಿಸುವ ಪ್ರದೇಶವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ;	ಕುಣಿಗಲ್ ವಿಧಾನಸಭಾ ಕ್ಷೇತ್ರವು ಒಳಗೊಂಡಂತೆ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಬಡತನ ರೇಖೆಗಿಂತ ಕೆಳಗಿರುವ ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಒದಗಿಸಲು ಸರಕಾರವು ಗ್ರಾಮೀಣ ಪ್ರದೇಶದಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1. ಬಸವ ವಸತಿ ಯೋಜನೆ 2. ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ) 3. ದೇವರಾಜು ಅರಸು ಯೋಜನೆ (ಗ್ರಾಮೀಣ) 4. ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) ಕುಣಿಗಲ್ ವಿಧಾನ ಸಭಾ ಕ್ಷೇತ್ರಕ್ಕೆ 2017-18 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಗಳಡಿ ಒಟ್ಟು 2862 ಮನೆಗಳನ್ನು ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಲಾಗಿರುತ್ತದೆ. ಈ ತಾಲ್ಲೂಕಿನ ಕಡು ಬಡವರಿಗೆ 2020-21 ನೇ ಸಾಲಿಗೆ ಕೇಂದ್ರ ಸರಕಾರದ ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) ಯಡಿ ಪ್ರತಿ ಗ್ರಾಮ ಪಂಚಾಯ್ತಿಗೆ 20 ಮನೆಗಳಂತೆ ತಾಲ್ಲೂಕಿನ ಒಟ್ಟು 36 ಗ್ರಾಮ ಪಂಚಾಯ್ತಿಗಳಿಗೆ ಒಟ್ಟಾರೆ 720 ಮನೆಗಳ ಗುರಿ ನಿಗದಿಪಡಿಸಲಾಗಿದೆ. ದಿನಾಂಕ:09.11.2020 ರಂದು ಸುತ್ತೋಲೆ ಹೊರಡಿಸಲಾಗಿದ್ದು, ಮಾರ್ಗಸೂಚಿಗಳನ್ವಯ ಫಲಾನುಭವಿಗಳನ್ನು ಆಯ್ಕೆ ಮಾಡಿ ಪಟ್ಟಿ ಕಳುಹಿಸಿಕೊಡಲು ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ಹಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಇದಲ್ಲದೇ ರಾಜ್ಯ ಸರಕಾರದ ವಿವಿಧ ವಸತಿ ಯೋಜನೆಗಳಡಿ ಸರ್ಕಾರವು ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನಕ್ಕೆ ಅನುಗುಣವಾಗಿ ವಸತಿ ರಹಿತರಿಗೆ ಮುಂದಿನ ದಿನಗಳಲ್ಲಿ ಆದ್ಯತೆ ಮೇರೆಗೆ ಮನೆಗಳನ್ನು ಮಂಜೂರು ಮಾಡಲಾಗುವುದು.
(ಆ)	ಹಾಗಿದ್ದಲ್ಲಿ, ಸರ್ಕಾರವು ಬಡವರಿಗೆ ಯಾವುದೇ ಮನೆಗಳನ್ನು ಮಂಜೂರು ಮಾಡದಿರುವುದರಿಂದ ಈ ತಾಲ್ಲೂಕಿನ ಜನರು ಕಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	
(ಇ)	ಈ ತಾಲ್ಲೂಕಿನ ಕಡು ಬಡವರಿಗೆ ಮನೆಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;	
(ಈ)	ಮನೆಗಳನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು ; ಯಾವಾಗ ಮನೆಗಳನ್ನು ಮಂಜೂರು ಮಾಡಲಾಗುವುದು ?	

ಸಂಖ್ಯೆ :ವಇ 112 ಹೆಚ್ಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2021**
ಸದಸ್ಯರ ಹೆಸರು : ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ)
ಉತ್ತರಿಸಬೇಕಾದ ದಿನಾಂಕ : 15-03-2021
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) 2018-19ನೇ ಸಾಲಿನ ಮಳೆಯಿಂದ ಹಾನಿಯಾದ ಬೆಳೆಗಳಿಗೆ ಎಷ್ಟು ಜನ ರೈತರ ಖಾತೆಗೆ ಪರಿಹಾರದ ಹಣ ಜಮೆ ಮಾಡಲಾಗಿದೆ;	2018-19ನೇ ಸಾಲಿನ ಮಳೆಯಿಂದ 7 ಜಿಲ್ಲೆಗಳಲ್ಲಿ ಬೆಳೆ ಹಾನಿಯಾದ 1,66,735 ರೈತರ ಖಾತೆಗೆ ರೂ.16440.00 ಲಕ್ಷಗಳ ಇನ್‌ಪುಟ್ ಸಬ್ಸಿಡಿಯನ್ನು ಜಮೆ ಮಾಡಲಾಗಿದೆ
(ಆ) ಬೆಳೆ ಪರಿಹಾರ ಜಮಾ ಆಗದೆಯಿರುವ ರೈತರ ಸಂಖ್ಯೆ ಎಷ್ಟು;	ಅರ್ಹ ಎಲ್ಲಾ ರೈತರಿಗೆ ನಿಯಮಾನುಸಾರ ಇನ್‌ಪುಟ್ ಸಬ್ಸಿಡಿಯನ್ನು ಪಾವತಿಸಲಾಗಿರುತ್ತದೆ.
(ಇ) ಯಾವ ಕಾರಣದಿಂದ ಬಾಕಿ ಇರುವ ರೈತರಿಗೆ ಪರಿಹಾರ ಹಣ ಜಮೆಯಾಗಿರುವುದಿಲ್ಲ;	ಉದ್ಭವಿಸುವುದಿಲ್ಲ.
(ಈ) ಬಾಕಿ ಉಳಿದಿರುವ ರೈತರಿಗೆ ಪರಿಹಾರ ದೊರಕಿಸಲು ಸರ್ಕಾರ ಕೈಗೊಂಡ ಕ್ರಮವೇನು?	ಉದ್ಭವಿಸುವುದಿಲ್ಲ.

ಕಂಇ 101 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2116
ಸದಸ್ಯರ ಹೆಸರು : ಶ್ರೀ ವೆಂಕಟರಾವ್ ನಾಡಗೌಡ
ಉತ್ತರಿಸುವ ದಿನಾಂಕ : 15.03.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಎಸ್.ಸಿ/ಎಸ್.ಟಿ ನಿಗಮಗಳಿಂದ ಭೂ ರೈತರಿಗೆ ಹಂಚಿಕೆ ಮಾಡಲು ಸಿಂಧನೂರು ತಾಲ್ಲೂಕಿನಲ್ಲಿ ಖರೀದಿ ಮಾಡಿದ ಜಮೀನು ಎಷ್ಟು?	ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ನಿಗಮಗಳಿಂದ ಸಿಂಧನೂರು ತಾಲ್ಲೂಕಿನಲ್ಲಿ ಖರೀದಿ ಮಾಡಿದ ಜಮೀನಿನ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ನಿಗಮದ ಹೆಸರು	ಖರೀದಿಸಿದ ಜಮೀನು (ಎಕರೆಗಳಲ್ಲಿ)
1.	ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ	60.01
2.	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	140.00
3.	ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ	34.00
ಒಟ್ಟು		234.01

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	ಈ ಜಮೀನು ಖರೀದಿಯಲ್ಲಿ ಹಾಗೂ ಫಲಾನುಭವಿಗಳ ಆಯ್ಕೆಯಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು	ಇಲ್ಲ.
ಇ)	ಭೂ ಖರೀದಿ ಮತ್ತು ಆಯ್ಕೆಗೆ ರಚಿಸಿರುವ ಸಮಿತಿ ಯಾವುದು;	ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದರ ನಿಗದಿ ಸಮಿತಿ ಮತ್ತು ಗ್ರಾಮ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.
ಈ)	ಈ ಸಮಿತಿ ಸ್ಥಳೀಯ ಶಾಸಕರ ಗಮನಕ್ಕೆ ತರಬಾರದೆಂದು ಕಾನೂನು ರಚಿಸಲಾಗಿದೆಯೇ? (ವಿವರವಾದ ಮಾಹಿತಿ ನೀಡುವುದು)	ಇಲ್ಲ.

ಸಂಖ್ಯೆ: ಸಕಇ 45 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2123
ಸದಸ್ಯರ ಹೆಸರು	:	ಶ್ರೀ.ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಜಮಖಂಡಿ ಮತಕ್ಷೇತ್ರದ ಆಲಗೂರು ಮತ್ತು ಹಿರೇಪಡಸಲಗಿ ಗ್ರಾಮಗಳು ಅತಿ ಹೆಚ್ಚಿನ ಹೈನುಗಾರಿಕೆ ಗ್ರಾಮಗಳಾಗಿರುವುದರಿಂದ ಸದರಿ ಗ್ರಾಮಗಳಿಗೆ ಪಶು ಆಸ್ಪತ್ರೆ ಮಂಜೂರು ಮಾಡುವುದು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದಯೇ;	ಜಮಖಂಡಿ ಮತಕ್ಷೇತ್ರ ಆಲಗೂರು ಗ್ರಾಮದಲ್ಲಿ ಈಗಾಗಲೇ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಹಿರೇಪಡಸಲಗಿ ಗ್ರಾಮದಲ್ಲಿ ಪಶುಆಸ್ಪತ್ರೆಯನ್ನು ಪ್ರಾರಂಭಿಸಲು ಮನವಿ ಸ್ವೀಕೃತಗೊಂಡಿರುತ್ತದೆ. ಆದರೆ, ಪ್ರಸಕ್ತ ಸಾಲಿನಲ್ಲಿ ನೂತನವಾಗಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಪ್ರಸ್ತುತ ವರ್ಷದಲ್ಲಿ ಹೊಸದಾಗಿ ಪಶು ಆಸ್ಪತ್ರೆ ಮಂಜೂರು ಮಾಡುವ ಚಿಂತನೆ ಸರ್ಕಾರಕ್ಕಿದೆಯೇ?	

ಸಂ: ಪಸಂಮೀ ಇ-27 ಪಸಸೇ 2021

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2124
ಸದಸ್ಯರ ಹೆಸರು	:	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಂದಾಯ ಇಲಾಖೆಯಲ್ಲಿ 1978ನೇ ಸಾಲಿನಿಂದ 10,450 ಜನ ಗ್ರಾಮ ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಇವರುಗಳ ಪ್ರಸ್ತುತ ಹಾಲಿ ಮಾಸಿಕ ವೇತನ ರೂ.12,000 ಇದ್ದು ಇದನ್ನು ರೂ.21,000ಕ್ಕೆ ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಗ್ರಾಮ ಸಹಾಯಕರು ಮಿತ ವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಸದರಿಯವರಿಗೆ ಮಾಸಿಕ ಮಿತವೇತನವನ್ನು ಕಾಲಕಾಲಕ್ಕೆ ಹೆಚ್ಚಳ ಮಾಡಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಕಂಇ 83 ಬಿಎಸ್ಐ 2011, ದಿನಾಂಕ:26.03.2018ರಲ್ಲಿ ದಿನಾಂಕ:01.04.2018ರಿಂದ ಅನ್ವಯವಾಗುವಂತೆ ಮಾಸಿಕ ಮಿತವೇತನವನ್ನು ರೂ.10,000/- ದಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದ್ದು, ಪ್ರಸ್ತುತ ಮಾಸಿಕ ಮಿತವೇತನವನ್ನು ರೂ.12,000/-ದಿಂದ ರೂ.18,000/-ಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.
(ಆ)	ಹಾಗಿದ್ದಲ್ಲಿ, ಗ್ರಾಮ ಸಹಾಯಕರುಗಳ ವೇತನವನ್ನು ಯಾವಾಗ ಹೆಚ್ಚಿಸಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಕಂಇ 47 ಬಿಎಸ್ಐ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2125
2	ಸದಸ್ಯರ ಹೆಸರು	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಜಮಖಂಡಿ ಮತಕ್ಷೇತ್ರದ ಸಾವಳಗಿ ಹೋಬಳಿಯನ್ನು ತಾಲ್ಲೂಕನ್ನಾಗಿ ಘೋಷಣೆ ಮಾಡುವ ಸಲುವಾಗಿ ಗ್ರಾಮದ ಜನರು ಗ್ರಾಮ ಪಂಚಾಯತಿ ಚುನಾವಣೆ ಯನ್ನು ಬಹಿಷ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ಹೋಬಳಿಯನ್ನು ತಾಲ್ಲೂಕನ್ನಾಗಿ ಯಾವಾಗ ಘೋಷಣೆ ಮಾಡಲಾಗುವುದು? (ವಿವರ ನೀಡುವುದು)	ಸಾವಳಗಿ ಹೋಬಳಿಯನ್ನು ತಾಲ್ಲೂಕನ್ನಾಗಿ ರಚಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಸಂಖ್ಯೆ: ಕಂಇ 17 ಎಲ್ಆರ್‌ಡಿ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2131
2	ಸದಸ್ಯರ ಹೆಸರು	ಶ್ರೀ ಪರಣ್ಣ ಈಶ್ವರಪ್ಪ ಮುನವಳ್ಳಿ (ಗಂಗಾವತಿ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯ ಗಂಗಾವತಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಇರಕಲ್ಲಗಡಾ ಹೋಬಳಿಯ ವ್ಯಾಪ್ತಿಯ ಕೂಕನಪಳ್ಳಿ ಗ್ರಾಮವನ್ನು ಕಂದಾಯ ಹೋಬಳಿ ಯನ್ನಾಗಿ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕೂಕನಪಲ್ಲಿ ಗ್ರಾಮವನ್ನು ಕಂದಾಯ ಹೋಬಳಿಯನ್ನಾಗಿ ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಕೂಕನಪಳ್ಳಿ ಗ್ರಾಮವನ್ನು ಇದುವರೆಗೂ ಕಂದಾಯ ಹೋಬಳಿ ಯನ್ನಾಗಿ ಮಾಡದಿರಲು ಕಾರಣವೇನು? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಕಂಇ 18 ಎಲ್‌ಆರ್‌ಡಿ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ತುಕಾರಾಮ್ .ಈ (ಸಂಡೂರ್)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2132**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಅಂಬೇಡ್ಕರ್, ಬಸವ ವಸತಿ ಯೋಜನೆಯ ಮನೆಗಳನ್ನು ಲಾಕ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ. ಸರ್ಕಾರದ "ಮನೆ" ಮಾರ್ಗಸೂಚಿಯನ್ವಯ ನಿಗಮದಿಂದ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಫಲಾನುಭವಿಯು ಮನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಿದ್ದು, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸ ಬೇಕಾಗಿರುತ್ತದೆ. ಹೀಗೆ ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪ್ರಾರಂಭಮಾಡಿಕೊಳ್ಳದ ಮನೆಗಳನ್ನು ಮನೆ ಮಾರ್ಗಸೂಚಿಗಳನ್ವಯ ಬ್ಲಾಕ್ ಮಾಡಲಾಗಿತ್ತು.
(ಆ)	ಬಂದಿದ್ದಲ್ಲಿ, ಸದರಿ ಯೋಜನೆಗಳ ಮನೆಗಳನ್ನು ಪ್ರಾರಂಭಿಸಲು ಇರುವ ಅಡೆತಡೆಯನ್ನು ನಿವಾರಿಸಿ, ಲಾಕ್ ಮಾಡಿರುವುದನ್ನು ಯಾವಾಗ ತೆರವುಗೊಳಿಸಲಾಗುವುದು ?	ಜನ ಪ್ರತಿನಿದಿಗಳ ಕೋರಿಕೆಯಂತೆ ಸರಕಾರವು ದಿನಾಂಕ: 14.02.2020 ರಂದು ಆದೇಶ ಹೊರಡಿಸಿ ವಿವಿಧ ವಸತಿ ಯೋಜನೆಗಳಡಿ ನಿಗದಿತ ಸಮಯದಲ್ಲಿ ಪ್ರಾರಂಭಗೊಳ್ಳದೇ ಬ್ಲಾಕ್ ಆಗಿದ್ದ ಮನೆಗಳನ್ನು ತೆರವುಗೊಳಿಸಿ, ವಾಸ್ತವವಾಗಿ ಪ್ರಾರಂಭವಾಗಿರುವ ಮನೆಗಳ ಛಾಯಾಚಿತ್ರಗಳನ್ನು ಜಿಪಿಎಸ್ ಗೆ ಅಳವಡಿಸಲು ಒಂದೂವರೆ ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಈ ಅವಧಿಯಲ್ಲಿ ಜಿ.ಪಿ.ಎಸ್. ಮಾಡಿರುವ ಮನೆಗಳನ್ನು ಪ್ರಗತಿಗೆ ಪರಿಗಣಿಸಿ ಉಳಿದ ಎಲ್ಲಾ ಮನೆಗಳನ್ನು ಸರ್ಕಾರದ ಆದೇಶ ಸಂ: ವಇ 12 ಹೆಚ್‌ಎಹೆಚ್ 2020, ದಿನಾಂಕ :19.05.2020 ರನ್ವಯ ರದ್ದುಪಡಿಸಲಾಗಿದೆ. ಸಾಕಷ್ಟು ಕಾಲಾವಕಾಶವನ್ನು ನೀಡಿದಾಗ್ಯೂ ಕೂಡ ಮನೆ ಪ್ರಾರಂಭ ಮಾಡಿಕೊಳ್ಳದಿರುವುದರಿಂದ ನಿಯಮಾನುಸಾರ ರದ್ದುಪಡಿಸಿದ್ದು, ಏಕಾ-ಏಕಿ ಮನೆಗಳನ್ನು ಬ್ಲಾಕ್ ಮಾಡಿ ರದ್ದುಪಡಿಸಿರುವುದಿಲ್ಲ.

ಸಂಖ್ಯೆ :ವಇ 114 ಹೆಚ್‌ಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2133
ಮಾನ್ಯ ಸದಸ್ಯರ ಹೆಸರು	ಶ್ರೀ ತುಕಾರಾಮ್ ಈ. (ಸಂಡೂರ್)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಹಾಸ್ಟಲ್‌ಗಳಲ್ಲಿ ವಿದ್ಯಾಸಿರಿ ಕಾರ್ಯಕ್ರಮಗಳನ್ನು ಶೇಖಡವಾರು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಯಾವಾಗಿನಿಂದ ಕಡಿತಗೊಳಿಸಲಾಗಿದೆ; ಕಡಿತಗೊಳಿಸಲು ಕಾರಣಗಳೇನು; ಪುನಃ ಯಾವಾಗಿನಿಂದ ಸದರಿ ಹಾಸ್ಟೆಲ್‌ಗಳಲ್ಲಿ ವಿದ್ಯಾಸಿರಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗುವುದು? (ವಿವರ ನೀಡುವುದು)	2020-21ನೇ ಸಾಲಿನ ಆಯವ್ಯಯದಲ್ಲಿ ವಿದ್ಯಾಸಿರಿ - ಊಟ ಮತ್ತು ವಸತಿ ಸಹಾಯ ಯೋಜನೆಯಡಿಯಲ್ಲಿ ರೂ.120.00 ಕೋಟಿಗಳನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಕಾರ್ಯಕ್ರಮಕ್ಕೆ ಪರಿಷ್ಕೃತ ಆಯವ್ಯಯ-1 ರಲ್ಲಿ ರೂ.80.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಪರಿಷ್ಕೃತ ಆಯವ್ಯಯ-2 ರಲ್ಲಿ ರೂ. 50.00 ಕೋಟಿಗಳನ್ನು ನಿಗದಿಪಡಿಸಿದ್ದು, ಸದರಿ ಪರಿಷ್ಕೃತ ಆಯವ್ಯಯ-2 ರಲ್ಲಿ ನಿಗದಿಪಡಿಸಿದ ಅನುದಾನದಲ್ಲಿ ರೂ.40.00 ಕೋಟಿಗಳನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಟ್ಯಾಬ್ ಖರೀದಿಗಾಗಿ ಉನ್ನತ ಶಿಕ್ಷಣ ಇಲಾಖೆಗೆ ನೀಡಲು ಆರ್ಥಿಕ ಇಲಾಖೆಯಿಂದ ಆದೇಶಿಸಲಾಗಿರುತ್ತದೆ. ಉಳಿದ ಅನುದಾನ ರೂ. 10.00 ಕೋಟಿಗಳಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 20.03.2021ಕ್ಕೆ ನಿಗದಿಪಡಿಸಲಾಗಿರುತ್ತದೆ.

ಸಂಖ್ಯೆ:ಹಿಂವಕ 185 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ರಾಜೇಶ್ ನಾಯಕ್ ಯು. (ಬಂಟ್ವಾಳ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2137

ಉತ್ತರಿಸಬೇಕಾದ ದಿನಾಂಕ : 15.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಬಂಟ್ವಾಳ ತಾಲ್ಲೂಕಿನ ಸಿದ್ದಕಟ್ಟೆ ಮತ್ತು ಮಂಚಿ ಪಶು ಚಿಕಿತ್ಸಾಲಯ ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ.
ಆ	ಈ ಪಶು ಆಸ್ಪತ್ರೆಗಳಿಗೆ ಹೊಸ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೇಯೇ?	ಪಶುಚಿಕಿತ್ಸಾಲಯ, ಮಂಚಿ, ಸಂಸ್ಥೆಗೆ ಆರ್.ಐ.ಡಿ.ಎಫ್. ಟ್ರಾಂಚ್–25ರಲ್ಲಿ ಮಂಜೂರಾಗಿದ್ದು, ಕಾಮಾಗಾರಿಯು ಪ್ರಗತಿಯಲ್ಲಿದೆ. ಪಶುಚಿಕಿತ್ಸಾಲಯವು ಸಿದ್ದಕಟ್ಟೆ ಸಂಸ್ಥೆಯ ಕಟ್ಟಡ ಕಾಮಗಾರಿಯನ್ನು ಮುಂದಿನ ಟ್ರಾಂಚ್‌ನಲ್ಲಿ ಪರಿಗಣಿಸಲಾಗುವುದು.
ಇ	ಇದ್ದಲ್ಲಿ ಈ ಬಗ್ಗೆ 2021–22ನೇ ವರ್ಷದಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ: ಅದಕ್ಕೆ ಬೇಕಾದ ಅನುದಾನ ಎಷ್ಟು?	ನಬಾರ್ಡ್ ಸಂಸ್ಥೆಯು ಪ್ರತಿ ಟ್ರಾಂಚ್‌ನ ಆರ್.ಐ.ಡಿ.ಎಫ್ ಕಟ್ಟಡ ನಿರ್ಮಾಣಕ್ಕಾಗಿ ನಿಗದಿಪಡಿಸುವ ದರಗಳಲ್ಲಿ ಮುಂದಿನ ಟ್ರಾಂಚ್ ನಲ್ಲಿ ಸಿದ್ದಕಟ್ಟೆ ಪಶು ಚಿಕಿತ್ಸಾಲಯ ಕಟ್ಟಡ ನಿರ್ಮಾಣಕ್ಕೆ ಪರಿಗಣಿಸಲಾಗುವುದು.

ಪಸಂಮೀ ಇ–79 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
9ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2138
ಮಾನ್ಯ ಸದಸ್ಯರ ಹೆಸರು	:	ಶ್ರೀ.ರಾಜೇಶ್ ನಾಯಕ್ ಯು. (ಬಂಟ್ವಾಳ)
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, (ಲೋಕೋಪಯೋಗಿ ಇಲಾಖೆ)

ಕ್ರಸಂ	ಪ್ರಶ್ನೆ	ಉತ್ತರ
ಅ)	ಬಂಟ್ವಾಳ ತಾಲ್ಲೂಕಿನ ಗ್ರಾಮೀಣ ರಸ್ತೆಗಳಾದ ಸಿದ್ದಕಟ್ಟೆ-ಕರ್ಪೆ-ಅಣ್ಣಳಿಕೆ ರಸ್ತೆ, ಅಣ್ಣಳಿಕೆ-ಕರಿಮಲೆ ರಸ್ತೆ, ಮಾವಿನಕಟ್ಟೆ-ಹೆಗ್ಗಣಗುರಿ ರಸ್ತೆ, ಕಟ್ಟದಪಡ್ಪು-ನರ್ಸಿಕುಮೇರು-ಪುಂಜಾಲಕಟ್ಟೆ, ಬಡಗಬೆಳ್ಳೂರು-ತಾರಾಬರಿ-ಎರ್ಮಲಪದವು ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-85/5 ಇಎಪಿ 2020, ಬೆಂಗಳೂರು ದಿನಾಂಕ 01.09.2020 ರನ್ವಯ ಕೆಳಕಂಡ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 1) ಅಜ್ಜಿಬೆಟ್ಟು-ಒಕ್ಕಾಡಿಗೋಳಿ-ಸಿದ್ದಕಟ್ಟೆ-ಕರ್ಪೆ-ಅಣ್ಣಳಿಕೆ-ಕರಿಮಲೆ ರಸ್ತೆ ಕಿಮೀ 0.00 ರಿಂದ 33.80 ಕಿಮೀ ವರೆಗೆ. 2) ಮಡಂತ್ಯಾರ್-ಪಾಂಡವರಕಲ್ಲು-ಕಕ್ಯಪದವು-ಹೆಗ್ಗಣಗುಳಿ-ಮಾವಿನಕಟ್ಟೆ ರಸ್ತೆ ಕಿಮೀ 0.00 ರಿಂದ 18.50 ಕಿಮೀ ವರೆಗೆ. ಕಟ್ಟದಪಡ್ಪು - ನರ್ಸಿಕುಮೇರು - ಪುಂಜಾಲಕಟ್ಟೆ, ಬಡಗಬೆಳ್ಳೂರು - ತಾರಾಬರಿ - ಎರ್ಮಲಪದವು ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಆ)	ಇದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು; ಮೇಲ್ದರ್ಜೆಗೇರಿಸಲು ಬೇಕಾಗುವ ಅನುದಾನವೆಷ್ಟು?	ಸದರಿ ಮೇಲ್ದರ್ಜೆಗೇರಿಸಿದ ರಸ್ತೆಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆಯ ಮೇರೆಗೆ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಲೋಇ E-89 ಇಎಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2142
ಸದಸ್ಯರ ಹೆಸರು	:	ಶ್ರೀ ಮಹದೇವ ಕೆ
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ, ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿರುವ 38 ಬುಡಕಟ್ಟು, ಹಾಡಿ ಕಾಲೋನಿಗಳು ಹಾಗೂ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ 06 ಹಾಡಿಗಳಲ್ಲಿ ಸಂಪರ್ಕ ರಸ್ತೆಗಳು ಹಾಗೂ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಈಗಾಗಲೇ 32 ಬುಡಕಟ್ಟು ಹಾಡಿಗಳಿಗೆ ಮನೆಗಳ ನಿರ್ಮಾಣ ಮತ್ತು ಸಿ.ಸಿ ರಸ್ತೆ ಚರಂಡಿ ಇತ್ಯಾದಿಗಳಿಗೆ ರೂ.8.20 ಕೋಟಿಗಳನ್ನು ನೀಡಲಾಗಿದೆ. ಉಳಿದ ಹಾಡಿಗಳಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಪರಿಶೀಲಿಸಲಾಗುವುದು.
ಆ)	ಸರ್ಕಾರ 2020-21ನೇ ಸಾಲಿನಲ್ಲಿ ಈ ಮತಕ್ಷೇತ್ರಕ್ಕೆ ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಯ ಅಡಿಯಲ್ಲಿ ಬುಡಕಟ್ಟು ಹಾಗೂ ಹಾಡಿಗಳ ಗಿರಿಜನ ಕಾಲೋನಿಗಳಿಗೆ ರಸ್ತೆ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಇಲ್ಲ
ಇ)	ಹಾಗಿದ್ದಲ್ಲಿ, ಈ ಮತಕ್ಷೇತ್ರಕ್ಕೆ ಈ ಯೋಜನೆಯ ಅಡಿಯಲ್ಲಿ ಎಷ್ಟು ಅನುದಾನ ಮಂಜೂರು ಮಾಡಲಾಗುವುದು?	ಪ್ರಶ್ನೇ ಉದ್ಭವಿಸುವುದಿಲ್ಲ

ಸಕಇ 90 ಎಸ್‌ಟಿಪಿ 2021

(ಬಿ ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :: 2146
ಸದಸ್ಯರ ಹೆಸರು :: ಶ್ರೀ ವೀರಭದ್ರಯ್ಯ ಎಂ.ವಿ (ಮಧುಗಿರಿ)
ಉತ್ತರಿಸುವ ದಿನಾಂಕ :: 15.03.2021
ಉತ್ತರಿಸುವ ಸಚಿವರು :: ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬಗರ್ ಹುಕುಂ ಸಮಿತಿ ರಚಿಸಲಾಗಿದೆಯೇ;	ಹೌದು.
ಆ)	ಯಾವ ಯಾವ ತಾಲ್ಲೂಕುಗಳಲ್ಲಿ ಬಗರ್ ಹುಕುಂ ಸಮಿತಿ ರಚಿಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)	ತುಮಕೂರು ಜಿಲ್ಲೆಯ ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕರೆ, ಪಾವಗಡ, ಶಿರಾ ಮತ್ತು ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಮಿತಿ ರಚಿಸಲಾಗಿದೆ.
ಇ)	ಇಲ್ಲವಾದಲ್ಲಿ, ಇದುವರೆಗೂ ಸಮಿತಿ ರಚಿಸದೇ ಇರುವುದಕ್ಕೆ ಕಾರಣವೇನು? ಯಾವಾಗ ರಚಿಸಲಾಗುವುದು? (ವಿವರ ನೀಡುವುದು)	ತುಮಕೂರು ಜಿಲ್ಲೆಯ ಗುಬ್ಬಿ, ಕುಣಿಗಲ್, ಮಧುಗಿರಿ, ಕೊರಟಗೆರೆ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಮಿತಿಯನ್ನು ರಚಿಸಲು ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. ಸಧ್ಯದಲ್ಲಿಯೇ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ರಚಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ:ಕಂಇ 14 ಎಲ್‌ಜಿಟಿ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2162
ಉತ್ತರಿಸಬೇಕಾದ ದಿನಾಂಕ	: 15.03.2021
ವಿಧಾನ ಸಭಾ ಸದಸ್ಯರ ಹೆಸರು	: ಶ್ರೀಮತಿ.ಸೌಮ್ಯರೆಡ್ಡಿ(ಜಯನಗರ)
ಉತ್ತರಿಸುವ ಸಚಿವರು	: ವಸತಿ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ	ಅಗತ್ಯ ಸೌಕರ್ಯಗಳನ್ನು ಒದಗಿಸುವ ಮೂಲಕ ಕೊಳಗೇರಿ ಪ್ರದೇಶಗಳ (ಕಾವೇರಿ ಕೊಳಗೇರಿ ವಾರ್ಡ್‌ನ ನಕಲುಬಂಡೆ ಕೊಳಗೇರಿ – 169 ಮತ್ತು ವಾರ್ಡ್–170 ರ ಇಂದಿರಾಗಾಂಧಿ ಕೊಳಗೇರಿ) ಅಭಿವೃದ್ಧಿಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಿಬಿಎಂಪಿ ವಾರ್ಡ್ ಸಂಖ್ಯೆ:169ರ ನಕ್ಕಲುಬಂಡೆ ಕೊಳಗೇರಿ ಪ್ರದೇಶದಲ್ಲಿ ಪ್ರಧಾನ ಮಂತ್ರಿ ಅವಾಸ್–ಸರ್ವರಿಗೂ ಸೂರು ಯೋಜನೆಯ ಹಂತ–3ರಲ್ಲಿ 86 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ಬಿಬಿಎಂಪಿ ವಾರ್ಡ್ ಸಂಖ್ಯೆ:170ರ ಇಂದಿರಾಗಾಂಧಿ ಕಾಲೋನಿ ಕೊಳಚೆಪ್ರದೇಶದಲ್ಲಿ ಮಂಡಳಿ ವತಿಯಿಂದ ನರ್ಮ್–ಬಿಎಸ್‌ಯುಪಿ (ಬಿಬಿಎಂಪಿ) ಹಂತ–1ರಡಿರಲ್ಲಿ 84 ನೆಲಮಹಡಿ ಮಾದರಿಯ ಮನೆಗಳನ್ನು ನಿರ್ಮಿಸಿದ್ದು, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.
ಆ	ಅರಸುಕಾಲೋನಿಯಲ್ಲಿನ ಸಾರ್ವಜನಿಕ ಶೌಚಾಲಯಗಳು ಮತ್ತು ವಾರ್ಡ್–170ರ ಇಂದಿರಾಗಾಂಧಿ ಕೊಳಗೇರಿಗಳ ಅವಶ್ಯಕತೆಗಳನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಅರಸು ಕಾಲೋನಿ ಪ್ರದೇಶವು ಬಿಬಿಎಂಪಿ ವ್ಯಾಪ್ತಿಯಲ್ಲಿರುತ್ತದೆ. ಸದರಿ ಪ್ರದೇಶದ ಸಾರ್ವಜನಿಕ ಶೌಚಾಲಯಗಳನ್ನು ಬಿಬಿಎಂಪಿ ವತಿಯಿಂದ ನಿರ್ಮಿಸಿದ್ದು, ಬಿಬಿಎಂಪಿ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ.
ಇ	ಹಾಗಿದ್ದಲ್ಲಿ, ಬಜೆಟ್‌ನಲ್ಲಿ ಒದಗಿಸಲಾದ ನಿಬಂಧನೆ ಏನು?	ಬಿಬಿಎಂಪಿ ವಾರ್ಡ್ ಸಂಖ್ಯೆ:170ರ ಇಂದಿರಾಗಾಂದಿ ಕಾಲೋನಿ ಸದರಿ ಕೊಳಚೆ ಪ್ರದೇಶದಲ್ಲಿ ಮಂಡಳಿ ವತಿಯಿಂದ ನರ್ಮ್–ಬಿಎಸ್‌ಯುಪಿ(ಬಿಬಿಎಂಪಿ) ಹಂತ–1ರಡಿಯಲ್ಲಿ 84 ನೆಲಮಹಡಿ ಮಾದರಿಯ ಮನೆಗಳನ್ನು ನಿರ್ಮಿಸಿದ್ದು, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನಸಭೆ

<table>
<tr><td>ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>2165</td></tr>
<tr><td>ಸದಸ್ಯರ ಹೆಸರು</td><td>ಶ್ರೀ. ರಾಜೀವ್.ಪಿ (ಕುಡಚಿ)</td></tr>
<tr><td>ವಿಷಯ</td><td>"ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಸೌಲಭ್ಯ"</td></tr>
<tr><td>ಉತ್ತರಿಸಬೇಕಾದ ದಿನಾಂಕ</td><td>15.03.2021</td></tr>
<tr><td>ಉತ್ತರಿಸುವ ಸಚಿವರು</td><td>ಕಂದಾಯ ಸಚಿವರು</td></tr>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ಕಳೆದ 3 ವರ್ಷಗಳಲ್ಲಿ ಕುಡಚಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಂಡ ಸಾಮಾಜಿಕ ಭದ್ರತಾ ಯೋಜನೆಗಳಾವುವು;</td><td>ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಿಂದ ಕಳೆದ 3 ವರ್ಷಗಳಲ್ಲಿ ಕೆಳಕಂಡ ಯೋಜನೆಗಳು ಅನುಷ್ಠಾನದಲ್ಲಿದೆ.
<table>
<tr><th>ಕ್ರಮ ಸಂಖ್ಯೆ</th><th>ಯೋಜನೆಗಳು</th></tr>
<tr><td>1</td><td>ವೃದ್ಧಾಪ್ಯ ವೇತನ</td></tr>
<tr><td>2</td><td>ವಿಧವಾ ವೇತನ</td></tr>
<tr><td>3</td><td>ಅಂಗವಿಕಲ ವೇತನ</td></tr>
<tr><td>4</td><td>ಸಂಧ್ಯಾ ಸುರಕ್ಷಾ ಯೋಜನೆ</td></tr>
<tr><td>5</td><td>ಮನಸ್ವಿನಿ</td></tr>
<tr><td>6</td><td>ಮೈತ್ರಿ</td></tr>
<tr><td>7</td><td>ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ಪರಿಷ್ಕರಿಸಿದ ವಿಧವಾವೇತನ</td></tr>
<tr><td>8</td><td>ರಾಷ್ಟ್ರೀಯ ಕುಟುಂಬ ನೆರವು ಯೋಜನೆ</td></tr>
<tr><td>9</td><td>ಅಂತ್ಯ ಸಂಸ್ಕಾರ ಯೋಜನೆ</td></tr>
</table></td></tr>
<tr><td>ಆ) ಕಳೆದ 3 ವರ್ಷಗಳಲ್ಲಿ ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಪಿಂಚಣಿ ಸೌಲಭ್ಯಗಳನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ಗ್ರಾಮವಾರು, ಫಲಾನುಭವಿವಾರು ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ಕುಡಚಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪಿಂಚಣಿ ಸೌಲಭ್ಯಗಳನ್ನು ಪಡೆದುಕೊಂಡ ಫಲಾನುಭವಿಗಳ ಗ್ರಾಮವಾರು ಮಾಹಿತಿಯನ್ನು ಸಿ.ಡಿ ಯಲ್ಲಿ ಲಗತ್ತಿಸಿದೆ.</td></tr>
<tr><td>ಇ) ಕೆಲವು ಪಿಂಚಣಿ ಸೌಲಭ್ಯಗಳನ್ನು ಪಡೆಯಲು ಸಂಬಂಧಿಸಿದ ಅಧಿಕಾರಿಗಳು ವಯೋವೃದ್ಧರಿಗೆ ಮೂಲ ದಾಖಲೆ ಒದಗಿಸುವಲ್ಲಿ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಪಿಂಚಣಿ ಸೌಲಭ್ಯ ಪಡೆಯಲು ವಯೋವೃದ್ಧರು ಕಛೇರಿಗಳಿಗೆ ಅಲೆದಾಡುವುದನ್ನು ಹಾಗೂ ದಾಖಲೆ ಒದಗಿಸುವಲ್ಲಿನ ತೊಂದರೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಇಲಾಖೆಯು ದತ್ತಾಂಶದಲ್ಲಿನ ಮಾಹಿತಿ ಆಧಾರಿಸಿ ಸ್ವಯಂ ಪ್ರೇರಿತವಾಗಿ ನೂತನ ನವೋದಯ ತಂತ್ರಾಂಶದ ಮೂಲಕ 60 ವರ್ಷ ಮೇಲ್ಪಟ್ಟ ಸಂಭವನೀಯ ಫಲಾನುಭವಿಗಳನ್ನು ಗುರುತಿಸಿ ಪಿಂಚಣಿ ಸೌಲಭ್ಯ ಒದಗಿಸುವಲ್ಲಿ "ಮನೆ ಬಾಗಿಲಿಗೆ ಮಾಸಾಶನ" ಅಭಿಯಾನವನ್ನು ಚಾಲನೆಗೊಳಿಸಿದೆ. ಇದಕ್ಕಾಗಿ "ನವೋದಯ" ಮೋಬೈಲ್ ಆ್ಯಪ್ ಸಿದ್ಧಪಡಿಸಿ ರಾಜ್ಯಾದ್ಯಂತ ಕಾರ್ಯಕ್ರಮ ಅನುಷ್ಠಾನಗೊಳಿಸಿದೆ.</td></tr>
</table>

ಸಂಖ್ಯೆ: **DSSP/LAQ/12/2021**

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2168
ಮಾನ್ಯ ಸದಸ್ಯರ ಹೆಸರು	ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಸತಿನಿಲಯಗಳ ಸಂಖ್ಯೆ ಎಷ್ಟು; ಈ ವಸತಿನಿಲಯಗಳ ಬೇಡಿಕೆ ಎಷ್ಟು; (ವಿವರ ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 24 ಮೆಟ್ರಿಕ್-ಪೂರ್ವ ಹಾಗೂ 49 ಮೆಟ್ರಿಕ್-ನಂತರದ ಹೀಗೆ ಒಟ್ಟು 73 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಕ್ರಮವಾಗಿ 1155 ಮತ್ತು 5120 ವಿದ್ಯಾರ್ಥಿಗಳಿಗೆ ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ವಿದ್ಯಾರ್ಥಿನಿಲಯವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಆ)	ಮೂಲ್ಕಿ/ಮೂಡಬಿದರೆ ಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ವಸತಿನಿಲಯವನ್ನು ಬೇಡಿಕೆ ಮೇರೆಗೆ ಪ್ರಾರಂಭಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ದಕ್ಷಿಣ ಕನ್ನಡ ಜಿಲ್ಲೆ, ಮೂಡಬಿದರೆಯಲ್ಲಿ ಮೆಟ್ರಿಕ್-ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಮಂಜೂರಾತಿ ಬಗ್ಗೆ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿ ಆರ್ಥಿಕ ಇಲಾಖೆಯು ಅನುದಾನ ಲಭ್ಯವಿದ್ದಲ್ಲಿ ಮಾತ್ರ ಪ್ರಸ್ತಾವನೆ ಸಲ್ಲಿಸುವಂತೆ ಅಭಿಪ್ರಾಯಿಸಿದೆ. ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನು ಆಧರಿಸಿರುತ್ತದೆ.
ಇ)	ವಸತಿನಿಲಯ ವ್ಯವಸ್ಥೆಗಳು ಬೇಡಿಕೆ ಪ್ರಮಾಣದಲ್ಲಿರದಿರುವ ಕಾರಣ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಶೈಕ್ಷಣಿಕ ಸೌಲಭ್ಯವನ್ನು ಪಡೆಯಲು ಸಾಧ್ಯವಾಗದಿರುವುದನ್ನು ಗಮನಿಸಿ ಚಾಲನೆಯಲ್ಲಿರುವ ವಸತಿನಿಲಯಗಳ ಬೇಡಿಕೆಯನ್ನು ಈಡೇರಿಸಲು ಸರ್ಕಾರದ ಸಕಾಲಿಕ ಕ್ರಮಗಳೇನು?	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳನ್ನು ಗ್ರಾಮೀಣ ಭಾಗದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಸ್ಥಾಪಿಸಲಾಗಿರುತ್ತದೆ. ಸದರಿ ವಿದ್ಯಾರ್ಥಿನಿಲಯಗಳಲ್ಲಿ ಈ ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಹಾಗೂ ಆರ್ಥಿಕ ಅರ್ಹತೆಯ ಆಧಾರದ ಮೇಲೆ ಪ್ರವೇಶಾವಕಾಶವನ್ನು ಕಲ್ಪಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ ಹಿಂವಕ 352 ಬಿಎಂಎಸ್ 2019, ದಿನಾಂಕ 20.1.2020ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ 150 ಸಂಖ್ಯಾಬಲವನ್ನು ಹೆಚ್ಚಿಸಲಾಗಿರುತ್ತದೆ. ಮುಂದುವರೆದು, ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆಯನುಸಾರ ವಿದ್ಯಾಸಿರಿ ಯೋಜನೆಯಡಿ ಪ್ರತಿ ಮಾಹೆ ರೂ.1500/- ರಂತೆ ಗರಿಷ್ಠ 10 ತಿಂಗಳಿಗೆ ರೂ.15,000/-ಗಳ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಸಂಖ್ಯೆ:ಹಿಂವಕ 184 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :: 2171
ಸದಸ್ಯರ ಹೆಸರು :: ಶ್ರೀ ಸತೀಶ್ ಎಲ್.ಜಾರಕಿಹೊಳಿ (ಯಮಕನಮರಡಿ)
ಉತ್ತರಿಸುವ ದಿನಾಂಕ: :: 15.03.2021
ಉತ್ತರಿಸುವ ಸಚಿವರು :: ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಆನಂದಪುರ ಗ್ರಾಮದ ಸರ್ವೆ ನಂ.251/ಎ ರಲ್ಲಿನ 4-00 ಎಕರೆ ಭೂಮಿಯನ್ನು ಹಿಡಕಲ್ ಡ್ಯಾಮ್ ಹಿನ್ನೀರಿನ ನಿರಾಶ್ರಿತರ ಸ್ಮಶಾನಕ್ಕಾಗಿ ಕಾಯ್ದಿರಿಸಿದ್ದು, ಕೆಲವರು ನಕಲಿ ದಾಖಲೆ ಸೃಷ್ಟಿಸಿ ಸದರಿ ಸ್ಮಶಾನ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?	ಬಂದಿರುತ್ತದೆ.
ಆ)	ಬಂದಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮವೇನು?	ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಆನಂದಪುರ ಗ್ರಾಮದ ಸರ್ವೆ ನಂ.251/ಎ ರಲ್ಲಿನ 4-00 ಎಕರೆ ಜಮೀನಿಗೆ "ಸ್ಮಶಾನ ಜಮೀನು" ಎಂದು ದಾಖಲಿಸುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ರಾಮಲಿಂಗ ಶ್ರೀಕಾಂತ ಕುಂಬಾರ ವಗೈರೆ ಜನರು ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ, ಸಂಕೇಶ್ವರದಲ್ಲಿ ಓ.ಎಸ್.ನಂ.151/2019ನ್ನು ದಾಖಲಿಸಿರುತ್ತಾರೆ. ಈ ಸಂಬಂಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಜರುಗುತ್ತಿದ್ದು, ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಆರ್‌ಡಿ 11 ಎಲ್‌ಜಿಎಲ್ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 2182
ಸದಸ್ಯರ ಹೆಸರು ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ, ಬೆಂಗಳೂರು)
ಉತ್ತರಿಸುವ ದಿನಾಂಕ: 15-03-2021
ಉತ್ತರಿಸುವ ಸಚಿವರು: ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ಬೆಂಗಳೂರಿನ ಸುಗಮ ಸಂಚಾರಕ್ಕೆ ಹೊರ ವರ್ತುಲ ರಸ್ತೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಕ್ರಮವೇನು:	ಲೋಕೋಪಯೋಗಿ ಇಲಾಖೆಯಿಂದ ಬೆಂಗಳೂರಿನ ಸುಗಮ ಸಂಚಾರಕ್ಕೆ ಅನುವಾಗುವಂತೆ ಹೊರ ವರ್ತುಲ ರಸ್ತೆಗಳನ್ನು ನಿರ್ಮಿಸುವ ಯಾವುದೇ ಪ್ರಸ್ತಾವನೆಯ ಇರುವುದಿಲ್ಲ. ಆದರೆ ಬೆಂಗಳೂರು ನಗರದಲ್ಲಿಯ ಸಂಚಾರ ದಟ್ಟಣೆಯನ್ನು ತಗ್ಗಿಸುವ ಪ್ರಯುಕ್ತ ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 2005 ರಲ್ಲಿ ಬೆಂಗಳೂರು ಹೊರವರ್ತುಲ ರಸ್ತೆಯನ್ನು ನಿರ್ಮಾಣ ಮಾಡಲಾಗಿರುತ್ತದೆ. ದಿನಾಂಕ:16.02.2016 ರಂದು ಸದರಿ ರಸ್ತೆಯನ್ನು ಮುಂದಿನ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ. ಮುಂದುವರೆದು, ಬೆಂಗಳೂರಿನ ಸುಗಮ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಪೆರಿಫೆರಲ್ ರಿಂಗ್ ರಸ್ತೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ.
ಆ)	ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಕಳೆದ ಮೂರು ವರ್ಷಗಳ ವಿವರ ನೀಡುವುದು)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಇ)	ಎಷ್ಟು ಕಿ.ಮೀ. ಉದ್ದದ ರಸ್ತೆ ನಿರ್ಮಿಸಲು ಅಂದಾಜು ವೆಚ್ಚ ಸಿದ್ಧಪಡಿಸಲಾಗಿದೆ? (ವಿವರಗಳನ್ನು ನೀಡುವುದು)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರದಲ್ಲಿಯ ಸಂಚಾರ ದಟ್ಟಣೆಯನ್ನು ತಗ್ಗಿಸುವ ಪ್ರಯುಕ್ತ 65.50 ಕಿ.ಮೀ. ಉದ್ದದ ಹಾಗೂ 100 ಮೀ. ಅಗಲಕ್ಕೆ ಫೆರಿಫೆರಲ್ ರಿಂಗ್ ರಸ್ತೆಯ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಭೂಸ್ವಾಧೀನ ಒಳಗೊಂಡಂತೆ ರಸ್ತೆ ನಿರ್ಮಾಣಕ್ಕಾಗಿ ರೂ.21,091.00 ಕೋಟಿಗಳ ವೆಚ್ಚ ತಗಲಬಹುದೆಂದು ಅಂದಾಜಿಸಲಾಗಿದೆ.

ಲೋಇ 26 ಸಿಕ್ಯೂಎನ್ 2021(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2184
ಮಾನ್ಯ ಸದಸ್ಯರ ಹೆಸರು	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆಯಡಿ ಸಮುದಾಯ ಭವನಗಳ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿರುವುದು ನಿಜವೇ;	ಹೌದು,
ಆ)	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆ ಮಾನ್ಯ ಮುಖ್ಯಮಂತ್ರಿಗಳು ಅನುದಾನ ಮಂಜೂರು ಮಾಡಲು ಆದೇಶಿಸಿರುವುದು ನಿಜವೇ;	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡಲು ಮಾನ್ಯ ಶಾಸಕರು ಕಿತ್ತೂರು ವಿಧಾನ ಸಭಾ ಕ್ಷೇತ್ರ ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಪತ್ರದ ಮೇಲೆ ಮಾನ್ಯ ಮುಖ್ಯಮಂತ್ರಿಗಳು "ಮಂಜೂರು ಮಾಡುವುದು" ಎಂದು ಷರಾ ನಮೂದಿಸಿರುತ್ತಾರೆ.
ಇ)	ಆದೇಶವಾಗಿದ್ದರೂ ಇದುವರೆಗೆ ಅನುದಾನ ಮಂಜೂರು ಮಾಡದಿರಲು ಕಾರಣವೇನು;	ಸದರಿ ಸ್ಥಳಗಳಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಸರ್ಕಾರದ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪ್ರಸ್ತಾವನೆಗಳನ್ನು ಪಡೆದು ಸಲ್ಲಿಸುವಂತೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ದಿನಾಂಕ: 08.02.2021 ರಂದು ಪತ್ರ ಬರೆಯಲಾಗಿರುತ್ತದೆ. ಸದರಿ ಸಂಸ್ಥೆಗಳ ವತಿಯಿಂದ ನಿಯಮಾನುಸಾರ ಪ್ರಸ್ತಾವನೆಗಳು ಸ್ವೀಕೃತವಾದ ನಂತರ, ಸರ್ಕಾರದ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಪರಿಶೀಲಿಸಿ ಸದರಿ ಸಂಸ್ಥೆಗಳು ಅರ್ಹತೆ ಹೊಂದಿದ್ದಲ್ಲಿ ಸಹಾಯಧನ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.
ಈ)	2021-22 ಸಾಲಿನಲ್ಲಿ ಅನುದಾನ ಮಂಜೂರು ಮಾಡಲು ಸರ್ಕಾರದ ಕ್ರಮವೇನು?	ಸಂಬಂಧಿಸಿದ ಸಂಸ್ಥೆಯವರು ನಿಯಮಾನುಸಾರ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, 2021-22 ಸಾಲಿನಲ್ಲಿ ಸದರಿ ಯೋಜನೆಯಡಿ ಒದಗಿಸುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ, ಸದರಿ ಸ್ಥಳಗಳಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಹಿಂವಕ 13 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2185**

ಸದಸ್ಯರ ಹೆಸರು : **ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)**

ಉತ್ತರಿಸುವ ಸಚಿವರು : **ಕಂದಾಯ ಸಚಿವರು**

ಉತ್ತರಿಸುವ ದಿನಾಂಕ : **15.03.2021**

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಸರ್ಕಾರ ಇತ್ತೀಚಿಗೆ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಪೌತಿ/ ವಾರಸಾ ಖಾತೆ ಆಂದೋಲನ ನಡೆಸಿರುವುದು ನಿಜವೇ;	ಹೌದು.
ಆ.	ಹಾಗಿದ್ದಲ್ಲಿ, ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೈಲಹೊಂಗಲ ಮತ್ತು ಕಿತ್ತೂರು ತಾಲ್ಲೂಕಿನ ತಾಲ್ಲೂಕಾ ಆಡಳಿತ ಕುರಿತು ರೈತರಿಗೆ ಮಾಹಿತಿ ನೀಡಿದೆಯೆ;	ಹೌದು.
ಇ.	ನೀಡಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಈ ಅಂದೋಲನದ ಅಡಿಯಲ್ಲಿ ಎಷ್ಟು ಪೌತಿ/ವಾರಸಾ ಖಾತೆಗಳನ್ನು ಮಾಡಲಾಗಿದೆ (ವಿವರ ನೀಡುವುದು)	ಪೌತಿ ಖಾತೆ ಆಂದೋಲನವು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್‌ಎಂ 2019(ಇ) ದಿನಾಂಕ:17.10.2020ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಪ್ರಾರಂಭಿಸಲಾಗಿದ್ದು, ಜನವರಿ ಮೊದಲ ವಾರದಲ್ಲಿ ಭೂಮಿ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.
ಈ.	ಇಲ್ಲದಿದ್ದಲ್ಲಿ, ಕಾರಣ ನೀಡುವುದು;	
ಉ.	ರೈತರಿಗೆ ತಿಳಿಸದೇ ಸರ್ಕಾರದ ಆದೇಶ ಪಾಲಿಸದೇ ಕರ್ತವ್ಯಲೋಪವೆಸಗಿದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದೇ; ಈ ಕುರಿತು ಸರ್ಕಾರದ ಕ್ರಮವೇನು?	ಸರ್ಕಾರದ ಆದೇಶ ಪಾಲಿಸದೇ ಕರ್ತವ್ಯಲೋಪವೆಸಗಿದಲ್ಲಿ ಸದರಿ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಸಂಖ್ಯೆ:ಕಂಇ 55 ಟಿಆರ್‌ಎಂ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
9ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2203
ಮಾನ್ಯ ಸದಸ್ಯರ ಹೆಸರು	:	ಶ್ರೀ. ಶ್ರೀನಿವಾಸ್ ಎಂ. (ಮಂಡ್ಯ)
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಮಳೆ ಹಾನಿಯಿಂದಾಗಿ ಸೇತುವೆಗಳು ಕುಸಿದಿದ್ದು, ಜನಸಂಪರ್ಕಕ್ಕೆ ಮತ್ತು ವಾಹನ ವಸ್ತು ಸಾಗಾಣಿಕೆಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ
(ಆ)	ಕಳೆದ 3 ವರ್ಷಗಳಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಸೇತುವೆ ಕಾಮಗಾರಿಗಳು ಮಂಜೂರಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)	ಕಳೆದ 3 ವರ್ಷಗಳಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಮಳೆ ಹಾನಿಯಿಂದ ಹಾಳಾದ ಮಂಡ್ಯ ತಾ: ಬಿ.ಎನ್. ರಸ್ತೆಯಿಂದ ಎಂ.ಕೆ.ರಸ್ತೆ ಸೇರುವ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 10.85 ಕಿಮೀ ನಲ್ಲಿ (ಕರ್ಲಹಳ್ಳಿ) ಸೇತುವೆ ನಿರ್ಮಾಣ ಕಾಮಗಾರಿಯು ರೂ.100.00 ಲಕ್ಷಗಳ ಅಂದಾಜು ಮೊತ್ತಕ್ಕೆ ಮಂಜೂರಾಗಿದ್ದು, ಪ್ರಸ್ತುತ ಸೇತುವೆಯ ತಳಪಾಯದ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
ಇ)	ಕೆ.ಆರ್.ಡಿ.ಸಿ.ಎಲ್ ವತಿಯಿಂದ ಸೇತುವೆಗಳ ಮಂಜೂರಾತಿಗಾಗಿ ಈಗಾಗಲೇ ಅನೇಕ ಬಾರಿ ಪ್ರಸ್ತಾವನೆ ಸಲ್ಲಿಸಿದ್ದರೂ ಯಾವುದೇ ಸೇತುವೆ ಕಾಮಗಾರಿಗಳನ್ನು ಮಂಜೂರು ಮಾಡದಿರಲು ಕಾರಣವೇನು;	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಲ್ಲಿಸಿರುವ ಒಟ್ಟು 504 ಸೇತುವೆಗಳ ಪಟ್ಟಿಯ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿ, ಹಿಂಬರಹ ಸಂಖ್ಯೆ: FD 208 FC-2/2020, ದಿನಾಂಕ: 11-09-2020 ರಲ್ಲಿ ಈ ಕೆಳಗಿನಂತೆ ತಿಳಿಸಿರುತ್ತದೆ. "The outstanding commitments of KRDCL are already being very high. Hence, Administrative Department is advised not to take up any new works till the previous works are completed and closed financially" ಆದ ಕಾರಣ, ಮಂಜೂರು ಮಾಡಿರುವುದಿಲ್ಲ.
ಈ)	ಸದರಿ ಪ್ರಸ್ತಾವನೆಗೆ ಯಾವಾಗ ಮಂಜೂರಾತಿ ನೀಡಲಾಗುವುದು?	ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ. ಲೋಇ E-91 ಇಎಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2204**
ಸದಸ್ಯರ ಹೆಸರು	:	**ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)**
ಉತ್ತರಿಸುವ ಸಚಿವರು	:	**ಕಂದಾಯ ಸಚಿವರು**
ಉತ್ತರಿಸುವ ದಿನಾಂಕ	:	**15.03.2021**

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕೃಷಿ ಜಮೀನುಗಳ ಮಾಲೀಕರು ಮರಣ ಹೊಂದಿದ ನಂತರ ಪೌತಿ/ವಾರಸಾ ಮಾಲೀಕತ್ವವನ್ನು ಅವರ ಉತ್ತರಾಧಿಕಾರಿಗಳಿಗೆ ಬದಲಾವಣೆ ಮಾಡಿ ಪೌತಿ ಖಾತೆ ಮಾಡುವ ಪ್ರಕರಣಗಳು ಹೆಚ್ಚಾಗಿ ಬಾಕಿ ಇದ್ದು, ಈ ಸಂಬಂಧ ಪೌತಿ ಮಾಡುವ ಪ್ರಕರಣಗಳು ಹೆಚ್ಚಾಗಿ ಬಾಕಿ ಇದ್ದು ಈ ಸಂಬಂಧ ಪೌತಿ ಖಾತೆ ಆಂದೋಲನ ನಡೆಸಲು ದಿನಾಂಕ:17.10.2020ರಂದು ಸುತ್ತೋಲೆ ಹೊರಡಿಸಿ, ಇಂತಹ ಪ್ರಕರಣಗಳನ್ನು ಗುರುತಿಸಿ ಕೂಡಲೇ ಇತ್ಯರ್ಥಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಈವರೆಗೂ ಪೌತಿ ಆಂದೋಲನ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್ಎಂ 2019(ಇ) ದಿನಾಂಕ:17.10.2020ರಲ್ಲಿ ಪೌತಿ/ವಾರಸಾ ಖಾತೆ ಆಂದೋಲನ ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಅದರಂತೆ ರಾಜ್ಯಾದ್ಯಂತ ಪೌತಿ ಆಂದೋಲನವು ದಿನಾಂಕ:28.10.2020ರಿಂದ ಪ್ರಾರಂಭವಾಗಿರುತ್ತದೆ.
ಆ.	ಬಂದಿದ್ದಲ್ಲಿ, ಪೌತಿ ಆಂದೋಲನವನ್ನು ಯಾವಾಗ ಪ್ರಾರಂಭಿಸಲಾಗುವುದು;	
ಇ.	ಗ್ರಾಮೀಣ ಭಾಗದ ರೈತರು ದಾಖಲೆ ದಸ್ತಾವೇಜುಗಳನ್ನು ಹೊಂದಿಸಲು ಸರ್ಕಾರಿ ಕಛೇರಿಗಳಿಗೆ ಅಲೆದಾಡುತ್ತಿದ್ದು, ಕಡ್ಡಾಯ ಮರಣ ಪ್ರಮಾಣ ಪತ್ರ, ವಂಶವೃಕ್ಷಗಳಿಲ್ಲದೇ ಇರುವುದರಿಂದ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. ಆದಾಗ್ಯೂ ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆಯನ್ವಯ ವಂಶವೃಕ್ಷ ಲಭ್ಯವಿಲ್ಲದಿದ್ದಾಗ ಅರ್ಜಿದಾರರು ಕುಟುಂಬದ ಮಾಹಿತಿಯನ್ನು ನೋಟರಿ ಮಾಡಿಸಿ ಅಟಲ್ ಜನಸ್ನೇಹಿ ಕೇಂದ್ರದಲ್ಲಿ ನೋಂದಾಯಿಸಲಾದ ವಂಶವೃಕ್ಷದ ಮೇರೆಗೆ ಪೌತಿ/ವಾರಸಾ ವಿವರ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಮರಣವಾಗಿ ಒಂದು ವರ್ಷ ಮೀರಿದ್ದರೂ, ಮರಣ ನೋಂದಣಿಯಾಗಿರದಿದ್ದಲ್ಲಿ, ಸಂಬಂಧಪಟ್ಟ ಜೆ.ಎಂ.ಎಫ್.ಸಿ ನ್ಯಾಯಾಲಯದಿಂದ ಆದೇಶ ಪಡೆದು, ತಹಶೀಲ್ದಾರ್ ರವರ ಕಚೇರಿಯಲ್ಲಿ ಮರಣ ಪತ್ರವನ್ನು ಪಡೆದು ನಂತರ ಪೌತಿ ಖಾತೆ ಮಾಡಿಸಿಕೊಳ್ಳಲು ಅರ್ಜಿ ದಾಖಲಿಸಬಹುದಾಗಿದೆ **ಅಥವಾ** ಆಧಾರ್ ಮತ್ತು ಪಡಿತರಚೀಟಿ ದಾಖಲೆಗಳನ್ನು ಪರಿಶೀಲಿಸಿಕೊಂಡು ಗ್ರಾಮಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ/ಮಹಜರ್ ಮಾಡಿ ಮೃತ ಖಾತೆದಾರರು ಮರಣ ಹೊಂದಿರುವ ಬಗ್ಗೆ ಸಂಬಂಧಪಟ್ಟ ವಾರಸುದಾರರಿಂದ ಅಫಿಡವಿಟ್ ಅನ್ನು ಪಡೆದು, ಅವರುಗಳ ಪಡಿತರ ಚೀಟಿ ಮತ್ತು ಆಧಾರ್ ದಾಖಲೆಯೊಂದಿಗೆ ಪೌತಿ ಖಾತೆ ಮಾಡಿಸಿಕೊಳ್ಳಲು ಅರ್ಜಿ ದಾಖಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.
ಈ.	ಹಾಗಾದಲ್ಲಿ, ಈ ಕುರಿತು ಪೌತಿ ಆಂದೋಲನ ಮಾರ್ಗಸೂಚಿಗಳನ್ವಯ ಸಡಿಲಿಕೆ ಕಲ್ಪಿಸಿಕೊಡುವ ಸಂಬಂಧ ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು ?	

ಸಂಖ್ಯೆ:ಕಂಇ 54 ಟಿಆರ್ಎಂ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2211
ಮಾನ್ಯ ಸದಸ್ಯರ ಹೆಸರು	ಶ್ರೀ ಭೀಮಾ ನಾಯ್ಕ್ ಎಸ್. (ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<table>
<tr><th>ಕ್ರ.
ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ</td><td>ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 7 ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.
ಸಂ.</th><th>ಶಾಲೆಯ ಹೆಸರು</th><th>ವರ್ಗ</th><th>ತಾಲ್ಲೂಕು</th></tr>
<tr><td>1</td><td>ಮೊದೇ.ಶಾ ವಲ್ಲಬಾಪುರ</td><td>ಪ.ಜಾ</td><td>ಹಗರಿಬೊಮ್ಮನಹಳ್ಳಿ</td></tr>
<tr><td>2</td><td>ಮೊದೇ.ಶಾ ತಿಮ್ಮಲಾಪುರ</td><td>ಪ.ಜಾ</td><td>ಹೊಸಪೇಟೆ</td></tr>
<tr><td>3</td><td>ಮೊದೇ.ಶಾ ಕಂದಗಲ್ಲು</td><td>ಪ.ಜಾ</td><td>ಕೂಡ್ಲಿಗಿ</td></tr>
<tr><td>4</td><td>ಕಿ.ರಾ.ಚೆ.ವ.ಶಾ ವರಲಹಳ್ಳಿ</td><td>ಪ.ಜಾ</td><td>ಹಗರಿಬೊಮ್ಮನಹಳ್ಳಿ</td></tr>
<tr><td>5</td><td>ಮೊದೇ.ಶಾ ಅಂಬಳಿ</td><td>ಹಿ.ವರ್ಗ</td><td>ಹಗರಿಬೊಮ್ಮನಹಳ್ಳಿ</td></tr>
<tr><td>6</td><td>ಮೊದೇ.ಶಾ ಹಂಪಸಾಗರ</td><td>ಪ.ಜಾ</td><td>ಹಗರಿಬೊಮ್ಮನಹಳ್ಳಿ</td></tr>
<tr><td>7</td><td>ಮೊದೇ.ಶಾ ತಂಬ್ರಹಳ್ಳಿ</td><td>ಪ.ವರ್ಗ</td><td>ಹಗರಿಬೊಮ್ಮನಹಳ್ಳಿ</td></tr>
</table>
ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.</td></tr>
<tr><td>ಆ)</td><td>ಇದ್ದಲ್ಲಿ, ಪ್ರಕ್ರಿಯೆ ಯಾವ ಹಂತದಲ್ಲಿದೆ?</td><td>ಉದ್ಭವಿಸುವುದಿಲ್ಲ</td></tr>
</table>

ಸಂಖ್ಯೆ:ಹಿಂವಕ 179 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2212
ಸದಸ್ಯರ ಹೆಸರು : ಶ್ರೀ. ಭೀಮಾ ನಾಯ್ಕ ಎಸ್.
ಉತ್ತರಿಸುವ ದಿನಾಂಕ : 15/03/2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಗರಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;	ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಕುರಿತು ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ)	ಇದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?	ಅನ್ವಯಿಸುವುದಿಲ್ಲ.

ಸಕಇ 105 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2218
ಸದಸ್ಯರ ಹೆಸರು	:	ಶ್ರೀ ರಾಜೇಗೌಢ ಟಿ.ಡಿ. (ಶೃಂಗೇರಿ)
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	:	15.03.2021

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ, ಎನ್.ಆರ್.ಪುರ ಮತ್ತು ಕೊಪ್ಪ ತಾಲ್ಲುಕುಗಳ ಮಿನಿ ವಿಧಾನಸೌಧಗಳ ಕಾಮಗಾರಿ ಅಪೂರ್ಣಗೊಂಡಿರುವುದು ಹಾಗೂ 3ನೇ ಮಹಡಿಗೆ ಮೇಲ್ಛಾವಣಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	-ಇಲ್ಲ-
ಆ)	ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ 3 ಮಿನಿ ವಿಧಾನಸೌಧಗಳ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ;	ಶೃಂಗೇರಿ ತಾಲ್ಲೂಕು ಮಿನಿ ವಿಧಾನಸೌಧ ಕಟ್ಟಡವನ್ನು ನಿರ್ಮಿಸಲಾಗಿದ್ದು, ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಕೊಪ್ಪ ಮಿನಿ ವಿಧಾನಸೌಧ ಕಟ್ಟಡವನ್ನು ರೂ.462.00 ಲಕ್ಷಗಳಲ್ಲಿ ನಿರ್ಮಿಸಲಾಗಿದ್ದು, ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ರೂ.250.00 ಲಕ್ಷಗಳ ರೇಖಾ ಅಂದಾಜು ಪ್ರಸ್ತಾವನೆ ಸ್ವೀಕೃತವಾಗಿದ್ದು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ. ಎನ್.ಆರ್.ಪುರ ಮಿನಿ ವಿಧಾನಸೌಧ ಕಟ್ಟಡವನ್ನು ರೂ.250.00 ಲಕ್ಷಗಳಲ್ಲಿ ನಿರ್ಮಿಸಲಾಗಿದ್ದು, ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ಪ್ರಸ್ತಾವನೆ ಸ್ವೀಕೃತವಾದಲ್ಲಿ, ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.
ಇ)	ಇದುವರೆವಿಗೂ 3 ಮಿನಿ ವಿಧಾನಸೌಧಗಳ ಕಾಮಗಾರಿಗೆ ಎಷ್ಟು ಅನುದಾನ ಒದಗಿಸಲಾಗಿದೆ; ಉಳಿಕೆ ಕಾಮಗಾರಿ ಪೂರ್ಣಗೊಳಿಸಲು ಎಷ್ಟು ಅನುದಾನ ಅಗತ್ಯವಿದೆ? (ವಿವರ ನೀಡುವುದು)	ಶೃಂಗೇರಿ ಮಿನಿ ವಿಧಾನಸೌದ ಕಟ್ಟಡವನ್ನು ರೂ.23.80 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಕೊಪ್ಪ ಮಿನಿ ವಿಧಾನಸೌದ ಕಟ್ಟಡ ನಿರ್ಮಾಣಕ್ಕಾಗಿ ರೂ.462.00 ಲಕ್ಷಗಳ ಅನುದಾನ ಒದಗಿಸಲಾಗಿದೆ. ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ರೂ.250.00 ಲಕ್ಷಗಳ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ. ಎನ್.ಆರ್.ಪುರ ಮಿನಿ ವಿಧಾನಸೌದ ಕಟ್ಟಡ ಕಾಮಗಾರಿಗೆ ರೂ.250.00 ಲಕ್ಷಗಳನ್ನು ಒದಗಿಸಲಾಗಿದೆ. ಉಳಿಕೆ ಕಾಮಗಾರಿಯನ್ನು ನಿರ್ವಹಿಸಲು ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.

ಕಂಇ 39 ಡಬ್ಲ್ಯೂಬಿಆರ್ 2021

(ಆರ್. ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2219
ಸದಸ್ಯರ ಹೆಸರು : ಶ್ರೀ ರಾಜೇಗೌಡ.ಟಿ.ಡಿ.(ಶೃಂಗೇರಿ)
ಉತ್ತರಿಸುವ ದಿನಾಂಕ : 15.03.2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಅಮ್ಮಡಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸುಮಾರು 25 ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಅಮ್ಮಡಿ ಗ್ರಾಮದ ಸರ್ವೆ ನಂಬರ್ 2 ರಲ್ಲಿ ರಾಷ್ಟ್ರೀಯ ಹೆದ್ದಾರಿಯು ಹಾದು ಹೋಗುತ್ತಿದ್ದು, ಸದರಿ ಸರ್ವೆ ನಂಬರುಗಳಲ್ಲಿನ ಜಮೀನು ಖಾಸಗಿ ಹಿಡುವಳಿ ಜಮೀನಾಗಿದ್ದು, ಯಾವುದೇ ಸರ್ಕಾರಿ ಜಮೀನು ಇಲ್ಲದಿರುವುದರಿಂದ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ, ಒತ್ತುವರಿಯನ್ನು ಯಾವ ಕಾಲಮಿತಿಯೊಳಗೆ ತೆರವುಗೊಳಿಸಲಾಗುತ್ತದೆ;	ಅನ್ವಯಿಸುವುದಿಲ್ಲ
ಇ)	ಸದರಿ ಸರ್ಕಾರಿ ಭೂಮಿಯನ್ನು ಯಾವ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ?	ಅನ್ವಯಿಸುವುದಿಲ್ಲ.

(ಕಡತ ಸಂಖ್ಯೆ:ಕಂಇ 6 ಎಲ್‌ಜಿಯು 2021)

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2226
ಉತ್ತರಿಸುವ ದಿನಾಂಕ	15-03-2021
ಮಾನ್ಯ ಸದಸ್ಯರ ಹೆಸರು	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಯಾದಗಿರಿ ಮತಕ್ಷೇತ್ರದಲ್ಲಿ ನೂತನ ವಡಗೇರ ತಾಲ್ಲೂಕು ಕೇಂದ್ರದಲ್ಲಿ ಉಪ ನೋಂದಣಾಧಿಕಾರಿಗಳ ಕಾರ್ಯಾಲಯ ಅತಿ ಅವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಬಂದಿದ್ದಲ್ಲಿ ಉಪ ನೋಂದಣಾಧಿಕಾರಿಗಳ ಕಾರ್ಯಾಲಯ ಪ್ರಾರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಕಂಇ/125/ಎಂಎನ್‌ಎಸ್‌ಎ/2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2228**
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ್
ಉತ್ತರಿಸಬೇಕಾದ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

	ಪ್ರಶ್ನೆ	ಉತ್ತರ
(ಅ)	2019-20 ಮತ್ತು 2020-21ನೇ ಸಾಲಿನ ಪ್ರವಾಹದಿಂದ ಮುಳುಗಡೆಯಾದ ರೈತರಿಗೆ ಹಾಗೂ 07/04/2020ರಂದು ಅಕಾಲಿಕ ಮಳೆಯಿಂದ ಬೆಳೆಗಳಿಗೆ ಹಾನಿಯಾಗಿದ್ದು ಪ್ರತಿಶತ ಶೇಕಡ 60 ರಷ್ಟು ಜನರಿಗೆ ಹಣ ಬಿಡುಗಡೆ ಮಾಡಲಾಗಿದ್ದು, ಇನ್ನುಳಿದ ಪ್ರತಿಶತ 40 ರಷ್ಟು ಜನರಿಗೆ ಹಣ ಜಮಾ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಗಳನ್ವಯ ನೆರೆಹಾವಳಿಯಿಂದ ಶೇ.33 ಕ್ಕಿಂತ ಹೆಚ್ಚಿನ ಬೆಳೆ ಹಾನಿಗೆ ತುತ್ತಾದ ಕೃಷಿಕರಿಗೆ ಗರಿಷ್ಠ 2 ಹೆಕ್ಟೇರ್ ಗಳಿಗೆ ಸೀಮಿತಗೊಳಿಸಿ ಇನ್‌ಪುಟ್ ಸಬ್ಸಿಡಿಯನ್ನು ನೀಡಲಾಗುತ್ತದೆ. 2019-20ನೇ ಸಾಲಿನ ಅತಿವೃಷ್ಟಿ/ ಪ್ರವಾಹದಿಂದ ಬೆಳೆಹಾನಿಯಾಗಿರುವ 6,71,314 ಅರ್ಹ ರೈತರಿಗೆ ರೂ.1232.20 ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. 2020-21ನೇ ಸಾಲಿನ ಅತಿವೃಷ್ಟಿ/ ಪ್ರವಾಹದಿಂದಾದ ಬೆಳೆಹಾನಿಗೆ ಸಂಬಂಧಿಸಿದಂತೆ ಈವರೆಗೆ 11,28,300 ಅರ್ಹ ರೈತರಿಗೆ ರೂ.862.55 ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ.
(ಆ)	ಬಂದಿದ್ದಲ್ಲಿ, ಬಾಕಿ ಉಳಿದ ರೈತರಿಗೆ ಹಣ ಜಮಾ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಗಳನ್ವಯ ಬೆಳೆಹಾನಿಯ ಇನ್‌ಪುಟ್ ಸಬ್ಸಿಡಿ ಪಡೆಯಲು ಅರ್ಹರಿರುವ/ ದಾಖಲೆಗಳು ಹೊಂದಾಣಿಕೆಯಾಗಿರುವ ಎಲ್ಲಾ ಸಂತ್ರಸ್ಥ ರೈತರನ್ನು ಪರಿಗಣಿಸಲಾಗಿದೆ.

ಕಂಇ 103 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2225
ಸದಸ್ಯರ ಹೆಸರು : ಶ್ರೀ ರಘುಪತಿ ಭಟ್.ಕೆ (ಉಡುಪಿ)
ಉತ್ತರಿಸುವ ದಿನಾಂಕ : 15.03.2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಅರಣ್ಯ ಸ್ವರೂಪ ಇಲ್ಲದೇ ಇರುವ ಜಮೀನುಗಳನ್ನು ಅರಣ್ಯ ಇಲಾಖೆ ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿರುವ ಪ್ರದೇಶಗಳನ್ನು ವಿರಹಿತ ಮಾಡುವಲ್ಲಿ ಕಂದಾಯ ಇಲಾಖೆಯ ನಿಲುವೇನು;	ಈ ವಿಷಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ಆದೇಶದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಆ)	ಅರಣ್ಯ ಸ್ವರೂಪ ಇಲ್ಲದೇ ಇರುವ ಎಷ್ಟು ಎಕರೆ ಪ್ರದೇಶವನ್ನು ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಲಾಗಿದೆ, ಇದರಲ್ಲಿ ಕಂದಾಯ ಇಲಾಖೆಯ ವ್ಯಾಪ್ತಿಯ ಎಷ್ಟು ಪ್ರದೇಶಗಳನ್ನು ಸೇರಿಸಲಾಗಿದೆ (ಉಡುಪಿ ಜಿಲ್ಲೆಯ ಸಂಪೂರ್ಣ ವಿವರಗಳನ್ನು ನೀಡುವುದು);	ಅರಣ್ಯ ಸ್ವರೂಪ ಇಲ್ಲದ ಪ್ರದೇಶ, ಸರ್ವೆ ನಂಬರ್ ಪುನರಾವರ್ತನೆಯಾದ ಪ್ರದೇಶ 2.00 ಹೆಕ್ಟೇರ್ ಒಳಗಿನ ಪ್ರದೇಶ, ಮೀಸಲು ಅರಣ್ಯ ಇರುವ ಪುನರಾವರ್ತನೆಯಾದ ಪ್ರದೇಶ, ಸರಕಾರಿ ಭೂಮಿ ಲಭ್ಯವಿಲ್ಲದ ಪ್ರದೇಶ, ಶಾಲಾ ನೆಡುತೋಪು ಪ್ರದೇಶ ಮತ್ತು ರಸ್ತೆ ಬದಿ ತೋಪುಗಳುಳ್ಳ 86286.37 ಎಕರೆ (34918.20 ಹೆಕ್ಟೇರ್) ಪ್ರದೇಶಗಳನ್ನು ಡೀಮ್ಡ್ ಫಾರೆಸ್ಟ್ ಪಟ್ಟಿಯಲ್ಲಿ ಸೇರಿಸಲಾಗಿದ್ದು, ರಾಜ್ಯ ಸರಕಾರದ ಆದೇಶ ಸಂಖ್ಯೆ:ಎಫ್.ಇ.ಇ/185/ಎಫ್.ಎ.ಎಫ್/2011, ದಿನಾಂಕ:15.05.2014 ರಲ್ಲಿ ತಿಳಿಸಿದ ಮಾನದಂಡದಂತೆ ಸದರಿ ಪ್ರದೇಶಗಳನ್ನು ಡೀಮ್ಡ್ ಫಾರೆಸ್ಟ್ ಪಟ್ಟಿಯಿಂದ ವಿರಹಿತಗೊಳಿಸಲು ಉಡುಪಿ ಜಿಲ್ಲಾ ಡೀಮ್ಡ್ ಫಾರೆಸ್ಟ್ ಪರಿಶೀಲನಾ ಸಮಿತಿಯಿಂದ ದಿನಾಂಕ: 26.11.2015 ರಂದು ವರದಿ ಸಲ್ಲಿಸಲಾಗಿರುತ್ತದೆ. ಮೀಸಲು ಅರಣ್ಯ ಪುನರಾವರ್ತನೆ ಯಾದ ಪ್ರದೇಶ ಹೊರತು ಪಡಿಸಿ ಉಳಿದ ಎಲ್ಲಾ ಪ್ರದೇಶಗಳು ಕಂದಾಯ ಇಲಾಖೆ ಪಹಣಿಯಲ್ಲಿ ಸರಕಾರ ಎಂದು ನಮೂದಾಗಿರುವ ಪ್ರದೇಶ ಗಳಾಗಿರುತ್ತದೆ.
ಇ)	ಈ ಬಗ್ಗೆ ಅರಣ್ಯ ಮತ್ತು ಪರಿಸರ ಇಲಾಖೆಗಳು ಜಂಟಿ ಸರ್ವೆ ನಡೆಸಿ ವಿರಹಿತ ಮಾಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?	ಈ ಬಗ್ಗೆ ಅರಣ್ಯ ಮತ್ತು ಪರಿಸರ ಇಲಾಖೆಗಳು ಜಂಟಿ ಸರ್ವೆ ನಡೆಸಿರುವುದಿಲ್ಲವೆಂದು ಅರಣ್ಯ ಇಲಾಖೆಯು ತಿಳಿಸಿರುತ್ತದೆ.

(ಕಡತ ಸಂಖ್ಯೆ:ಕಂಇ 34 ಎಲ್‌ಜಿಎ 2021)

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	::	2229
ಸದಸ್ಯರ ಹೆಸರು	::	ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
ಉತ್ತರಿಸುವ ದಿನಾಂಕ:	::	15.03.2021
ಉತ್ತರಿಸುವ ಸಚಿವರು	::	ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹೊಸದುರ್ಗ ಪುರಸಭೆ ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಬಡವರ ವಾಸದ ಮನೆಗಳ ಸಕ್ರಮೀಕರಣಕ್ಕೆ ಕಳೆದ ಮೂರು ವರ್ಷಗಳಿಂದ ಎಷ್ಟು ಅರ್ಜಿಗಳು ಬಂದಿರುತ್ತವೆ; 94ಸಿಸಿ ಮತ್ತು 94ಸಿ ಅಕ್ರಮ-ಸಕ್ರಮಕ್ಕೆ ಪುರಸಭೆ ವ್ಯಾಪ್ತಿಯಲ್ಲಿ ಎಷ್ಟು ಕಿ.ಮೀ ಸಕ್ರಮಗೊಳಿಸಬಹುದಾಗಿದೆ?	ಹೊಸದುರ್ಗ ಪುರಸಭೆ ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಬಡವರ ವಾಸದ ಮನೆಗಳ ಸಕ್ರಮೀಕರಣ ಕೋರಿ 94ಸಿಸಿ ರಡಿ 1133 ಅರ್ಜಿಗಳು ಮತ್ತು 94ಸಿ ರಡಿ 845 ಅರ್ಜಿಗಳು ಸ್ವೀಕೃತಗೊಂಡಿರುತ್ತದೆ. 94ಸಿಸಿ ಮತ್ತು 94ಸಿ ರಡಿ ಪುರಸಭೆ ಪರಿಮಿತಿ ದೂರದಿಂದ 3 ಕಿ.ಮೀ. ಹೊರಗಿನ ವ್ಯಾಪ್ತಿಯಲ್ಲಿ ಸಕ್ರಮಗೊಳಿಸಬಹುದಾಗಿದೆ.

ಸಂಖ್ಯೆ: ಆರ್‌ಡಿ 20 ಎಲ್‌ಜಿಸಿ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2230

ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)

ಉತ್ತರಿಸುವ ದಿನಾಂಕ : 15.03.2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅರಣ್ಯ ಇಲಾಖೆ ನೀಡಿರುವ ಡೀಮ್ಡ್ ಫಾರೆಸ್ಟ್ ಅಡಿಯಲ್ಲಿನ ಕಂದಾಯ ಜಾಗವನ್ನು ಕಂದಾಯ ಇಲಾಖೆಗೆ ಹಿಂಪಡೆಯುವ ಪ್ರಕ್ರಿಯೆ ಯಾವ ಹಂತದಲ್ಲಿದೆ;	ಈ ವಿಷಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡುವ ಆದೇಶದಂತೆ ಮುಂದಿನ ಕ್ರಮಕೈಗೊಳ್ಳಲಾಗುವುದು.
ಆ)	ಹೊಸದುರ್ಗ ತಾಲ್ಲೂಕು ಗೊರವಿನಕಲ್ಲು ಸರ್ವೆ ನಂಬರ್ 86,87 ಮತ್ತು 87ರಲ್ಲಿನ ಡೀಮ್ಡ್ ಅರಣ್ಯ ಪ್ರದೇಶದ ಜಾಗವನ್ನು ವಾಪಸ್ಸು ಪಡೆದು 24 ಎಕರೆ ಅರಣ್ಯ ಪ್ರದೇಶವನ್ನು ವಸತಿ ಇಲಾಖೆಗೆ ಯಾವಾಗ ಮಂಜೂರು ಮಾಡಲಾಗುವುದು; ಪ್ರಸ್ತುತ ಈ ಪ್ರಕ್ರಿಯೆ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಮಾಡಲಾಗುವುದು?	ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿರುವ ರಿ.ಸ.ನಂ. 86ರಲ್ಲಿ 24-15 ಎಕರೆ/ಗುಂಟೆ ಜಮೀನು ಪಹಣಿಯಲ್ಲಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದೆ ಎಂದು ನಮೂದಾಗಿರುವುದರಿಂದ ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ಅರಣ್ಯ ಉದ್ದೇಶಕ್ಕಾಗಿ ಎಂಬ ಪದದ ಪರಿಭಾಷೆಯ ವ್ಯಾಪ್ತಿಯಲ್ಲಿ ಬರುವುದರಿಂದ ಸದರಿ ಜಮೀನನ್ನು ವಸತಿ ಇಲಾಖೆಗೆ ಮಂಜೂರು ಮಾಡಲು ಬರುವುದಿಲ್ಲ.

ಸಂಖ್ಯೆ: ಆರ್‌ಡಿ 54 ಎಲ್‌ಜಿಕ್ಯೂ 2021

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2231**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಬಸವ ವಸತಿ ಯೋಜನೆಯಡಿ ಸರ್ಕಾರ ಎಷ್ಟು ಮನೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ; ಇದಕ್ಕೆ ವಿನಿಯೋಗಿಸಿದ ಅನುದಾನ ಎಷ್ಟು; ಎಷ್ಟು ಮನೆಗಳನ್ನು ಪೂರ್ಣಗೊಳಿಸಲಾಗಿದೆ; (ಕ್ಷೇತ್ರವಾರು ಮಾಹಿತಿ ನೀಡುವುದು)	2017-18ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿ 333662 ಮನೆಗಳನ್ನು ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಲಾಗಿದ್ದು,ಸದರಿ ಮನೆಗಳ ಪೈಕಿ 163279 ಮನೆಗಳು ಪೂರ್ಣಗೊಂಡಿವೆ. ಕ್ಷೇತ್ರವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. 2017-18 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳಿಗೆ ರೂ.2304.85 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಕ್ಷೇತ್ರವಾರು ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
(ಆ)	ಹೊಸದುರ್ಗ ತಾಲ್ಲೂಕಿಗೆ 3 ವರ್ಷಗಳಿಂದ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; ಇದಕ್ಕೆ ಒಟ್ಟು ಎಷ್ಟು ಹಣ ಉಪಯೋಗಿಸಲಾಗಿದೆ; ಎಷ್ಟು ಬಾಕಿ ಇದೆ;	ಹೊಸದುರ್ಗ ತಾಲ್ಲೂಕಿಗೆ 2017-18 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ 2152 ಮನೆಗಳನ್ನು ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಲಾಗಿರುತ್ತದೆ. ಹೊಸದುರ್ಗ ತಾಲ್ಲೂಕಿಗೆ 2017-18 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳಿಗೆ ರೂ.23.97 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ,
(ಇ)	ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಅಲೆಮಾರಿ ಜನಾಂಗದವರಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆ; ಒದಗಿಸಲಾಗಿರುವ ಅನುದಾನವೆಷ್ಟು?	ಹೊಸದುರ್ಗ ತಾಲ್ಲೂಕಿಗೆ ಕಳೆದ 3 ವರ್ಷಗಳಿಂದ ಅಂದರೆ 2017-18 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲೆಮಾರಿ ಜನಾಂಗದ 60 ಫಲಾನುಭವಿಗಳ ಪಟ್ಟಿಯನ್ನು ನಿಗಮಕ್ಕೆ ಸಲ್ಲಿಸಿದ್ದು, ಅದರಂತೆ ಆನ್ ಲೈನ್ ನಲ್ಲಿ ಗುರಿ ನಿಗಧಿಪಡಿಸಲಾಗಿರುತ್ತದೆ. ಆನ್ ಲೈನ್ ನಲ್ಲಿ ಫಲಾನುಭವಿಗಳ ಮಾಹಿತಿಯನ್ನು ಅಳವಡಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು 1308 ವಸತಿ ರಹಿತ ಅಲೆಮಾರಿ ಜನಾಂಗದವರಿಗೆ ವಸತಿ ಕಲ್ಪಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ :ವಇ 118 ಹೆಚ್ಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2237
ಮಾನ್ಯ ಸದಸ್ಯರ ಹೆಸರು	ಶ್ರೀ. ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮನಗೂಳಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಕಟ್ಟಡ ನಿರ್ಮಿಸಲು ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಈ ಅನುದಾನವನ್ನು ಯಾವ ವರ್ಷ ಮಂಜೂರು ಮಾಡಲಾಗಿದೆ;	ಮನಗೂಳಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಕಟ್ಟಡ ನಿರ್ಮಿಸಲು ರೂ.326.32 ಲಕ್ಷಗಳ ಅನುದಾನವನ್ನು 2017-18 ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ.
ಆ)	ಕಟ್ಟಡ ನಿರ್ಮಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;	2017-18ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಬಸವನಬಾಗೇವಾಡಿ ತಾಲ್ಲೂಕು ಬಸವನಬಾಗೇವಾಡಿ ಟೌನ್‌ಗೆ ಈ ವಿದ್ಯಾರ್ಥಿನಿಲಯ ಕಟ್ಟಡವು ಮಂಜೂರಾಗಿದ್ದು, ನಿವೇಶನದ ಸಮಸ್ಯೆಯಿಂದ ಈ ವಿದ್ಯಾರ್ಥಿನಿಲಯ ಕಟ್ಟಡದ ಬದಲಾಗಿ ಇದೇ ತಾಲ್ಲೂಕಿನ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಮನಗೂಳಿ ಈ ಕಟ್ಟಡವನ್ನು ನಿರ್ಮಿಸಲು ಬದಲಾವಣೆ ಆದೇಶ ಹೊರಡಿಸಲಾಗಿದೆ. ಮನಗೂಳಿ ಗ್ರಾಮದ 6 ಎಕರೆ 28 ಗುಂಟೆಯ ಉನ್ನತ ಶಿಕ್ಷಣ ಇಲಾಖೆ ಪ್ರಥಮ ದರ್ಜೆ ಕಾಲೇಜಿನ 20 ಗುಂಟೆ ಜಮೀನನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿಕೊಂಡು ನಿರ್ಮಾಣ ಏಜೆನ್ಸಿಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಹಸ್ತಾಂತರಿಸುವಲ್ಲಿ ವಿಳಂಬವಾಗಿರುತ್ತದೆ
ಇ)	ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಕಟ್ಟಡ ನಿರ್ಮಿಸುವ ಕಾಮಗಾರಿ ಪ್ರಾರಂಭಿಸಲಾಗುವುದು?	ಪ್ರಸ್ತುತ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಸಲ್ಲಿಸಿರುವ ರೂ.470.00 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ವಿದ್ಯಾರ್ಥಿನಿಲಯದ ನಿರ್ಮಾಣ ಕಾರ್ಯವನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

ಸಂಖ್ಯೆ:ಹಿಂವಕ 193 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2241
ಸದಸ್ಯರ ಹೆಸರು	:	ಶ್ರೀ. ವೆಂಕಟರೆಡ್ಡಿ ಮುದ್ನಾಳ್
ಉತ್ತರಿಸುವ ದಿನಾಂಕ	:	15/03/2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಸರ್ಕಾರಿ ಕಟ್ಟಡ ಮತ್ತು ಬಾಡಿಗೆ /ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳೆಷ್ಟು:</td><td>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಸರ್ಕಾರಿ/ಬಾಡಿಗೆ ಖಾಸಗಿ ಕಟ್ಟಡದಲ್ಲಿ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿರುತ್ತದೆ.

<table>
<tr><th></th><th>ಸರ್ಕಾರಿ ಕಟ್ಟಡ</th><th>ಬಾಡಿಗೆ/ ಖಾಸಗಿ ಕಟ್ಟಡ</th><th>ಬಾಡಿಗೆ ರಹಿತ</th><th>ಒಟ್ಟು</th></tr>
<tr><td>ಪರಿಶಿಷ್ಟ ಜಾತಿ</td><td>1526</td><td>284</td><td>57</td><td>1867</td></tr>
<tr><td>ಪರಿಶಿಷ್ಟ ಪಂಗಡ</td><td>168</td><td>66</td><td>18</td><td>252</td></tr>
</table>
</td></tr>
<tr><td>ಆ)</td><td>ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರ ಪ್ರತಿವರ್ಷ ಎಷ್ಟು ಹಣವನ್ನು ನೀಡಲಾಗಿದೆ (ಪೂರ್ಣ ವಿವರ ನೀಡುವುದು)?</td><td>ಸಮಾಜ ಕಲ್ಯಾಣ ಇಲಾಖಾ ವತಿಯಿಂದ 284 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಸಲಾಗುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳಿಗೆ ಪ್ರತಿ ವರ್ಷ ರೂ.11,88,99,301/-ಗಳಷ್ಟು ಬಾಡಿಗೆಯನ್ನು ಪಾವತಿಸಲಾಗುತ್ತಿದೆ.

ಪರಿಶಿಷ್ಟ ಪಂಗಡದ 66 ವಿದ್ಯಾರ್ಥಿನಿಲಯಗಳಿಗೆ ವಾರ್ಷಿಕ ರೂ.4,99,44,876/-ಗಳ ಬಾಡಿಗೆ ಮೊತ್ತವನ್ನು ಪಾವತಿಸಲಾಗುತ್ತಿದೆ.</td></tr>
</table>

ಸಕಇ 106 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2244
2	ಸದಸ್ಯರ ಹೆಸರು	ಶ್ರೀ ಭೀಮಾನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿ ಗ್ರಾಮದಲ್ಲಿ ಹೊಸದಾಗಿ ನಾಡಕಛೇರಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ತಂಬ್ರಹಳ್ಳಿ ಗ್ರಾಮದಲ್ಲಿ ಹೊಸದಾಗಿ ನಾಡಕಛೇರಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ.
ಆ)	ಇದ್ದಲ್ಲಿ ಪ್ರಕ್ರಿಯೆ ಯಾವ ಹಂತದಲ್ಲಿದೆ?	ಹಗರಿಬೊಮ್ಮನಹಳ್ಳಿ ತಾಲೂಕಿನ ತಂಬ್ರಹಳ್ಳಿ ನಾಡಕಛೇರಿ ಸೇರಿದಂತೆ ರಾಜ್ಯದ ಒಟ್ಟು 21 ನಾಡಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಪ್ರಸ್ತಾವನೆ ಸ್ವೀಕೃತವಾಗಿದ್ದು, 2021-22ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾಗುವ ಅನುದಾನವನ್ನು ಆಧರಿಸಿ ಸದರಿ ನಾಡಕಚೇರಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕಂಇ 16 ಎಜೆಎಸ್ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **2249**

ಉತ್ತರಿಸಬೇಕಾದ ದಿನಾಂಕ : **15.03.2021.**

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಹಾಸನ ನಗರದಲ್ಲಿರುವ ಸರ್ಕಾರಿ ಪಶುವೈದ್ಯಕೀಯ ಕಾಲೇಜಿನ ಆವರಣದಲ್ಲಿ ಬಾಲಕಿಯರ ವಸತಿ ನಿಲಯದ 2ನೇ ಮಹಡಿ ನಿರ್ಮಾಣ. ಅಡಿಟೋರಿಯಂ ಕಟ್ಟಡ ನಿರ್ಮಾಣ, ಸಂಪರ್ಕ ರಸ್ತೆಗಳು, ಬಿ&ಸಿ ಮಾದರಿ ವಸತಿಗೃಹಗಳ ನಿರ್ಮಾಣ, ಜನುವಾರು ಶವಾಗಾರ ಕಟ್ಟಡ ನಿರ್ಮಾಣ, ಜಾನುವಾರು ಅಸ್ಪತ್ರೆ ಕಟ್ಟಡ ನಿರ್ಮಾಣ ಹಾಗೂ ಶೆಡ್‌ಗಳ ನಿರ್ಮಾಣ ಇತ್ಯಾದಿ ಕಾಮಗಾರಿಗಳಿಗಾಗಿ ರೂ.23.00 ಕೋಟಿಗಳ ಮೊತ್ತದ ಅಂದಾಜಿನ ಪ್ರಸ್ತಾವನೆಯನ್ನು ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರುರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನಾ ಇಲಾಖೆ, ಇವರಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನು ಬಿಡುಗಡೆಗೊಳಿಸಲು ಕೋರಿರುವ ಪ್ರಸ್ತಾವನೆಯಂತೆ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್‌ನ ಅಂಗ ಸಂಸ್ಥೆಯಾದ ಹಾಸನದ ಪಶುವೈದ್ಯಕೀಯ ಕಾಲೇಜಿಗೆ ಮೂಲಭೂತ ಸೌಕರ್ಯಗಳಾದ ಬಾಲಕಿಯರ ವಸತಿ ನಿಲಯದ 2ನೇ ಮಹಡಿ ನಿರ್ಮಾಣ, ಆಡಿಟೋರಿಯಂ ಕಟ್ಟಡ ನಿರ್ಮಾಣ, ಸಂಪರ್ಕ ರಸ್ತೆಗಳು ಬಿ ಮತ್ತು ಸಿ ಮಾದರಿ ವಸತಿ ಗೃಹಗಳ ನಿರ್ಮಾಣ, ಜಾನುವಾರು ಶವಾಗಾರ ಕಟ್ಟಡ ನಿರ್ಮಾಣ, ಜಾನುವಾರು ಆಸ್ಪತ್ರೆ ಕಟ್ಟಡ ನಿರ್ಮಾಣ ಹಾಗೂ ಶೆಡ್‌ಗಳ ನಿರ್ಮಾಣ ಕಾಮಗಾರಿಗಳಿಗಾಗಿ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯನ್ನು ಕೋರಿದ್ದು, ಸದರಿ ಇಲಾಖೆಯು ಕೋರಿರುವ ಮಾಹಿತಿ ಮತ್ತು ದಾಖಲೆಗಳನ್ನು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇಲ್ಲಿಂದ ಪಡೆದು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.
ಆ	ಈ ಪಶುವೈದ್ಯಕೀಯ ಕಾಲೇಜಿನ ಹಂತ–4 ರ ಕಾಮಗಾರಿಗಳಿಗಾಗಿ ರೂ. 23.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲು ಯಾವ ಕಾಲಮಿತಿಯೊಳಗೆ ಸರ್ಕಾರ ಕ್ರಮ ಕೈಗೊಳ್ಳುವುದು? (ಸಂಪೂರ್ಣ ಮಾಹಿತಿ ನೀಡುವುದು).	ಹಾಸನ ಪಶುವೈದ್ಯಕೀಯ ಕಾಲೇಜಿನ ಹಂತ–3 ರ ಕಾಮಗಾರಿಗಳು ಪೂರ್ಣಗೊಂಡ ನಂತರ ಈ ಕುರಿತು ಸೂಕ್ತ ಕ್ರಮವಹಿಸಲಾಗುವುದು.

ಪಸಂಮೀ ಇ–82 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
9ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.	:	2255
ಮಾನ್ಯ ಸದಸ್ಯರ ಹೆಸರು	:	ಶ್ರೀ. ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುಂಗಭದ್ರಾ ನದಿಗೆ ಕೂಡ್ಲಿಯಿಂದ ಡಣಾಯಕಪುರ ಮಧ್ಯೆ ಸೇತುವೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುಂಗಭದ್ರಾ ನದಿಗೆ ಕೂಡ್ಲಿಯಿಂದ ಡಣಾಯಕಪುರ ಮಧ್ಯೆ ಸೇತುವೆಯನ್ನು ನಿರ್ಮಿಸುವ ಪ್ರಸ್ತಾವನೆಗೆ ರೇಖಾ ಅಂದಾಜು ಪಟ್ಟಿ ಮೊತ್ತ ರೂ.18.00 ಕೋಟಿಗಳಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಸ್ವೀಕರಿಸಲಾಗಿದೆ.
(ಆ)	ಇದ್ದಲ್ಲಿ, ಯಾವಾಗ ಸೇತುವೆಯನ್ನು ನಿರ್ಮಿಸಲಾಗುವುದು?	ಸೇತುವೆಯನ್ನು ಅನುದಾನದ ಲಭ್ಯತೆ ಮೇರೆಗೆ ಕೈಗೊಳ್ಳಲು ಯೋಜಿಸಲಾಗುವುದು.

ಸಂಖ್ಯೆ. ಲೋಇ E-111 ಇಎಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2258
ಸದಸ್ಯರ ಹೆಸರು	ಶ್ರೀ. ಅಶೋಕ್ ನಾಯಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ)
ವಿಷಯ	"ಸಾಮಾಜಿಕ ಭದ್ರತಾ ಪಿಂಚಣಿ"
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು.
ಪ್ರಶ್ನೆ	ಉತ್ತರ
ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿಗಳ ಅಡಿ ಬರುವ ಫಲಾನುಭವಿಗಳ ಸಂಖ್ಯೆ ಎಷ್ಟು;	ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತದಲ್ಲಿ ಒಟ್ಟು 16178 ಫಲಾನುಭವಿಗಳು ಪಿಂಚಣಿ ಪಡೆಯುತ್ತಿರುತ್ತಾರೆ.
ಆ) ಈ ಫಲಾನುಭವಿಗಳಿಗೆ ಪ್ರತಿ ತಿಂಗಳು ಪಿಂಚಣಿಗಳು ಲಭ್ಯವಾಗುತ್ತಿದೆಯೇ;	ಒಟ್ಟು 16178 ಫಲಾನುಭವಿಗಳ ಪೈಕಿ 15820 ಫಲಾನುಭವಿಗಳಿಗೆ ನಿಯಮಿತವಾಗಿ ಪಿಂಚಣಿ ಪಾವತಿಯಾಗುತ್ತಿದೆ.
ಇ) ಹಲವಾರು ಫಲಾನುಭವಿಗಳಿಗೆ ಸರ್ಕಾರದಿಂದ ಮಂಜೂರಾತಿ ಆದೇಶ ನೀಡಿದ್ದರೂ ಹಲವಾರು ತಿಂಗಳುಗಳಿಂದ ಪಿಂಚಣಿ ಲಭ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	16178 ಫಲಾನುಭವಿಗಳ ಪೈಕಿ 358 ಫಲಾನುಭವಿಗಳಿಗೆ ಅಸಮರ್ಪಕ ಬ್ಯಾಂಕ್ ಖಾತೆ / ಐ.ಎಫ್.ಎಸ್.ಸಿ ಕೋಡ್ ಹಾಗೂ ವಿಳಾಸ/ಪಿನ್‌ಕೋಡ್ ಮಾಹಿತಿ ಕಾರಣದಿಂದ ಪಿಂಚಣಿ ಪಾವತಿಯಾಗದೇ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಈ) ಬಂದಿದ್ದಲ್ಲಿ, ಪಿಂಚಣಿ ಲಭ್ಯವಾಗದೇ ಇರಲು ಕಾರಣಗಳೇನು; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?	ತಾತ್ಕಾಲಿಕವಾಗಿ ಸ್ಥಗಿತಗೊಂಡ ಪ್ರಕರಣಗಳನ್ನು ಕಡ್ಡಾಯ ಭೌತಿಕ ಪರಿಶೀಲನೆಗೆ ಒಳಪಡಿಸಿ, ನಿಖರ ಮಾಹಿತಿಯನ್ನು ಸಂಗ್ರಹಿಸಿ ಪಿಂಚಣಿ ಮರುಚಾಲನೆಗೆ ಕ್ರಮವಹಿಸಲಾಗುತ್ತಿದೆ. ಸಮರ್ಪಕ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ತಾಲ್ಲೂಕು ಮಟ್ಟದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಂಜೂರಾತಿ ಪ್ರಾಧಿಕಾರಿಗಳಾದ ತಹಶೀಲ್ದಾರರು ಫಲಾನುಭವಿಗಳ ಮಾಹಿತಿಯಲ್ಲಿನ ನ್ಯೂನ್ಯತೆಯನ್ನು ಸರಿಪಡಿಸಿ ಕ್ರಮವಹಿಸಿದ ಪ್ರಕರಣಗಳನ್ನು ಅನುಕಲನೆ ಮೂಲಕ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸಿ, ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: DSSP/LAQ/ 14/2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	2259
ಸದಸ್ಯರ ಹೆಸರು :	ಶ್ರೀ ಸತೀಶ್ ಎಲ್.ಜಾರಕಿಹೊಳಿ (ಯಮಕನಮರಡಿ)
ಉತ್ತರಿಸಬೇಕಾದ ದಿನಾಂಕ :	15.03.2021
ಉತ್ತರಿಸಬೇಕಾದ ಸಚಿವರ ಹೆಸರು :	ಮಾನ್ಯ ಕಂದಾಯ ಸಚಿವರು

	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿರುವ ಭೂಸ್ವಾಧೀನ ಕಛೇರಿಯಲ್ಲಿ ಪದೇ ಪದೇ ನಕಲಿ ದಾಖಲೆ ಸೃಷ್ಟಿಸಿ ಭೂಮಿ ಮಂಜೂರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.
(ಆ)	ಬಂದಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ;	ಅನ್ವಯಿಸುವುದಿಲ್ಲ.
(ಇ)	ಈ ರೀತಿಯ ಪ್ರಕರಣಗಳನ್ನು ತಡೆಯಲು ಸರ್ಕಾರ ಯಾವ ಕ್ರಮಕೈಗೊಳ್ಳುತ್ತಿದೆ (ವಿವರ ನೀಡುವುದು)?	ನಿರ್ದಿಷ್ಟ ದೂರು ಮಾಹಿತಿ ಒದಗಿಸಿದ್ದಲ್ಲಿ ತುರ್ತು ಕ್ರಮ ಜರುಗಿಸಲಾಗುತ್ತದೆ.

ಸಂಖ್ಯೆ : ಆರ್.ಡಿ 03 ಭೂಸ್ವಾಳ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2262
ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ
ಉತ್ತರಿಸುವ ದಿನಾಂಕ : 15.03.2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮ. ಭೋವಿ ಅಭಿವೃದ್ಧಿ ನಿಗಮ. ಆದಿ ಜಾಂಬವ ಅಭಿವೃದ್ಧಿ ನಿಗಮ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮಗಳನ್ನು ಮಾಡಿದ್ದು, ಉಪ ಜಾತಿಗಳ ಅನುಸಾರ ಉದ್ಯಮಶೀಲತಾ ಸಾಲದ ವ್ಯವಸ್ಥೆಯನ್ನು ಮಾಡುತ್ತಿರುವುದು ಸರಿಯೇ	ಹೌದು.
ಆ)	ಪ್ರಸ್ತುತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಜಾತಿ ಪ್ರಮಾಣ ಪತ್ರವು ಜೀವಿತಾವಧಿಯದ್ದಾಗಿದ್ದು, ಹಲವಾರು ಜನರ ಜಾತಿ ಪ್ರಮಾಣ ಪತ್ರದಲ್ಲಿ ಪರಿಶಿಷ್ಟ ಜಾತಿ ಆದಿಕರ್ನಾಟಕ ಎಂದು ಮಾತ್ರ ಮುದ್ರಣಗೊಂಡಿರುತ್ತದೆಯೇ ಹೊರತು ಉಪಜಾತಿಯ ಹೆಸರು ಮುದ್ರಣಗೊಂಡಿಲ್ಲದಿರುವುದರಿಂದ ಜನರು ಉದ್ಯಮಶೀಲತಾ ಸಾಲದ ಹಣವನ್ನು ಪಡೆಯಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು (ಮಾಹಿತಿ ನೀಡುವುದು)	ಬಂದಿಲ್ಲ.

ಸಂಖ್ಯೆ: ಸಕಇ 49 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1371
ಮಾನ್ಯ ಸದಸ್ಯರ ಹೆಸರು	ಶ್ರೀ ಅಮೃತ್ ಅಯ್ಯಪ್ಪ ದೇಸಾಯಿ (ಧಾರವಾಡ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿದ್ಯಾಕಾಶಿ ಧಾರವಾಡಕ್ಕೆ ಹಾವೇರಿ, ಬಾಗಲಕೋಟೆ, ಕಾರವಾರ, ಬಿಜಾಪೂರ, ಬೆಳಗಾವಿ ಇತ್ಯಾದಿ ಹಲವಾರು ಜಿಲ್ಲೆಗಳಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದು, 2020-21ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದಿದ್ದು ಹಾಸ್ಟೆಲ್‌ಗಾಗಿ ಸುಮಾರು 14000ರಷ್ಟು ಅರ್ಜಿ ಸ್ವೀಕೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2020-21ನೇ ಸಾಲಿಗೆ ಧಾರವಾಡ ತಾಲ್ಲೂಕಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಸುಮಾರು 13334 ಅರ್ಜಿಗಳು ಸ್ವೀಕೃತವಾಗಿರುತ್ತವೆ.
ಆ)	2020-21ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಒಟ್ಟಾರೆಯಾಗಿ ಕೇವಲ 600 ರಷ್ಟು ಮಾತ್ರ ಸೀಟು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2020-21ನೇ ಸಾಲಿನಲ್ಲಿ ಧಾರವಾಡ ತಾಲ್ಲೂಕಿನ ವಿದ್ಯಾರ್ಥಿ ನಿಲಯಗಳಲ್ಲಿನ ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಲಭ್ಯವಿರುವ ಸೀಟುಗಳ ಹಾಗೂ ಪ್ರವೇಶ ಕೋರಿ ಬಂದಿರುವ ಅರ್ಜಿಗಳ ವಿವರ ಕೆಳಕಂಡಂತಿವೆ. (ಕೆಳಗಿನ ಕೋಷ್ಟಕ ನೋಡಿ)

ಕ್ರ. ಸಂ	ವಿವರ	ವಸತಿ ನಿಲಯಗಳ ಸಂಖ್ಯೆ	ಪ್ರವೇಶಕ್ಕೆ ಲಭ್ಯವಿದ್ದ ಸೀಟುಗಳ ಸಂಖ್ಯೆ	ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ
1	ಪದವಿ/ಪಿಯುಸಿ	15	592	10184
2	ಸ್ನಾತಕೋತ್ತರ	5	315	1417
3	ವೃತ್ತಿಪರ	5	182	1733
	ಒಟ್ಟು	25	1089	13334

ಕ್ರ. ಸಂ.	ಪ್ರಶ್ನೆ	ಉತ್ತರ
ಇ)	ಬಂದಿದ್ದಲ್ಲಿ ಇನ್ನುಳಿದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ದೊರಕಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ನಿಗಧಿಪಡಿಸಿರುವ ಮಂಜೂರಾತಿ ಸಂಖ್ಯೆಗನುಗುಣವಾಗಿ ಪ್ರವೇಶ ನಿಯಮಗಳನುಸಾರ ಪ್ರವರ್ಗವಾರು ಅರ್ಹ ವಿದ್ಯಾರ್ಥಿಗಳಿಗೆ ದಾಖಲಾತಿಯನ್ನು ಕಲ್ಪಿಸಲಾಗುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುವ ದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 352 ಬಿಎಂಎಸ್ 2019 ದಿನಾಂಕ:20.1.2020 ರಲ್ಲಿ ರಾಜ್ಯದ ವಿವಿಧ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಸಂಖ್ಯಾಬಲ ಹೆಚ್ಚಳ ಮಾಡಲಾಗುತ್ತಿದ್ದು, ಅದರಂತೆ ಧಾರವಾಡದ ತಾಲ್ಲೂಕಿನ 7 ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿಯಾಗಿ 110 ವಿದ್ಯಾರ್ಥಿಗಳಿಗೆ ಸಂಖ್ಯಾಬಲವನ್ನು ಹೆಚ್ಚಿಸಲಾಗಿರುತ್ತದೆ.

		ಮುಂದುವರೆದು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪರ್ಯಾಯವಾಗಿ ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಅನುದಾನದ ಲಭ್ಯತೆಯನುಸಾರ 10 ತಿಂಗಳ ಅವಧಿಗೆ ರೂ.15,000/-ಗಳನ್ನು ಮಂಜೂರು ಮಾಡಲಾಗುತ್ತಿದೆ.
ಈ)	ವಿದ್ಯಾಕಾಶಿ ಧಾರವಾಡಕ್ಕೆ ಹೊಸ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಪ್ರಸ್ತುತ ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಉ)	ಇದ್ದಲ್ಲಿ ಹೊಸ ಹಾಸ್ಟೆಲ್ ಗಳನ್ನು ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?	ಹೊಸ ವಿದ್ಯಾರ್ಥಿ ನಿಲಯಗಳ ಮಂಜೂರಾತಿಯ ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಆಯ-ವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನು ಆಧರಿಸಿರುತ್ತದೆ.

ಸಂಖ್ಯೆ:ಹಿಂವಕ 189 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1376**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಉಡುಪಿ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತ್‌ಗಳಲ್ಲಿ ವಸತಿ ಯೋಜನೆಯಡಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಉಡುಪಿ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಲ್ಲಿ 2010-11 ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ವಸತಿ ಯೋಜನೆಗಳಡಿ 47653 ಫಲಾನುಭವಿಗಳಿಗೆ ಮನೆ ಮಂಜೂರು ಮಾಡಲಾಗಿದ್ದು, 31192 ಮನೆಗಳು ಪೂರ್ಣಗೊಂಡಿರುತ್ತದೆ. 4575 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ. ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತಿದೆ.
<table>
<tr><th>ತಾಲ್ಲೂಕು</th><th>ಮಂಜೂರಾದ ಮನೆಗಳು</th><th>ಪೂರ್ಣಗೊಂಡ ಮನೆಗಳು</th><th>ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳು</th></tr>
<tr><td>ಬ್ರಹ್ಮಾವರ</td><td>7902</td><td>4815</td><td>678</td></tr>
<tr><td>ಬೈಂದೂರು</td><td>6210</td><td>3985</td><td>727</td></tr>
<tr><td>ಹೆಬ್ರಿ</td><td>982</td><td>681</td><td>108</td></tr>
<tr><td>ಕಾಪು</td><td>3948</td><td>2377</td><td>353</td></tr>
<tr><td>ಕಾರ್ಕಳ</td><td>10437</td><td>7103</td><td>970</td></tr>
<tr><td>ಕುಂದಾಪುರ</td><td>14199</td><td>9628</td><td>1440</td></tr>
<tr><td>ಉಡುಪಿ</td><td>3975</td><td>2603</td><td>299</td></tr>
<tr><td>ಒಟ್ಟು</td><td>47653</td><td>31192</td><td>4575</td></tr>
</table>
</td></tr>
<tr><td>(ಆ)</td><td>ವಿವಿಧ ಹಂತಗಳಲ್ಲಿ ಮನೆಗಳ ಪ್ರಗತಿ ಆಗಿದ್ದರೂ, ಫಲಾನುಭವಿಗಳ ಖಾತೆಗೆ ಅನುದಾನ ಬಿಡುಗಡೆಗೆ ಬಾಕಿಯಿರುವ ಪ್ರಕರಣಗಳೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಆಯವ್ಯಯದಲ್ಲಿ ಜಿಲ್ಲಾವಾರು/ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಒದಗಿಸದೇ ಯೋಜನಾವಾರು ಮಾತ್ರ ಅನುದಾನವನ್ನು ಒದಗಿಸಿ ಬಿಡುಗಡೆ ಮಾಡಲಾಗುತ್ತಿದ್ದು, ಅದರಂತೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ವಸತಿ ಯೋಜನೆಗಳಡಿ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಅದರಂತೆ ಆಯವ್ಯಯದಲ್ಲಿ ಬಿಡುಗಡೆ ಮಾಡಲಾದ ಅನುದಾನದ ಪೈಕಿ ಉಡುಪಿ ಜಿಲ್ಲೆಗೆ ಇಲ್ಲಿಯವರೆವಿಗೂ ಮಂಜೂರು ಆಗಿರುವ ಮನೆಗಳಿಗೆ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ವಿವಿಧ ವಸತಿ ಯೋಜನೆಗಳಡಿ ರೂ.282.80 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ತಾಲ್ಲುಕವಾರು ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)
<table>
<tr><th>ತಾಲ್ಲೂಕು</th><th>ಬಿಡುಗೆಯಾದ ಮೊತ್ತ</th></tr>
<tr><td>ಬ್ರಹ್ಮಾವರ</td><td>13.48</td></tr>
<tr><td>ಬೈಂದೂರು</td><td>15.91</td></tr>
<tr><td>ಹೆಬ್ರಿ</td><td>2.12</td></tr>
<tr><td>ಕಾಪು</td><td>7.61</td></tr>
<tr><td>ಕಾರ್ಕಳ</td><td>63.88</td></tr>
<tr><td>ಕುಂದಾಪುರ</td><td>114.11</td></tr>
<tr><td>ಉಡುಪಿ</td><td>65.69</td></tr>
<tr><td>ಒಟ್ಟು</td><td>282.80</td></tr>
</table>
ಉಳಿದ ಮನೆಗಳಿಗೆ ಜಿ.ಪಿ.ಎಸ್. ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಎಲ್ಲಾ ಆಧಾರ್ ಮ್ಯಾಪಿಂಗ್ ಆದ ಅರ್ಹ ಫಲಾನುಭವಿಗಳಿಗೆ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.</td></tr>
</table>

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಇ)</td><td>ಕಾಪು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಹಂತಗಳಲ್ಲಿ ಮನೆಗಳ ನಿರ್ಮಾಣವಾಗಿದ್ದು ರೂ ಅನುದಾನ ಬಿಡುಗಡೆಯಾಗದಿರುವ ಪ್ರಕರಣಗಳೇಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಲ್ಲಿಯವರೆವಿಗೂ ವಿವಿಧ ಹಂತಗಳಲ್ಲಿ ಮನೆಗಳ ನಿರ್ಮಾಣ ಮಾಡಿಕೊಂಡ ಫಲಾನುಭವಿಗಳಿಗೆ ಒಟ್ಟಾರೆಯಾಗಿ ರೂ.40.77 ಕೋಟಿಗಳ ಅನುದಾನದ ಬಿಡುಗಡೆ ಮಾಡಲಾಗಿದ್ದು, ತಾಲ್ಲುಕವಾರು ವಿವರ ಈ ಕೆಳಗಿನಂತಿದೆ.
(ರೂ.ಕೋಟಿಗಳಲ್ಲಿ)<table><tr><th>ತಾಲ್ಲೂಕ</th><th>ಬಿಡುಗೆಯಾದ ಮೊತ್ತ</th></tr><tr><td>ಕಾಪು</td><td>8.17</td></tr><tr><td>ಉಡುಪಿ</td><td>32.60</td></tr><tr><td>ಒಟ್ಟು</td><td>40.77</td></tr></table>ಉಳಿದ ಮನೆಗಳಿಗೆ ಜಿ.ಪಿ.ಎಸ್. ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಎಲ್ಲಾ ಆಧಾರ್ ಮ್ಯಾಪಿಂಗ್ ಆದ ಅರ್ಹ ಫಲಾನುಭವಿಗಳಿಗೆ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.</td></tr>
<tr><td>(ಈ)</td><td>ಫಲಾನುಭವಿಗಳ ಖಾತೆಗೆ ಹಣ ಬಿಡುಗಡೆ ಬಾಕಿ ಇರುವುದರಿಂದ, ವಸತಿ ಯೋಜನೆಯಡಿ ಪ್ರಗತಿ ಹಿನ್ನಡೆ ಆಗಿದ್ದು, ಇದರಿಂದ ಯೋಜನೆಯ ಫಲಾನುಭವಿಗಳಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td><td>ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳ ಪೈಕಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ:ವಇ 54 ಹೆಚ್ಎಎಂ 2019, ದಿನಾಂಕ:16.11.2019 ರಲ್ಲಿ ಪ್ರಗತಿಯಲ್ಲಿರುವ ಮನೆಗಳನ್ನು ಇಂದಿರಾ ಮನೆ ಮೊಬೈಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹಗೊಂಡ ನಂತರ ಸದರಿ ಮನೆಗಳ ಪ್ರಗತಿಯನ್ನು ಮತ್ತೊಮ್ಮೆ Geo ಆಧಾರಿತ ವಿಜಿಲ್ ಆಪ್ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರು ಪರಿಶೀಲಿಸಿ ಅರ್ಹಗೊಂಡ ಮನೆಗಳಿಗೆ ಆಧಾರ್ ಜೋಡಣೆಯಾದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಅನುದಾನ ಬಿಡುಗಡೆ ಮಾಡಲಾಗುತ್ತಿತ್ತು.

ವಿಜಿಲ್ ಆಪ್ ಮೂಲಕ ಪರಿಶೀಲಿಸಿ, ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಆಗುತ್ತಿರುವ ವಿಳಂಬವನ್ನು ಗಮನಿಸಿ ಸರ್ಕಾರವು ಆದೇಶ ಸಂಖ್ಯೆ:ವಇ 12 ಹೆಚ್ಎಹೆಚ್ 2020, ದಿನಾಂಕ:01.02.2021 & 02.02.2021 ರಲ್ಲಿ ವಿಜಿಲ್ ಆಪ್ ಮೂಲಕ ಪರಿಶೀಲಿಸುವುದಕ್ಕೆ ದಿನಾಂಕ:31.03.2021 ರವರಗೆ ವಿನಾಯಿತಿ ನೀಡಲಾಗಿದ್ದು, ಅದರಂತೆ ಪ್ರಸ್ತುತ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವ ವಿಧಾನಗಳನ್ನು ಸರಳೀಕರಣಗೊಳಿಸಿ ಭೌತಿಕ ಪ್ರಗತಿಗನುಗುಣವಾಗಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ವಸತಿ ಯೋಜನೆಯಡಿ ಪ್ರಗತಿಯನ್ನು ಸಾಧಿಸಲು ಕ್ರಮ ವಹಿಸಲಾಗುತ್ತಿದೆ.</td></tr>
<tr><td>(ಉ)</td><td>ಗ್ರಾಮ ಪಂಚಾಯತ್‌ಗಳಿಗೆ ಹೊಸದಾಗಿ 20 ಮನೆಗಳನ್ನು ಹಂಚಿಕೆ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ? (ವಿವರ ನೀಡುವುದು)</td><td>ಪ್ರಧಾನ ಮಂತ್ರಿ ಅವಾಸ್ ಯೋಜನೆ(ಗ್ರಾಮೀಣ)ರಡಿ ಪ್ರತಿ ಗ್ರಾಮ ಪಂಚಾಯಿತಿಗೆ 20 ಮನೆಗಳಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಂತೆ ಎಲ್ಲಾ ಜಿಲ್ಲೆಗಳಿಗೆ ನಿಗಮದ ಪತ್ರ ದಿನಾಂಕ:26.11.2020 ರಲ್ಲಿ ತಿಳಿಸಲಾಗಿರುತ್ತದೆ. ಫಲಾನುಭವಿಗಳ ಆಯ್ಕೆ ಕುರಿತು ಸರ್ಕಾರದಿಂದ ದಿನಾಂಕ: 09.11.2020 ರಲ್ಲಿ ಸುತ್ತೋಲೆಯನ್ನು ಹೊರಡಿಸಿದ್ದು, ಅದರನ್ವಯ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td></tr>
</table>

ಸಂಖ್ಯೆ :ವಇ 102 ಹೆಚ್ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1379**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಉಡುಪಿ ಜಿಲ್ಲೆಯಲ್ಲಿ ನಿವೇಶನ ರಹಿತರಿಗೆ ಮನೆ ನಿವೇಶನ ಒದಗಿಸಲು ಎಷ್ಟು ಸರ್ಕಾರಿ ಜಮೀನು ಕಾದಿರಿಸಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಕಛೇರಿಯಿಂದ ಪಡೆದ ಮಾಹಿತಿ ರೀತ್ಯಾ ಉಡುಪಿ ಜಿಲ್ಲೆಯಲ್ಲಿ ನಿವೇಶನ ರಹಿತರಿಗೆ ಮನೆ ನಿವೇಶನ ಒದಗಿಸಲು 176.32 ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸಿದ್ದು, ವಿಧಾನ ಸಭಾ ಕ್ಷೇತ್ರವಾರು ಕಾಯ್ದಿರಿಸಲಾದ ಜಮೀನಿನ ವಿವರ ಈ ಕೆಳಕಂಡಂತಿದೆ.

ಉತ್ತರಿಸುವ ದಿನಾಂಕ	:	15.03.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಉಡುಪಿ ಜಿಲ್ಲೆಗೆ ನೀಡಿದ ಗುರಿ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಉಡುಪಿ ಜಿಲ್ಲೆಗೆ ಈ ಕೆಳಗಿನಂತೆ ಕೊಳವೆಬಾವಿಗಳನ್ನು ಕೊರೆಯಿಸಲು ಗುರಿ ನಿಗದಿಪಡಿಸಲಾಗಿದೆ.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ:-

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ನೀಡಿದ ಗುರಿ		
		2017-18	2018-19	2019-20
01	ಕುಂದಾಪುರ	13	10	3
02	ಕಾರ್ಕಳ	19	15	4
03	ಉಡುಪಿ	13	11	3
04	ಬೈಂದೂರು	14	11	3
05	ಕಾಪು	13	10	3
	ಒಟ್ಟು	72	57	16

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ:-

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ನೀಡಿದ ಗುರಿ		
		2017-18	2018-19	2019-20
01	ಕುಂದಾಪುರ	04	06	04
02	ಕಾರ್ಕಳ	10	14	9
03	ಉಡುಪಿ	13	16	11
04	ಬೈಂದೂರು	11	14	9
05	ಕಾಪು	07	10	07
	ಒಟ್ಟು	45	60	40

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ:-

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ನೀಡಿದ ಗುರಿ		
		2017-18	2018-19	2019-20
01	ಕುಂದಾಪುರ	-	-	-
02	ಕಾರ್ಕಳ	-	-	-
03	ಉಡುಪಿ	-	-	-
04	ಬೈಂದೂರು	06	08	04
05	ಕಾಪು	-	-	-
	ಒಟ್ಟು	06	08	04

ಆ)	ಸದರಿ ಯೋಜನೆಯಡಿ ಆಯ್ಕೆ ಮಾಡಲಾದ ಫಲಾನುಭವಿಗಳಗೆ ಯೋಜನೆಯಂತೆ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆಯೇ; ಕೊಳವೆ ಬಾವಿ ಕೊರೆಯಲು ಗುತ್ತಿಗೆ ಪಡೆದ ಸಂಸ್ಥೆಗಳು ಯಾವುವು (ವಿವರಗಳನ್ನು ಒದಗಿಸುವುದು)	ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಂದ ಕಳೆದ 3 ವರ್ಷಗಳಲ್ಲಿ ಮಂಜೂರಾದ ಒಟ್ಟು 385 ಕೊಳವೆ ಬಾವಿಗಳ ಪೈಕಿ, 124 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಉಳದ ಕೊಳವೆ ಬಾವಿಗಳನ್ನು ಕೊರೆಯಿಸುವ ಕೆಲಸ ಪ್ರಗತಿಯಲ್ಲಿದೆ. ಈ ಕೊಳವೆಬಾವಿಗಳನ್ನು ಕೊರೆಯಿಸಲು ಗುತ್ತಿಗೆ ಪಡೆದ ಸಂಸ್ಥೆ ಮೆ॥ ಯಮುನಾ ಬೋರ್‌ವೆಲ್ಸ್ ಪುತ್ತೂರು.
ಇ)	ಕೊರೆಯಿಸಲಾದ ಕೊಳವೆಬಾವಿಗಳಗೆ ಅಗತ್ಯ ಯಂತ್ರೋಪಕರಣಗಳು ಹಾಗೂ ವಿದ್ಯುಧ್ಧೀಕರಣವನ್ನು ಕಲ್ಪಿಸಲಾಗಿದೆಯೇ;	2017-18ನೇ ಸಾಲಿನಲ್ಲಿ ಎಲ್ಲಾ ಕೊಳವೆ ಬಾವಿಗಳಗೆ ಪಂಪ್ ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಅಳವಡಿಸಿ, ವಿದ್ಯುಧ್ಧೀಕರಣ ಕಲ್ಪಿಸಲಾಗಿದೆ. 2018-19ನೇ ಸಾಲಿನಲ್ಲಿ ಕೊರೆದ ಕೊಳವೆ ಬಾವಿಗಳಗೆ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
ಈ)	ಇಲ್ಲವಾದಲ್ಲಿ, ಯಂತ್ರೋಪಕರಣ ವಿತರಣೆಗೆ ಹಾಗೂ ವಿದ್ಯುಧ್ಧೀಕರಣಕ್ಕಾಗಿ ಕಳೆದ ಮೂರು ವರ್ಷಗಳಂದ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ಕ್ಷೇತ್ರವಾರು ಬಾಕಿ ಉಳದ ಅವಧಿಯೊಂದಿಗೆ ವಿವರ ನೀಡುವುದು)	ಯಂತ್ರೋಪಕರಣಗಳ ಅಳವಡಿಕೆ ಹಾಗೂ ವಿದ್ಯುಧ್ಧೀಕರಣಕ್ಕಾಗಿ ಬಾಕಿ ಇರುವ ಪ್ರಕರಣಗಳ ವಿವರಗಳು ಈ ಕೆಳಗಿನಂತಿದೆ. ಕ್ರ.ಸಂ. / ವಿಧಾನಸಭಾ ಕ್ಷೇತ್ರ / ಬಾಕಿ ಪ್ರಕರಣಗಳು 01 / ಕುಂದಾಪುರ / 04 02 / ಕಾರ್ಕಳ / 22 03 / ಉಡುಪಿ / 09 04 / ಬೈಂದೂರು / 24 05 / ಕಾಪು / 11 ಒಟ್ಟು / 70
ಉ)	ಬಾಕಿ ಇರುವ ಪ್ರಕರಣಗಳ ಇತ್ಯರ್ಥಗೊಳಸಲು ನಿಗಮಕ್ಕೆ ಇರುವ ಅಡೆತಡೆಗಳಾವುವು?	ಕೊರೆದ ಕೊಳವೆ ಬಾವಿಗಳಗೆ ಸಂಬಂಧಿಸಿದಂತೆ, ಪಂಪ್‌ಸೆಟ್ ಸರಬರಾಜು ಮಾಡಿ ಅಳವಡಿಸಿ, ವಿದ್ಯುಧ್ಧೀಕರಣಗೊಳಸಲು ಆಹ್ವಾನಿಸಲಾಗಿದ್ದ ಟೆಂಡರ್‌ಗೆ ಕೆಲವೊಂದು ಗುತ್ತಿಗೆದಾರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದರಿಂದ, ನಿಗದಿತ ಅವಧಿಯಲ್ಲಿ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಕೊಳವೆ ಬಾವಿಗಳಗೆ ಪಂಪ್ ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಸಕಇ 129 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2179
2)	ಸದಸ್ಯರ ಹೆಸರು	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್(ನಾಗಠಾಣ)
3)	ಉತ್ತರಿಸಬೇಕಾದ ದಿನಾಂಕ	15-03-2021
4)	ಉತ್ತರಿಸಬೇಕಾದ ಸಚಿವರು	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಜಿಲ್ಲೆ ನಾಗಠಾಣ ವಿಧಾನಸಭಾ ವ್ಯಾಪ್ತಿಯಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು, ಈ ಸಂಬಂಧ ಯಾವ ಯಾವ ಯೋಜನೆಗಳನ್ನು ರೂಪಿಸಿದೆ. (ಯೋಜನಾವಾರು ವಿವರವಾದ ಮಾಹಿತಿ ನೀಡುವುದು	ಕಳೆದ ಮೂರು ವರ್ಷಗಳಿಂದ ನಾಗಠಾಣ ವಿಧಾನಸಭಾ ಮತಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. • ಜಿಲ್ಲಾ ಪಂಚಾಯತ್ ಯೋಜನೆಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ, ಭಾವಿ ಮತ್ತು ಹೊಂಡಗಳನ್ನು ಹೊಂದಿರುವ ರೈತರಿಗೆ ಉಚಿತವಾಗಿ ಮೀನುಮರಿಗಳನ್ನು ಹಂಚಿಕೆ ಮಾಡಲಾಗಿದೆ, ಮೀನುಗಾರಿಕೆ ಸಹಕಾರ ಸಂಘದ ಸದಸ್ಯರುಗಳಿಗೆ ಮೀನು ಬಲೆ ಖರೀದಿಗೆ ಸಹಾಯಧನ ವಿತರಿಸಿದೆ. • ಜಿಲ್ಲಾ ಪಂಚಾಯತ ಯೋಜನೆಯ ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಎಂಬ ಕಾರ್ಯಕ್ರಮದಡಿ ದ್ವಿಚಕ್ರ / ನಾಲ್ಕು ಚಕ್ರದ ವಾಹನ ಖರೀದಿಗೆ ಸಹಾಯಧನ ವಿತರಿಸಿದೆ. • ರಾಜ್ಯ ವಲಯ ವಿಶೇಷ ಘಟಕ ಉಪ ಯೋಜನೆಯಡಿ ನಾಗಠಾಣ ಮತಕ್ಷೇತ್ರಕ್ಕೆ ಮೀನುಗಾರಿಕೆ ಸಲಕರಣೆ ಕಿಟ್ ಹಾಗೂ ಫೈಬರ್ ಗ್ಲಾಸ್ ಹರಿಗೋಲು ವಿತರಣೆ ಮಾಡಲಾಗಿದೆ. • ಕೇಂದ್ರ ವಲಯ ಯೋಜನೆಯಡಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಫೈಬರ್ ಗ್ಲಾಸ್ ಹರಿಗೋಲು ವಿತರಣೆ ಮಾಡಲಾಗಿದೆ. • ರಾಜ್ಯ ವಲಯ ಯೋಜನೆಯಡಿ ನಾಗಠಾಣ ಮತಕ್ಷೇತ್ರಕ್ಕೆ ಫೈಬರ್ ಗ್ಲಾಸ್ ಹರಿಗೋಲ ಮತ್ತು ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು ವಿತರಣೆ ಮಾಡಲಾಗಿದೆ. • ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಿಸಲು ಸಹಾಯಧನ ಒದಗಿಸಲಾಗಿದೆ ಹಾಗೂ ದ್ವಿಚಕ್ರ ವಾಹನ ಖರೀದಿಗೆ ಸಹಾಯಧನ ಒದಗಿಸಲಾಗಿದೆ.
ಆ)	ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಅವಕಾಶ ಗಳಿದ್ದು, ಅವುಗಳನ್ನು ಅಭಿವೃದ್ಧಿಪಡಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರವಾದ ಮಾಹಿತಿ ನೀಡುವುದು)	
ಇ)	ಪ್ರಸ್ತುತ ಸಾಲಿನಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ನಿಗದಿಪಡಿಸಿದ ಅನುದಾನವೆಷ್ಟು; ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು? (ಯೋಜನಾವಾರು ಮಾಹಿತಿ ಒದಗಿಸುವುದು)	ಪ್ರಸ್ತುತ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳ ಅಡಿಯಲ್ಲಿ ರೂ. 2.40 ಲಕ್ಷಗಳನ್ನು ಮತ್ತು ರಾಜ್ಯ ವಲಯ ಯೋಜನೆಗಳ ಅಡಿಯಲ್ಲಿ ರೂ.2.18 ಲಕ್ಷ ಒಟ್ಟು ರೂ. 4.58 ಲಕ್ಷ ಗಳ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತ ಯೋಜನೆ:

- ಮೀನುಗಾರಿಕೆ ಸಹಕಾರ ಸಂಘ ನಿ, ಶಿರನಾಳ ಸಂಘದ 20 ಜನ ಸದಸ್ಯರುಗಳಿಗೆ ಮೀನುಗಾರಿಕೆ ಸಲಕರಣೆ (ಮೀನು ಬಲೆ ದಾರ ಹಾಗೂ ಸಿಂಕರ್ಸ್) ಖರೀದಿಗೆ ಸಹಾಯಧನ ರೂ.1.00 ಲಕ್ಷ ವಿತರಿಸಲಾಗಿದೆ.
- ಮೀನುಗಾರಿಕೆ ಸಹಕಾರ ಸಂಘ ನಿ, ಚಣೇಗಾಂವ ಸಂಘದ 20 ಜನ ಸದಸ್ಯರುಗಳಿಗೆ ಮೀನು ಸಲಕರಣೆ (ಮೀನು ಬಲೆ ದಾರ ಹಾಗೂ ಸಿಂಕರ್ಸ್) ಖರೀದಿಗೆ ಸಹಾಯಧನ ರೂ. 1.00 ಲಕ್ಷ ವಿತರಿಸಲಾಗಿದೆ.
- ಜಿಲ್ಲಾ ಪಂಚಾಯತ ಯೋಜನೆಯಡಿ ದ್ವಿಚಕ್ರ ವಾಹನ ಖರೀದಿಗೆ ಸಹಾಯಧನ ಯೋಜನೆಯಡಿ ಇಬ್ಬರಿಗೆ ರೂ. 40,000/- ಸಹಾಯಧನ ವಿತರಿಸಲಾಗಿದೆ.

ರಾಜ್ಯ ವಲಯ ಯೋಜನೆ

- ಮೀನುಮರಿ ಖರೀದಿಗೆ ಸಹಾಯಧನ ಯೋಜನೆಯಡಿ ಇಬ್ಬರಿಗೆ ರೂ. 10,000/-ಗಳನ್ನು ವಿತರಿಸಲಾಗಿದೆ.
- ಮೀನು ಸಲಕರಣೆ ಕಿಟ್ಟುಗಳ ವಿತರಣೆಗೆ ಸಹಾಯ ಯೋಜನೆಯಡಿ 04 ಜನ ಮೀನುಗಾರರಿಗೆ ರೂ. 40,000/- ಗಳನ್ನು ವಿತರಿಸಲಾಗಿದೆ.
- ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ ಯೋಜನೆಯಡಿ ನಾಗಠಾಣ ಕೆರೆಯಲ್ಲಿ ರೂ. 1.68 ಲಕ್ಷಗಳ ವೆಚ್ಚದಲ್ಲಿ 1.20 ಲಕ್ಷ ಮೀನುಮರಿಗಳನ್ನು ಬಿತ್ತನೆ ಮಾಡಲಾಗಿದೆ.

ಸಂಖ್ಯೆ: ಪಸಂಮೀ ಇ-88 ಮೀಇಯೋ 2021

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2183
ಸದಸ್ಯರ ಹೆಸರು	ಶ್ರೀ. ದಿನೇಶ್ ಗುಂಡೂರಾವ್ (ಗಾಂಧಿನಗರ)
ವಿಷಯ	"ವೃದ್ಧಾಪ್ಯ, ವಿಧವಾ ಹಾಗೂ ಅಂಗವಿಕಲರ ವೇತನ ನೀಡುವುದು"
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು.
ಪ್ರಶ್ನೆ	ಉತ್ತರ
ಅ) ಸರ್ಕಾರದಿಂದ ನೀಡಲಾಗುತ್ತಿರುವ ವೃದ್ಧಾಪ್ಯ ವೇತನ, ವಿಧವಾ ವೇತನ ಹಾಗೂ ಅಂಗವಿಕಲರ ವೇತನ ಪಾವತಿಯಾಗದೇ ಇರುವ ಬಗ್ಗೆ ಸಾರ್ವಜನಿಕರ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಅಸಮರ್ಪಕ ಬ್ಯಾಂಕ್ ಖಾತೆ / ಐ.ಎಫ್.ಎಸ್.ಸಿ ಕೋಡ್ ಹಾಗೂ ವಿಳಾಸ/ಪಿನ್‌ಕೋಡ್ ಮಾಹಿತಿಯೊಂದಿಗೆ ಖಜಾನೆ-2 ಗೆ ವರ್ಗಾಯಿಸಲು ಸಾಧ್ಯವಾಗದ ಹಾಗೂ ಪಿಂಚಣಿ ಪಾವತಿಯಾಗದೆ ಸ್ಥಗಿತಗೊಂಡ ಪ್ರಕರಣಗಳಲ್ಲಿ ಪಿಂಚಣಿ ವಿತರಣೆ ವ್ಯತ್ಯಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ) ಬಂದಿದ್ದಲ್ಲಿ, ಈ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)	ತಾತ್ಕಾಲಿಕವಾಗಿ ಸ್ಥಗಿತಗೊಂಡ ಪ್ರಕರಣಗಳನ್ನು ಕಡ್ಡಾಯ ಭೌತಿಕ ಪರಿಶೀಲನೆಗೆ ಒಳಪಡಿಸಿ, ನಿಖರ ಮಾಹಿತಿಯನ್ನು ಸಂಗ್ರಹಿಸಿ ಕ್ರಮವಹಿಸಲಾಗುತ್ತಿದೆ. ಸಮರ್ಪಕ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು ತಾಲ್ಲೂಕು ಮಟ್ಟದಲ್ಲಿ ಅವಕಾಶ ಕಲ್ಪಿಸಲಾಗಿದೆ. ಮಂಜೂರಾತಿ ಪ್ರಾಧಿಕಾರಿಗಳಾದ ತಹಶೀಲ್ದಾರರು ಫಲಾನುಭವಿಗಳ ಮಾಹಿತಿಯಲ್ಲಿನ ನ್ಯೂನ್ಯತೆಯನ್ನು ಸರಿಪಡಿಸಿ ಕ್ರಮವಹಿಸಿದ ಪ್ರಕರಣಗಳನ್ನು ಅನುಕಲನೆ ಮೂಲಕ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸಿ, ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.
ಇ)ಗಾಂಧಿನಗರ ಕ್ಷೇತ್ರ ವ್ಯಾಪ್ತಿಯಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ ಹಾಗೂ ಅಂಗವಿಕಲರ ವೇತನ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿನ ಫಲಾನುಭವಿಗಳ ಸಂಖ್ಯೆ ಎಷ್ಟು;	ಗಾಂಧಿನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವವರ ಸಂಖ್ಯೆ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಯೋಜನೆ	ಫಲಾನುಭವಿಗಳ ಸಂಖ್ಯೆ
1	ವೃದ್ಧಾಪ್ಯ ವೇತನ	3987
2	ವಿಧವಾ ವೇತನ	3913
3	ಅಂಗವಿಕಲರ ವೇತನ	11564
4	ಸಂಧ್ಯಾ ಸುರಕ್ಷಾ ಯೋಜನೆ	15937
5	ಮನಸ್ವಿನಿ	270
6	ಮೈತ್ರಿ	26
	ಒಟ್ಟು	35697

ಈ) ಕಳೆದ ಎರಡು ವರ್ಷಗಳಲ್ಲಿ ವೇತನ ಪಾವತಿ ರದ್ದು ಪಡಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಗಾಂಧಿನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ 590 ಪ್ರಕರಣಗಳನ್ನು ರದ್ದುಗೊಳಿಸಲಾಗಿದೆ. ಖಾಯಂ ವಲಸೆ, ಮರಣ ಹಾಗೂ ದ್ವಿಪಿಂಚಣಿ ಪ್ರಕರಣಗಳನ್ನು ಭೌತಿಕ ಪರಿಶೀಲನೆ ಸಂದರ್ಭದಲ್ಲಿ ಗುರುತಿಸಲಾದಂತೆ ರದ್ದುಪಡಿಸಲು ಕ್ರಮವಹಿಸಲಾಗಿದೆ.

ಸಂಖ್ಯೆ: DSSP/LAQ/13/2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2189**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ 3 ವರ್ಷಗಳ ಅವಧಿಯಲ್ಲಿ ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳು ಯಾವುವು; ಅದರ ಅಂದಾಜು ವೆಚ್ಚ ಮತ್ತು ಖರ್ಚು ಮಾಡಲಾದ ಮೊತ್ತ ಎಷ್ಟು;	ಕಳೆದ 3 ವರ್ಷಗಳ ಅವಧಿಯಲ್ಲಿ ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಮಂಡಳಿ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳು)

ವರ್ಷ	ಕೊಳಚೆ ಪ್ರದೇಶದ ಹೆಸರು	ಕಾಮಗಾರಿ ವಿವರ	ಅಂದಾಜು ಮೊತ್ತ	ಖರ್ಚಾದ ಮೊತ್ತ
2017-18	ಗಂಗಮ್ಮನ ಪಾಳ್ಯ / ಗಾಂಧಿನಗರ	ಸಿ.ಸಿ.ಚರಂಡಿ, ರಸ್ತೆ, ಕೊಳವೆ ಬಾವಿ, ಪಂಪ್ ಅಳವಡಿಸುವುದು ಇತರೆ ಅಭಿವೃದ್ಧಿ ಕಾಮಗಾರಿ	80.00	56.80 (ಕಾಮಗಾರಿ ಪೂರ್ಣ ಗೊಂಡಿದೆ)
2018-19	ಗಂಗಮ್ಮನ ಪಾಳ್ಯ / ಸಂಜಯ ಗಾಂಧಿನಗರ	ಆರ್.ಸಿ.ಸಿ. ಚರಂಡಿ, ಸಿ.ಸಿ.ರಸ್ತೆ, ಇತರೆ ಅಭಿವೃದ್ಧಿ ಕಾಮಗಾರಿ	50.00	39.80 (ಕಾಮಗಾರಿ ಪೂರ್ಣ ಗೊಂಡಿದೆ)
2019-20	ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ		-	-
	ಒಟ್ಟು		**130.00**	**96.60**

ಕ್ರ. ಸಂ.	ಪ್ರಶ್ನೆ	ಉತ್ತರ
(ಆ)	ಕೊಳಚೆ ಪ್ರದೇಶಗಳೆಂದು ಘೋಷಿಸಲಾದ ವಾರ್ಡ್‌ಗಳು ಯಾವುವು; ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ; ಒಟ್ಟು ಮಂಜೂರಾದ ಮನೆಗಳ ಸಂಖ್ಯೆ ಎಷ್ಟು? (ಕಳೆದ ಮೂರು ವರ್ಷಗಳ ಸಂಪೂರ್ಣ ವಿವರಗಳನ್ನು ನೀಡುವುದು)	ಕೋಲಾರ ಜಿಲ್ಲೆಯ ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಡಳಿಯ ಕಾಯಿದೆ ಪ್ರಕಾರ 3 ಕೊಳಚೆ ಪ್ರದೇಶಗಳನ್ನು ಘೋಷಿಸಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸ	ಕೊಳಚೆ ಪ್ರದೇಶದ ಹೆಸರು	ವಾರ್ಡ್ ಸಂಖ್ಯೆ
1	ಗಂಗಮ್ಮನಪಾಳ್ಯ	01
2	ಸಂಜಯಗಾಂಧಿನಗರ	10
3	ಸೇಟ್ ಕಾಂಪೌಂಡ್	04

ಕ್ರ. ಸಂ.	ಪ್ರಶ್ನೆ	ಉತ್ತರ

ಪ್ರಧಾನ ಮಂತ್ರಿ ಆವಾಸ್ ಯೋಜನೆ-ಸರ್ವರಿಗೂ ಸೂರು ಯೋಜನೆಯಡಿ ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಮಂಜೂರಾದ ಮನೆಗಳ ವಿವರ ಕೆಳಕಂಡಂತಿದೆ.

ಕ್ರ. ಸ	ವರ್ಷ	ಕೊಳಚೆ ಪ್ರದೇಶದ ಹೆಸರು	ಮಂಜೂರಾದ ಮನೆಗಳು	ಷರಾ
1	2017-18	ಗಂಗಮ್ಮನ ಪಾಳ್ಯ	159	ಪ್ರಗತಿಯಲ್ಲಿವೆ
2		ಸಂಜಯ ಗಾಂಧಿನಗರ	107	ಪ್ರಗತಿಯಲ್ಲಿವೆ
3		ಸೇಟ್ ಕಾಪೌಂಡ್	04	ಪ್ರಗತಿಯಲ್ಲಿವೆ
4		ರಾಮಕೃಷ್ಣ ಹೆಗಡೆಕಾಲೋನಿ	130	ಪ್ರಗತಿಯಲ್ಲಿವೆ (ಪುರಸಭೆ ನೀಡಿರುವ ಜಾಗ)
		ಒಟ್ಟು	400	

2018-19 ಮತ್ತು 2019-20 ನೇ ಸಾಲಿನಲ್ಲಿ ಯಾವುದೇ ಮನೆಗಳು ಮಂಜೂರಾಗಿರುವುದಿಲ್ಲ.

ಸಂಖ್ಯೆ :ವಇ 44 ಎಸ್‌ಬಿಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2190**
ಸದಸ್ಯರ ಹೆಸರು	:	ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)
ಉತ್ತರಿಸಬೇಕಾದ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಪ್ರಶ್ನೆ	ಉತ್ತರ
(ಅ) ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ವ್ಯಾಪ್ತಿಯಲ್ಲಿ ಅತಿವೃಷ್ಟಿಯಿಂದ ಹಾಗೂ ಅಕಾಲಿಕ ಮಳೆಯಿಂದ ಅಡಿಕೆ ಬೆಳೆಗಾರರು ಅಪಾರ ಬೆಳೆಗಾರರು ಅಪಾರ ನಷ್ಟ ಅನುಭವಿಸಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ) ಈ ಜಿಲ್ಲೆಯ ಎಷ್ಟು ಅಡಿಕೆ ಬೆಳೆಗಾರರಿಗೆ ಎಷ್ಟು ಪರಿಹಾರ ಮೊತ್ತವನ್ನು ವಿತರಿಸಲಾಗಿದೆ; (ಕ್ಷೇತ್ರವಾರು, ಎಕರೆ/ಗುಂಟೆಗಳ ಕಳೆದ ಮೂರು ವರ್ಷಗಳ ಮಾಹಿತಿಯೊಂದಿಗೆ ವಿವರ ನೀಡುವುದು)	ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೆಳಕಂಡಂತೆ ಅಡಿಕೆ ಬೆಳೆಗಾರರಿಗೆ ಇನ್‌ಪುಟ್ ಸಬ್ಸಿಡಿ ಪಾವತಿಸಲಾಗಿದೆ. **ಸಾಲು** / **ಫಲಾನುಭವಿಗಳ ಸಂಖ್ಯೆ** / **ಇನ್‌ಪುಟ್ ಸಬ್ಸಿಡಿ ಮೊತ್ತ ರೂ.ಲಕ್ಷಗಳಲ್ಲಿ** 2018-19 / 29044 / 1283.52 2019-20 / 36003 / 4099.94 2020-21 / ಇನ್‌ಪುಟ್ ಸಬ್ಸಿಡಿ ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ. ಪ್ರಕೃತಿ ವಿಕೋಪದಿಂದ ಉಂಟಾದ ಅತಿವೃಷ್ಟಿ / ಪ್ರವಾಹ ಸಂದರ್ಭಗಳಲ್ಲಿ ಪರಿಹಾರ ಕಾರ್ಯಗಳಿಗೆ ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುತ್ತದೆ. (ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ)
(ಇ) ಪರಿಹಾರ ಮೊತ್ತವು ಕೇವಲ ದೊಡ್ಡ ದೊಡ್ಡ ರೈತರಿಗೆ ಲಭಿಸಿದ್ದು, ಸಣ್ಣ ಮತ್ತು ಅತೀ ಸಣ್ಣ ರೈತರುಗಳು ಪರಿಹಾರದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) (ಈ) ಬಂದಿದ್ದಲ್ಲಿ, ಸಣ್ಣ ರೈತರುಗಳಿಗೆ ಉಂಟಾಗಿರುವ ಸಮಸ್ಯೆಯನ್ನು ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು? (ವಿವರ ನೀಡುವುದು)	ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನ್ವಯ ಪ್ರವಾಹದಿಂದ ಶೇ.33ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳೆಹಾನಿಯಾದ ಸಂತ್ರಸ್ಥರಿಗೆ ಇನ್‌ಪುಟ್ ಸಬ್ಸಿಡಿಯನ್ನು ತಲಾ ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಪಾವತಿಸಲಾಗುತ್ತದೆ. ಇದರನ್ವಯ ಸಣ್ಣ ಮತ್ತು ಅತೀ ಸಣ್ಣ ರೈತರುಗಳು ಇನ್‌ಪುಟ್ ಸಬ್ಸಿಡಿ ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ದೊಡ್ಡ ರೈತರ ಬೆಳೆ ಹಾನಿ ವಿಸ್ತೀರ್ಣ 2 ಹೆಕ್ಟೇರ್‌ಗಿಂತ ಹೆಚ್ಚಿಗೆ ಇದ್ದರೂ ಸಹ ಬೆಳೆಹಾನಿ ವಿಸ್ತೀರ್ಣವನ್ನು 2ಹೆಕ್ಟೇರ್‌ಗೆ ಸೀಮಿತಗೊಳಿಸಿ ಇನ್‌ಪುಟ್ ಸಬ್ಸಿಡಿ ಪಾವತಿಸಲಾಗುತ್ತದೆ.

ಕಂಇ 102 ಟಿಎನ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2190ಕ್ಕೆ ಅನುಬಂಧ

2018-19 ನೇ ಸಾಲಿನಲ್ಲಿ ಅಡಕೆ ಬೆಳೆ ಹಾನಿಗೆ ಸರ್ಕಾರದಿಂದ ನೀಡಿದ ಪರಿಹಾರದ ವಿವರ

ಕ್ರ ಸಂ	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	ಹಾನಿಯಾದ ಅಡಿಕೆ ಬೆಳೆ ಪ್ರದೇಶ ಎಕರೆಗಳಲ್ಲಿ	ಪರಿಹಾರ ನೀಡಿದ ಮೊತ್ತ ಲಕ್ಷಗಳಲ್ಲಿ
1	ಶಿವಮೊಗ್ಗ	0	0	0.00
2	ಭದ್ರಾವತಿ	0	0	0.00
3	ತೀರ್ಥಹಳ್ಳಿ	8157	5693	349.48
4	ಸಾಗರ	8527	5781	346.71
5	ಸೊರಬ	3156	2619	142.67
6	ಶಿಕಾರಿಪುರ	1	1	0.06
7	ಹೊಸನಗರ	5789	4633	313.78
	ಒಟ್ಟು	**25630**	**18726**	**1152.69**

2019-20 ನೇ ಸಾಲಿನಲ್ಲಿ ಅಡಕೆ ಬೆಳೆ ಹಾನಿಗೆ ಸರ್ಕಾರದಿಂದ ನೀಡಿದ ಪರಿಹಾರದ ವಿವರ

ಕ್ರ ಸಂ	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	ಹಾನಿಯಾದ ಅಡಿಕೆ ಬೆಳೆ ಪ್ರದೇಶ ಎಕರೆಗಳಲ್ಲಿ	ಪರಿಹಾರ ನೀಡಿದ ಮೊತ್ತ ಲಕ್ಷಗಳಲ್ಲಿ
1	ಶಿವಮೊಗ್ಗ	38	27	2.30
2	ಭದ್ರಾವತಿ	96	100	7.97
3	ತೀರ್ಥಹಳ್ಳಿ	4363	2859	298.94
4	ಸಾಗರ	7568	5100	512.23
5	ಸೊರಬ	8340	9458	897.68
6	ಶಿಕಾರಿಪುರ	1907	1738	180.33
7	ಹೊಸನಗರ	5054	5144	510.57
	ಒಟ್ಟು	**27366**	**24426**	**2410.02**

2020-21 ನೇ ಸಾಲಿನಲ್ಲಿ ಅಡಕೆ ಬೆಳೆ ಹಾನಿಗೆ ಸರ್ಕಾರದಿಂದ ನೀಡಿದ ಪರಿಹಾರದ ವಿವರ

ಕ್ರ ಸಂ	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	ಹಾನಿಯಾದ ಅಡಿಕೆ ಬೆಳೆ ಪ್ರದೇಶ ಎಕರೆಗಳಲ್ಲಿ	ಪರಿಹಾರ ನೀಡಿದ ಮೊತ್ತ ಲಕ್ಷಗಳಲ್ಲಿ
1	ಶಿವಮೊಗ್ಗ	0	0	0.00
2	ಭದ್ರಾವತಿ	24	7	0.47
3	ತೀರ್ಥಹಳ್ಳಿ	839	188	20.31
4	ಸಾಗರ	0	0	0.00
5	ಸೊರಬ	30	46	3.02
6	ಶಿಕಾರಿಪುರ	2	1	0.14
7	ಹೊಸನಗರ	2	1	0.04
	ಒಟ್ಟು	**897**	**243**	**23.99**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2191
ಸದಸ್ಯರ ಹೆಸರು	:	ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)
ಉತ್ತರಿಸುವ ದಿನಾಂಕ	:	15.03.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	**ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)**	ಕಳೆದ ಮೂರು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ನಿಗಮಗಳಿಂದ ಒಟ್ಟು 70 ಕೊಳವೆಬಾವಿಗಳನ್ನು ಮಂಜೂರು ಮಾಡಲಾಗಿದೆ. ನಿಗಮವಾರು (ಗುರಿ) ವಿವರ ಇಂತಿದೆ:

ನಿಗಮಗಳ ಹೆಸರು	2017-18	2018-19	2019-20
ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ	18	09	04
ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ	06	07	04
ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ	-	06	-
ಭೋವಿ ಅಭಿವೃದ್ಧಿ ನಿಗಮ	01	09	06
ಒಟ್ಟು	25	31	14

ಕ್ರ.ಸಂ.	ಪ್ರಶ್ನೆ	ಉತ್ತರ
(ಆ)	**ಸದರಿ ಯೋಜನೆಯಡಿ ಆಯ್ಕೆ ಮಾಡಲಾದ ಫಲಾನುಭವಿಗಳಿಗೆ ಯೋಜನೆಯಂತೆ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆಯೇ; ಕೊಳವೆ ಬಾವಿಗಳನ್ನು ಕೊರೆಯಲು ಗುತ್ತಿಗೆ ಪಡೆದ ಸಂಸ್ಥೆಗಳಾವುವು; (ವಿವರ ನೀಡುವುದು)**	ಕೊಳವೆಬಾವಿಗಳನ್ನು ಕೊರೆಸಲು ಕ್ರಮ ಕೈಗೊಳ್ಳಲಾಗಿದ್ದು, ಕೊಳವೆಬಾವಿ ಕೊರೆಯಲು ಗುತ್ತಿಗೆ ಪಡೆದ ಸಂಸ್ಥೆಗಳ ವಿವರ ಇಂತಿದೆ:

ಕ್ರ.ಸಂ.	ವರ್ಷ	ಗುತ್ತಿಗೆ ಪಡೆದ ಸಂಸ್ಥೆಯ ಹೆಸರು
01	2017-18	ಮೆ: ಸಲೀಂ ಎಲೆಕ್ಟ್ರೀಕಲ್ಸ್ & ಬೋರ್‌ವೆಲ್ಸ್, ಕಲಬುರಗಿ
		ಮೆ: ಮಂಜುನಾಥ ಬೋರ್‌ವೆಲ್ಸ್, ಬೆಂಗಳೂರು
		ಮೆ: ಮಹಮದ್‌ಹಾಜಿ ಬೋರ್‌ವೆಲ್ಸ್, ಕಲಬುರಗಿ
		ಮೆ: ಸೂಜಿಮಲ್ಲೇಶ್ವರಸ್ವಾಮಿ ಬೋರ್‌ಡ್ರಿಲ್ಲರ್ಸ್, ಚಳ್ಳಕೆರೆ
02	2018-19	ಮೆ: ಚಂದ್ರೋದಯ ಬೋರ್‌ವೆಲ್ಸ್, ಕೆ.ಆರ್.ಪೇಟೆ

2019-20ನೇ ಸಾಲಿನ ಕೊಳವೆಬಾವಿಗಳನ್ನು ಕೊರೆಯಲು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

...2

(ಇ)	ಕೊರೆಯಲಾದ ಕೊಳವೆ ಬಾವಿಗಳಿಗೆ ಅಗತ್ಯ ಯಂತ್ರೋಪಕರಗಳನ್ನು ಹಾಗೂ ವಿದ್ಯುದ್ಧೀಕರಣಗಳನ್ನು ಕಲ್ಪಿಸಲಾಗಿದೆಯೇ; ಇಲ್ಲವಾದಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು? (ಫಲಾನುಭವಿಗಳ ವಿವರದೊಂದಿಗೆ ಮಾಹಿತಿ ನೀಡುವುದು)	ಡಾ॥ ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮದಿಂದ 2017-18 ಸಾಲಿನಲ್ಲಿ ಕೊರೆದ ಎಲ್ಲಾ ಕೊಳವೆಬಾವಿಗಳಿಗೆ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿ, ವಿದ್ಯುದ್ಧೀಕರಣ ಕಲ್ಪಿಸಲಾಗಿದೆ. 2018-19ನೇ ಸಾಲಿನಲ್ಲಿ ಕೊಳವೆಬಾವಿಗಳಿಗೆ ಪಂಪ್ ಸೆಟ್ ಮತ್ತು ಪೂರಕ ಸಾಮಾಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಕೊರೆಯಿಸಲಾದ 6 ಕೊಳವೆ ಬಾವಿಗಳ ಪೈಕಿ 05 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 01 ಕೊಳವೆ ಬಾವಿಗೆ ಪಂಪ್‌ಸೆಟ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುತ್ತದೆ.

ಸಂಖ್ಯೆ: ಸಕಇ 127 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2207
ಮಾನ್ಯ ಸದಸ್ಯರ ಹೆಸರು	ಶ್ರೀ ಲಿಂಗೇಶ ಕೆ.ಎಸ್.(ಬೇಲೂರು)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ನಗರದ ಗಂಧದ ಕೋಟಿ ಆವರಣದಲ್ಲಿ ಗಂಧದಕೋಟಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 02 ಪದವಿಪೂರ್ವ ಬಾಲಕಿಯರ ಪದವಿಪೂರ್ವ ಕಾಲೇಜುಗಳಿದ್ದು, ಈ ಕಾಲೇಜುಗಳಲ್ಲಿ ಹಾಸನ ಜಿಲ್ಲೆ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಂದ ಸುಮಾರು 2500ಕ್ಕೂ ಹೆಚ್ಚು ಬಡಕುಟುಂಬಗಳ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಬಂದಿದ್ದಲ್ಲಿ, ಗಂಧದ ಕೋಟಿ ಆವರಣದಲ್ಲಿರುವ ಖಾಲಿ ಜಾಗದಲ್ಲಿ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ(ವಿಭಜಿತ-2) ಹಾಸನ ಟೌನ್(BCWD-2027), ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ(ವಿಭಜಿತ-1) ಹಾಸನ ಟೌನ್(BCWD-2028) ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಹಾಸನ ಟೌನ್(BCWD-2029), ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (ಹೊಸದು) ಹಾಸನ ಟೌನ್(BCWD-2032) ಒಟ್ಟು 500 ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ಒದಗಿಸುವ 04 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಜುಲೈ 2019ರಲ್ಲಿ ಸಲ್ಲಿಸಿದ ಪ್ರಸ್ತಾವನೆಯ ಅನುಮೋದನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದ ಗಂಧದಕೋಟಿ ಆವರಣದಲ್ಲಿರುವ 4.20 ಎಕರೆ ನಿವೇಶನದ ಪೈಕಿ 3.02 ಎಕರೆ ಪ್ರದೇಶವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಮಂಜೂರು ಮಾಡಿದ್ದು, ಈ ನಿವೇಶನದಲ್ಲಿ ಕೆಳಕಂಡ 04 ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರು ದಿನಾಂಕ: 07.06.2019ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಇವುಗಳಲ್ಲಿ, ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (ವಿಭಜಿತ-2), ಹಾಸನ ಟೌನ್ (BCWD-2027) ಮತ್ತು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಹಾಸನ ಟೌನ್(BCWD-2029) ಈ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣವನ್ನು 2019-20ನೇ ಸಾಲಿನ ನಬಾರ್ಡ್‌ನ ಆರ್.ಐ.ಡಿ.ಎಫ್-25ನೇ ಟ್ರಾಂಚ್ ಯೋಜನೆಯಡಿ ಕೈಗೊಳ್ಳಲು ಪ್ರಸ್ತಾವನೆಯನ್ನು ನಬಾರ್ಡ್ ಸಂಸ್ಥೆಗೆ ಸಲ್ಲಿಸಲಾಗಿತ್ತು, ನಬಾರ್ಡ್ ಸಂಸ್ಥೆಯು ಅನುದಾನದ ಮಿತಿಯಿಂದಾಗಿ ಸದರಿ ಪ್ರಸ್ತಾವನೆಯನ್ನು ಹಿಂತಿರುಗಿಸಿರುತ್ತದೆ. ಇನ್ನುಳಿದ, ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಹಾಸನ ಟೌನ್(BCWD-2028) ಮತ್ತು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಹಾಸನ ಟೌನ್ (ಹೊಸದು) (BCWD-2032) ಈ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

			ಹಾಸನ ಜಿಲ್ಲೆಗೆ ಈಗಾಗಲೇ 06 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು, ಇವುಗಳ ಕಟ್ಟಡ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತವೆ. ಪ್ರಸ್ತಾಪಿತ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣವನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನುಸಾರ ಆಧ್ಯತೆ ಮೇರೆಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಹಿಂವಕ 187 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2208
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ : 15-03-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಇಲಾಖೆಯ ಯಾವ ಯಾವ ಯೋಜನೆಗಳಡಿಯಲ್ಲಿ ವಿದ್ಯಾರ್ಥಿವೇತನವನ್ನು ಪಾವತಿಸಲಾಗುತ್ತಿವೆ (ಯೋಜನೆವಾರು ಮಾಹಿತಿಯನ್ನು ಒದಗಿಸುವುದು)	ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಯೋಜನೆಗಳಡಿಯಲ್ಲಿ ವಿದ್ಯಾರ್ಥಿ ವೇತನವನ್ನು ಪಾವತಿಸಲಾಗುತ್ತಿದೆ. 1) **<u>ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:</u>** ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 6.00 ಲಕ್ಷದ ಒಳಗಿರುವ 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ವಾರ್ಷಿಕ ಆದಾಯ ಮಿತಿ ರೂ. 2.50 ಲಕ್ಷ ಮಿತಿಯೊಳಗಿರುವ 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ. 2) **<u>ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:</u>** ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 2.50 ಲಕ್ಷ ಮಿತಿಯೊಳಗಿರುವ ಪ್ರಥಮ ಪಿಯುಸಿ ಮತ್ತು ನಂತರದ ಎಲ್ಲಾ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.
ಆ)	2019-20ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಎಷ್ಟು ವಿದ್ಯಾರ್ಥಿಗಳಿಗೆ ಯಾವ ಯಾವ ಯೋಜನೆಯಡಿ ಎಷ್ಟು ವಿದ್ಯಾರ್ಥಿ ವೇತನವನ್ನು ಪಾವತಿಸಲಾಗಿದೆ; ಇನ್ನು ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಪಾವತಿಸುವುದು ಬಾಕಿ ಇರುತ್ತದೆ;	2019-20ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಮಂಜೂರು ಮಾಡಲಾದ ವಿದ್ಯಾರ್ಥಿವೇತನ ವಿವರಗಳನ್ನು ಕೆಳಕಂಡಂತೆ ನೀಡಿದೆ. 1) **ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:..** 12,95,315 ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರೂ.134.6 ಕೋಟಿಗಳನ್ನು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ರೂ. 5181.05ಲಕ್ಷಗಳ ವಿದ್ಯಾರ್ಥಿವೇತನ ಪಾವತಿಸಲಾಗಿರುತ್ತದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 1,85,054 ವಿದ್ಯಾರ್ಥಿಗಳಿಗೆ ಅಂದಾಜು ರೂ. 20.00 ಕೋಟಿಗಳ ವಿದ್ಯಾರ್ಥಿವೇತನ ಪಾವತಿಸುವುದು ಬಾಕಿ ಇದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 45,522

		ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿಸುವುದು ಬಾಕಿ ಇರುತ್ತದೆ. **2) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:** ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 3,22,502 ವಿದ್ಯಾರ್ಥಿಗಳಿಗೆ ರೂ. 421.94ಕೋಟಿಗಳ ವಿದ್ಯಾರ್ಥಿವೇತನ ಪಾವತಿಸಲಾಗಿರುತ್ತದೆ. 21,245 ವಿದ್ಯಾರ್ಥಿಗಳಿಗೆ ಅಂದಾಜು ರೂ. 50.00 ಕೋಟಿಗಳ ವಿದ್ಯಾರ್ಥಿವೇತನ ಪಾವತಿಸುವುದು ಬಾಕಿ ಇದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 127228 ವಿದ್ಯಾರ್ಥಿಗಳಿಗೆ ರೂ. 11795.00 ಲಕ್ಷಗಳನ್ನು ಪಾವತಿಸಲಾಗಿರುತ್ತದೆ.
ಇ)	ಈ ವಿದ್ಯಾರ್ಥಿಗಳಿಗೆ ಬಾಕಿಯಿರುವ ವಿದ್ಯಾರ್ಥಿವೇತನವನ್ನು ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಇಲಾಖಾ ವತಿಯಿಂದ ಅನುಷ್ಠಾನ ಮಾಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು 2017-18ರ ವರೆಗೆ SMIS ತಂತ್ರಾಂಶದ ಮೂಲಕ ಮಂಜೂರು ಮಾಡಲಾಗುತ್ತಿತ್ತು. 2018-19 ರಿಂದ ಇ-ಆಡಳಿತ ಇಲಾಖೆಯು ಅಭಿವೃದ್ಧಿ ಪಡಿಸಿರುವ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (SSP) ಮೂಲಕ ಅನುಷ್ಠಾನ ಮಾಡಲಾಗುತ್ತಿದೆ. ಅದೇ ರೀತಿ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು 2019-20 ರಿಂದ SSP ಮೂಲಕ ಅನುಷ್ಠಾನ ಮಾಡಲಾಗುತ್ತಿದೆ. ವಿದ್ಯಾರ್ಥಿ ವೇತನದ ಮೊತ್ತವನ್ನು ಡಿ.ಬಿ.ಟಿ. ಪೋರ್ಟಲ್ ಮೂಲಕ ವಿದ್ಯಾರ್ಥಿಗಳ ಆಧಾರ್ ಜೋಡಿತ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದ್ದು, ಬಾಕಿ ಇರುವ ಪ್ರಕರಣಗಳಲ್ಲಿ ವಿದ್ಯಾರ್ಥಿಯ ಬ್ಯಾಂಕ್ ಖಾತೆಯು ಆಧಾರ್ ಜೋಡಣೆಯಾಗದೇ ಇರುವುದರಿಂದ ವಿದ್ಯಾರ್ಥಿವೇತನ ಪಾವತಿಸಲು ಸಾಧ್ಯವಾಗಿರುವುದಿಲ್ಲ. ಇನ್ನು ಕೆಲವು ಪ್ರಕರಣಗಳಲ್ಲಿ ಶಿಕ್ಷಣ ಇಲಾಖೆಯ SATS Data ಮತ್ತು Aadhar Name Mismatch ಆಗಿರುವುದರಿಂದ ಬಾಕಿ ಇರುತ್ತದೆ. ಇನ್ನು ಕೆಲವು ಪ್ರಕರಣಗಳಲ್ಲಿ ತಾಂತ್ರಿಕ ತೊಂದರೆಗಳಿದ್ದು, ಇವುಗಳನ್ನು ಸರಿಪಡಿಸಿ ಬಾಕಿ ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

ಸಕಇ 112 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2210
ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆ

ಕ್ರ ಸಂ:	ಪ್ರಶ್ನೆಗಳು	ಉತ್ತರಗಳು
ಅ)	ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಎಷ್ಟು ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಮತ್ತು ಎಂ.ಡಿ.ಆರ್. ರಸ್ತೆಗಳಿವೆ? (ವಿವರವಾದ ಮಾಹಿತಿಯನ್ನು ಒದಗಿಸುವುದು)	ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಈ ಕೆಳಕಂಡ ರಾಷ್ಟ್ರೀಯ ಹೆದ್ದಾರಿ ಹಾದುಹೋಗುತ್ತಿವೆ. 1) ರಾಷ್ಟ್ರೀಯ ಹೆದ್ದಾರಿ–161ಎ (NHAI) – 45.878 ಕಿ.ಮೀ. ಉದ್ದ 2) ರಾಷ್ಟ್ರೀಯ ಹೆದ್ದಾರಿ–50– 11.150 ಕಿ.ಮೀ. ಉದ್ದ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ರಾಜ್ಯ ಹೆದ್ದಾರಿಯ ಒಟ್ಟು ಉದ್ದ 85.55 ಕಿ.ಮೀ. ಮತ್ತು ಜಿಲ್ಲಾ ಮುಖ್ಯ ರಸ್ತೆಯ ಒಟ್ಟು ಉದ್ದ 227.79 ಕಿ.ಮೀ. ಇರುತ್ತದೆ.
ಆ)	ಈ ಕ್ಷೇತ್ರದಲ್ಲಿನ ಲೋಕೋಪಯೋಗಿ ಇಲಾಖೆಯ ವಿವಿಧ ರಸ್ತೆಗಳು ಯಾವ ಸ್ಥಿತಿಯಲ್ಲಿವೆ? ಈ ರಸ್ತೆಗಳಲ್ಲಿ ಶಿಥಿಲಗೊಂಡಿರುವ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? ಯಾವ ಕಾಲಮಿತಿಯೊಳಗೆ ದುರಸ್ತಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?	ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ–50ರ ಒಟ್ಟು ಕಿ.ಮೀ 11.150ರಲ್ಲಿ, 4.00 ಕಿ.ಮೀ. ರಸ್ತೆಯನ್ನು ಈಗಾಗಲೇ (ದ್ವಿಪಥ/ಚತುಷ್ಪಥ) ಕಾಂಕ್ರೀಟ್ ರಸ್ತೆಯನ್ನು ನಿರ್ಮಿಸಲಾಗಿದೆ. ಸದರಿ ಹೆದ್ದಾರಿಯ ಉಳಿದ ಭಾಗವಾದ 7.15 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿಪಡಿಸಲು ಮರುಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯನ್ನು ಕಾಲ ಮಿತಿಯೊಳಗಾಗಿ ಪೂರ್ಣಗೊಳಿಸಲಾಗುವುದು. ಈ ಕಾಮಗಾರಿಗೆ 2 ವರ್ಷ ಕಾಲಾವಕಾಶವಿರುತ್ತದೆ. ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ವಿವಿಧ ರಸ್ತೆಗಳ ದುರಸ್ತಿ ಕಾಮಗಾರಿಗೆ 2020–21 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ಅಡಿಯಲ್ಲಿ ರೂ: 28.50 ಲಕ್ಷಗಳ ಅನುದಾನದಲ್ಲಿ 20.00 ಕಿ.ಮೀ

		ರಸ್ತೆಯನ್ನು ಹಾಗು ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿಯಲ್ಲಿ ರೂ: 130.65 ಲಕ್ಷಗಳ ಅನುದಾನದಲ್ಲಿ 110.00 ಕಿ.ಮೀ ಉದ್ದ ರಸ್ತೆಯನ್ನು ದುರಸ್ತಿ ಮಾಡಲು, ಬೀದರ್ ವಿಭಾಗದಿಂದ ಗುತ್ತಿಗೇದಾರರನ್ನು ನೇಮಿಸಿ, ದುರಸ್ತಿ ಕಾಮಗಾರಿಯನ್ನು ಈಗಾಗಲೆ ಪೂರ್ಣಗೊಳಿಸಿ ರಸ್ತೆ ಸಂಚಾರ ಸುಗಮಗೊಳಿಸಲಾಗಿದೆ.

ಕಡತ ಸಂಖ್ಯೆ: ಲೋಇ 35 ಸಿಐಎಸ್ 2021 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ,
ಲೋಕೋಪಯೋಗಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2213
ಸದಸ್ಯರ ಹೆಸರು	:	ಶ್ರೀ ಭೀಮಾ ನಾಯ್ಕ ಎಸ್.
ಉತ್ತರಿಸುವ ದಿನಾಂಕ	:	15-03-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ್ಯಂತ ಮುರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 532 ಪ್ರಾಂಶುಪಾಲರು/ ಶಿಕ್ಷಕರು ಕೋರ್ಟ್ ಆದೇಶದ ಮೇರೆಗೆ ಸುಮಾರು 16 ವರ್ಷಗಳ ಕಾಲ ಕಡಿಮೆ ಸಂಬಳಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದು, ಕೋವಿಡ್ ಸಂದರ್ಭದಲ್ಲಿ 8 ತಿಂಗಳ ಕಾಲ ಯಾವುದೇ ವೇತನ ನಿಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಇದ್ದಲ್ಲಿ, ವೇತನ ಯಾವಾಗ ಬಿಡುಗಡೆ ಮಾಡಲಾಗುವುದು;	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಇನ್ನಿತರೆ ವಸತಿ ಶಾಲೆ/ ಕಾಲೇಜುಗಳಲ್ಲಿ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಹೊರಸಂಪನ್ಮೂಲದಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯಿಂದ ನಿಗಧಿಪಡಿಸಲಾಗಿರುವಂತೆ ಕನಿಷ್ಠ ವೇತನವನ್ನು ನಿಗಧಿಪಡಿಸಿ, ಅದರಂತೆ ವೇತನ ಪಾವತಿ ಮಾಡಲಾಗುತ್ತಿದೆ. ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಪ್ರತಿ ಶೈಕ್ಷಣಿಕ ವರ್ಷದ ಮಾರ್ಚ್ ಅಂತ್ಯಕ್ಕೆ ಬಿಡುಗಡೆಗೊಳಿಸಿ ಮುಂದಿನ ಶೈಕ್ಷಣಿಕ ವರ್ಷದ ಜೂನ್ ಮಾಹೆಯಿಂದ ಏಜೆನ್ಸಿ ಮುಖಾಂತರ ಜಿಲ್ಲಾ ಮಟ್ಟದಲ್ಲಿ ನಿಯಮಾನುಸಾರ ನೇಮಿಸಿಕೊಂಡು ವೇತನ ಪಾವತಿಸಲಾಗುತ್ತಿರುತ್ತದೆ. ಆದರೆ, 2020-21 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕೋವಿಡ್-19 ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆದೇಶದನ್ವಯ ವಸತಿ ಶಾಲೆ/ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ. ಆದ್ದರಿಂದ ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಪಡೆಯುವ ಅತಿಥಿ/ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಜೂನ್-2020 ರಿಂದ ಜಿಲ್ಲಾ ಹಂತದಲ್ಲಿ ನೇಮಕಾತಿ ಮಾಡಿಕೊಂಡಿರುವುದಿಲ್ಲ.

		ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಲಾ/ಕಾಲೇಜುಗಳನ್ನು ಕ್ವಾರಂಟೈನ್ ಕೇಂದ್ರ ಸೆಂಟರ್‌ಗಳಾಗಿ ಪರಿವರ್ತಿಸಿದ ಕಾರಣ. ಕ್ವಾರಂಟೈನ್/ ನಿರಾಶ್ರಿತರ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿದ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ಸರ್ಕಾರದ ಆದೇಶದನ್ವಯ ವೇತನವನ್ನು ನಿಯಮಾನುಸಾರ ಪಾವತಿ ಮಾಡಲಾಗಿದೆ. ಜೂನ್-2020 ರಿಂದ ಹೊರ ಸಂಪನ್ಮೂಲ ಶಿಕ್ಷಕರು/ಅತಿಥಿ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ವೇತನ ಪಾವತಿಸಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿ, ಶಾಲೆಗಳು/ ಕಾಲೇಜುಗಳು/ ವಸತಿ ನಿಲಯಗಳನ್ನು ಪೂರ್ಣವಾಗಿ ತೆರೆದ ನಂತರ ಕರ್ತವ್ಯ ನಿರ್ವಹಿಸುವ ಹೊರಸಂಪನ್ಮೂಲ ಸಿಬ್ಬಂದಿಗಳಿಗೆ ವೇತನ ಪಾವತಿಗೆ ಪರಿಗಣಿಸಲು ಆರ್ಥಿಕ ಇಲಾಖೆಯು ನಿರ್ದೇಶಿಸಿರುತ್ತದೆ. ನವೆಂಬರ್-2020 ಮಾಹೆಯಿಂದ ಸಂಘದ ವ್ಯಾಪ್ತಿಯಲ್ಲಿನ ವಸತಿ ಶಾಲೆ/ಕಾಲೇಜುಗಳಿಗೆ ಹೊರ ಸಂಪನ್ಮೂಲ ಶಿಕ್ಷಕರು/ಅತಿಥಿ ಶಿಕ್ಷಕರು/ಅತಿಥಿ ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿಗಳ ಸೇವೆಯನ್ನು ಪಡೆದು ನಿಯಮಾನುಸಾರ ವೇತನ ಪಾವತಿಸಲಾಗುತ್ತಿದೆ.
ಇ)	ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಇಲಾಖೆಯಲ್ಲಿ ವಿಲೀನಗೊಳಿಸಿಕೊಂಡು ಖಾಯಂ ನೌಕರರನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
ಈ)	ಇದ್ದಲ್ಲಿ ಯಾವಾಗ ಖಾಯಂ ನೌಕರರನ್ನಾಗಿ ಮಾಡಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: ಸಕಇ 101 ಮೊದೇಶಾ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2216
ಮಾನ್ಯ ಸದಸ್ಯರ ಹೆಸರು	ಶ್ರೀ ಹ್ಯಾರಿಸ್.ಎನ್.ಎ (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದವರು ಸರ್ಕಾರಕ್ಕೆ ಸಲ್ಲಿಸಿದ ಎಷ್ಟು ವರದಿಗಳು ಅನುಮೋದನೆಗಾಗಿ ಬಾಕಿ ಉಳಿದಿವೆ; ಅವುಗಳಿಗೆ ಅನುಮೋದನೆ ನೀಡದಿರಲು ಕಾರಣಗಳೇನು;	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ ವರದಿಗಳಲ್ಲಿ 04 ವರದಿಗಳು ಅನುಮೋದನೆಗಾಗಿ ಸರ್ಕಾರದಲ್ಲಿ ಬಾಕಿ ಇರುತ್ತವೆ. 1) ಶ್ರೀ ಸಿದ್ದಗಂಗಯ್ಯ ಅಧ್ಯಕ್ಷತೆಯಲ್ಲಿನ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ದಿನಾಂಕ:07.03.2005 ರಂದು "ಮಧ್ಯಂತರ ವರದಿ-2005"ನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. 2) ಡಾ.ಸಿ.ಎಸ್. ದ್ವಾರಕನಾಥ್ ಅಧ್ಯಕ್ಷತೆ ಯಲ್ಲಿನ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಜುಲೈ 2010 ರಂದು "ವಿಶೇಷ ವರದಿ-2010"ನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. 3) ಶ್ರೀ ಎನ್. ಶಂಕ್ರಪ್ಪ ಅಧ್ಯಕ್ಷತೆಯಲ್ಲಿನ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ದಿನಾಂಕ:03.12.2012 ರಂದು "ಪ್ರಥಮ ವರದಿ" ಮತ್ತು ದಿನಾಂಕ:07.09.2013 ರಂದು "ದ್ವಿತಿಯ ವರದಿ"ಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. 4) ಶ್ರೀ ಹೆಚ್. ಕಾಂತರಾಜ ಅಧ್ಯಕ್ಷತೆ ಯಲ್ಲಿನ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಈ ಕೆಳಗಿನ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಅ) ವಿಶೇಷ ವರದಿ-2015 ದಿನಾಂಕ: 28.08.2015 ಆ) ಹಿಂದುಳಿದ ವರ್ಗಗಳ ಜಾತಿ ನಿಂದನೆಯ ನಿಯಂತ್ರಣಾ ಕುರಿತು ವರದಿ. ದಿನಾಂಕ: 24.03.2018

		ಇ) ಬಹಿರಂಗ ವಿಚಾರಣಾ ವರದಿ - 2018 (120 ಸಲಹೆಗಳು), ದಿನಾಂಕ: 09.07.2019
ಆ)	ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷೆ, ಅಧ್ಯಯನಗಳ ಮೂಲಕ ಸಾಂವಿಧಾನಿಕವಾಗಿ, ಕಾನೂನು ನಿಯಮಗಳಡಿಯಲ್ಲಿ ಯಾವ ಉದ್ದೇಶಕ್ಕಾಗಿ ವರದಿ ಸಲ್ಲಿಸುತ್ತದೆಯೋ ಅದರ ಈಡೇರಿಕೆಗೆ ಸರ್ಕಾರ ಕ್ರಮ ಜರುಗಿಸದೆ ಇರುವುದು ನ್ಯಾಯೋಜಿತವೇ;	ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷೆ, ಅಧ್ಯಯನಗಳ ಮೂಲಕ ಸಲ್ಲಿಸಲಾಗಿರುವ ವರದಿಗಳು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.
ಇ)	ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ವ್ಯಾಪ್ತಿಯಲ್ಲಿ ಸಾಂವಿಧಾನಿಕವಾಗಿ ಒಳಪಡುವ ಜಾತಿ/ಪಂಗಡ/ಸಮುದಾಯಗಳು ಸಾಂವಿಧಾನಿಕ ಹಕ್ಕನ್ನು ಪಡೆದುಕೊಳ್ಳಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರದ ನೀತಿ ನಿಲುವುಗಳೇನು?	ಸರ್ಕಾರದ ಆದೇಶ ಸಂಖ್ಯೆ:SWD 225 BCA 2000, ದಿ:30.03.2002 ರಲ್ಲಿ ಭಾರತ ಸಂವಿಧಾನ ಅನುಚ್ಛೇಧ 15(4) ರಂತೆ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶ ಮತ್ತು ಅನುಚ್ಛೇಧ 16(4)ರ ಮೇರೆಗೆ ಉದ್ಯೋಗಕ್ಕಾಗಿ ಪ್ರವರ್ಗವಾರು ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ಈ ಕೆಳಗಿನಂತೆ ಕಲ್ಪಿಸಲಾಗಿರುತ್ತದೆ.

ಪ್ರವರ್ಗ	ಮೀಸಲಾತಿ ಪ್ರಮಾಣ (ಶೇಕಡವಾರು)
ಪ್ರವರ್ಗ-I	4 %
ಪ್ರವರ್ಗ-II (ಎ)	15 %
ಪ್ರವರ್ಗ-II (ಬಿ)	4 %
ಪ್ರವರ್ಗ-III (ಎ)	4 %
ಪ್ರವರ್ಗ-III (ಬಿ)	5 %
ಒಟ್ಟು	32%

ಸಂಖ್ಯೆ:ಹಿಂವಕ 72 ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)
ಮುಜುರಾಯಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ

ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು
ಹಿಂದೂ ಧಾರ್ಮಿಕ ಹಾಗೂ
ಧರ್ಮಾದಾಯ ದತ್ತಿ ಸಚಿವರು

ಕರ್ನಾಟಕ ವಿಧಾನಸಭೆ

ವಿಧಾನ ಸಭೆಯ ಸದಸ್ಯರ ಹೆಸರು : **ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್ (ಕಾರವಾರ)**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : **2022**

ಉತ್ತರಿಸುವ ದಿನಾಂಕ :**15.03.2021**

ಉತ್ತರಿಸುವ ಸಚಿವರು : **ಕಂದಾಯ ಸಚಿವರು**

ಕ್ರಂ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಯಾವುದೇ ಹೊಸ ಯೋಜನೆ ಜಾರಿಯಾಗುವಾಗ ಅಲ್ಲಿನ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ನಿರಾಶ್ರಿತರಾಗಲಿರುವ ಪ್ರತಿ ಕುಟುಂಬಕ್ಕೆ ಉದ್ಯೋಗ ನೀಡುವುದನ್ನು ಭೂ-ಸ್ವಾಧೀನ ಕಾಯ್ದೆಯಲ್ಲಿ ಸೇರ್ಪಡೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?	ಸರ್ಕಾರದ ಯಾವುದೇ ಯೋಜನೆಗಳಿಗೆ ಜಮೀನು ಕಳೆದುಕೊಳ್ಳುತ್ತಿರುವ ನಿರಾಶ್ರಿತರ ಕುಟುಂಬಕ್ಕೆ ಉದ್ಯೋಗ ನೀಡುವುದನ್ನು ಭೂಸ್ವಾಧೀನ ಕಾಯ್ದೆಯಲ್ಲಿ ಸೇರ್ಪಡೆ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ.
ಆ)	ಈ ಹಿಂದೆ ಪ್ರತಿ ನಿರಾಶ್ರಿತರ ಕುಟುಂಬಕ್ಕೆ ಒಂದು ಉದ್ಯೋಗ ನೀಡುವ ಭರವಸೆ ನೀಡಲಾಗಿದ್ದು, ಸದರಿ ನಿರಾಶ್ರಿತರ ಎಷ್ಟು ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ (ವಿವರ ನೀಡುವುದು)	ಯೋಜನಾ ನಿರಾಶ್ರಿತರ ಕುಟುಂಬದ ಓರ್ವ ಸದಸ್ಯರಿಗೆ ಗ್ರೂಪ್-ಸಿ ಮತ್ತು ಡಿ ಹುದ್ದೆಗಳ ನೇಮಕಾತಿಯಲ್ಲಿ ಶೇ.5% ರಷ್ಟು ಮೀಸಲಾತಿ ಕಲ್ಪಿಸಿ ಸಿ.ಆ.ಸು ಇಲಾಖೆಯಿಂದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 23 ಎಸ್ಆರ್ ಆರ್ 1999 ದಿನಾಂಕ:23.11.2000 ನ್ನು ಹೊರಡಿಸಲಾಗಿದೆ. ಸದರಿ ಅಧಿಸೂಚನೆಯನ್ವಯ ಲಭ್ಯವಿರುವ ಮಾಹಿತಿ ಪ್ರಕಾರ ಗ್ರೂಪ್-ಸಿ ಮತ್ತು ಡಿ ಹುದ್ದೆಗಳಲ್ಲಿ ಇದುವರೆಗೆ ನಿರಾಶ್ರಿತರ ಕುಟುಂಬಗಳ ಒಟ್ಟು 2098 ಸದಸ್ಯರಿಗೆ ನೌಕರಿ ನೀಡಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಯೋಜನಾ ನಿರಾಶ್ರಿತ ಕುಟುಂಬದವರಿಗೆ ಸರ್ಕಾರದ ಗ್ರೂಪ್-ಸಿ ಮತ್ತು ಡಿ ಹುದ್ದೆಗಳಲ್ಲಿ ಮೀಸಲಾತಿ ಕಲ್ಪಿಸಿ ಹೊರಡಿಸಲಾಗಿದ್ದ ಅಧಿಸೂಚನೆಯ ಕಾಲಾವಧಿಯು ದಿನಾಂಕ:23.11.2020 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದುದರಿಂದ ಯೋಜನಾ ನಿರಾಶ್ರಿತರಿಗೆ ಕಲ್ಪಿಸಿರುವ ಸಮತಳ ಮೀಸಲಾತಿ ಸೌಲಭ್ಯವನ್ನು 2025ನೇ ಸಾಲಿನವರೆಗೆ ಮುಂದುವರೆಸುವ ಕುರಿತು ಆರ್ಥಿಕ ಇಲಾಖೆ ಮತ್ತು ಕಾನೂನು ಇಲಾಖೆಗಳೊಂದಿಗೆ ಸಮಾಲೋಚಿಸಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9 ಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ.

<table>
<tr>
<td>ಇ)</td>
<td>ಕಾರವಾರ, ಅಂಕೋಲಾ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ಇರುವ ನಿರಾಶ್ರಿತ ಸಂಖ್ಯೆ ಎಷ್ಟು; ಅದರಲ್ಲಿ ಎರಡನೇ ಹಾಗೂ ಮೂರನೇ ಬಾರಿ ನಿರಾಶ್ರಿತರಾಗಲಿರುವವರ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)</td>
<td>
<table>
<tr><th>ಕ್ರ.ಸ.</th><th>ಯೋಜನೆ ಹೆಸರು</th><th>ಒಟ್ಟು ನಿರಾಶ್ರಿತರ ಸಂಖ್ಯೆ</th><th>ಎರಡನೇ ಬಾರಿ ನಿರಾಶ್ರಿತರಾದವರ ಸಂಖ್ಯೆ</th><th>ಮೂರನೇ ಬಾರಿ ನಿರಾಶ್ರಿತರಾದ ಸಂಖ್ಯೆ</th></tr>
<tr><td>1</td><td>ಸೀಬರ್ಡ್ ಯೋಜನೆ</td><td>4604</td><td>412</td><td>160</td></tr>
<tr><td>2</td><td>ಕೆ.ಪಿ.ಸಿ ಹಾಗೂ ಎನ್.ಪಿ.ಸಿ ಯೋಜನೆ</td><td>1032</td><td>0</td><td>0</td></tr>
<tr><td>3</td><td>ಕೊಂಕಣ ರೈಲ್ವೆ ಯೋಜನೆ</td><td>1703</td><td>0</td><td>0</td></tr>
<tr><td></td><td>ಒಟ್ಟು</td><td>**7339**</td><td>**412**</td><td>**160**</td></tr>
</table>
</td>
</tr>
<tr>
<td>ಈ)</td>
<td>ನಿರಾಶ್ರಿತರ ಪುನರ್ವಸತಿ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)</td>
<td>ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.</td>
</tr>
</table>

ಸಂಖ್ಯೆ: ಕಂಇ 30 ಭೂಸ್ವಾಬೆ 2021

(ಆರ್. ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2223
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ.
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಉಪಮುಖ್ಯಮಂತ್ರಿಗಳು ಲೋಕೋಪಯೋಗಿ ಇಲಾಖೆ

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ತೀರ್ಥಹಳ್ಳಿ – ಮಲ್ಪೆ ರಾಷ್ಟ್ರೀಯ ಹೆದ್ದಾರಿ 169ಎ ಕಡಿಯಾಳಿಯಿಂದ ಪರ್ಕಳವರೆಗಿನ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಕಾಂಕ್ರೀಟಿಕರಣಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ನಿಯಮಾನುಸಾರ ಪಾರದರ್ಶಕವಾಗಿ ನಡೆಯದೆ ನಿಯಮ ಮೀರಿ ಮಾನದಂಡ ಹಾಗೂ ಅರ್ಹತೆ ಇಲ್ಲದೇ ಇವರು ಗುತ್ತಿಗೆದಾರರಿಗೆ ಟೆಂಡರ್ ಮಾಡಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ?	ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳುವ ಕಾಮಗಾರಿಗಳ ಟೆಂಡರ್ ಗಳನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ Standard Bidding Document, EPC Document ಮಾನದಂಡ/ ನಿಯಮಗಳಂತೆ, ಹಾಗೂ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ/ಸುತ್ತೋಲೆಯನ್ವಯ ಕೈಗೊಳ್ಳಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ–169ಎ ರ ಪರ್ಕಳ–ಮಲ್ಪೆ ವಿಭಾಗದ ಪರ್ಕಳ–ಉಡುಪಿ ನಗರ ವ್ಯಾಪ್ತಿಯ ಕಿ.ಮೀ. 76.040 ರಿಂದ ಕಿ.ಮೀ.85.20 ವರೆಗಿನ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ Item rate ಯೋಜನೆಯಡಿ ರೂ.**98.46** ಕೋಟಿಗಳಿಗೆ ಅನುಮೋದನೆ ದೊರೆತಿದ್ದು, Standard Bidding Document ನ ನಿಯಮದಂತೆ ಟೆಂಡರ್ ಕರೆದು ಅರ್ಹ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿಕೊಡಲಾಗಿದೆ.
ಆ)	ಸದರಿ ಚತುಷ್ಪಥ ರಸ್ತೆ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದ್ದು ಸಾರ್ವಜನಿಕವಾಗಿ ಸಮಸ್ಯೆಗಳಾಗಿದ್ದರೂ ಈ ಬಗ್ಗೆ ಪರಿಣಾಮಕಾರಿ ಕ್ರಮಕೈಗೊಳ್ಳದೇ ಇರಲು ಕಾರಣಗಳೇನು?	ಪ್ರಸ್ತುತ, ರಾಷ್ಟ್ರೀಯ ಹೆದ್ದಾರಿ–169ಎ ರ ಕಿ.ಮೀ.76.60 ರಿಂದ ಕಿ.ಮೀ.77.50 ರವರೆಗಿನ ಸುಮಾರು 900 ಮೀಟರ್ ಉದ್ದದ ರಸ್ತೆಯು ಭೂಸ್ವಾಧೀನ ಪಡಿಸಬೇಕಾಗಿದ್ದು, ಸದರಿ ಭಾಗದ ರಸ್ತೆಯ ಭೂಸ್ವಾಧೀನ 3D ಪ್ರಕ್ರಿಯೆಯು ಪ್ರಗತಿಯಲ್ಲಿದ್ದು ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೊಂಡು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.
ಇ)	ಸದರಿ ಚತುಷ್ಪಥ ರಸ್ತೆ ಕಾಮಗಾರಿಯ ಗುಣಮಟ್ಟ ಕಳಪೆಯಾಗಿದ್ದು ಗುಣಮಟ್ಟ ಮತ್ತು ಮೌಲ್ಯಮಾಪನ ವಿಭಾಗದಿಂದ ಪರಿಶೀಲನೆ ಮಾಡಲಾಗಿದೆಯೇ ಇಲ್ಲವಾದಲ್ಲಿ ಕಾರಣಗಳೇನು (ವಿವರ ನೀಡುವುದು)	ರಾಷ್ಟ್ರೀಯ ಹೆದ್ದಾರಿ ವಲಯದ ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ಗುಣಮಟ್ಟ ಹಾಗೂ ಮೌಲ್ಯಮಾಪನ ಮಾಡಲು ಪ್ರತ್ಯೇಕವಾಗಿ ಮೂರು ಗುಣ ನಿಯಂತ್ರಣ ಉಪ ವಿಭಾಗಗಳಿದ್ದು, ಸದರಿ ಉಪ ವಿಭಾಗಗಳಿಂದ ಕಾಮಗಾರಿಗಳ ಗುಣಮಟ್ಟವನ್ನು ಪರಿಶೀಲನೆ ಮಾಡಲಾಗುವುದು.

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
		ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ಗುಣ ನಿಯಂತ್ರಣ ಉಪ ವಿಭಾಗ, ಚಿತ್ರದುರ್ಗ ಇವರ ಕಾರ್ಯವ್ಯಾಪ್ತಿಯಲ್ಲಿದ್ದು, ಸದರಿಯವರು ಕಾಮಗಾರಿಯ ಪ್ರಾರಂಭ ಪೂರ್ವದಲ್ಲಿ ಸಾಮಗ್ರಿಗಳ ಸೂಕ್ತತೆಯನ್ನು ಪರೀಕ್ಷೆಗಳ ಮೂಲಕ ದೃಢೀಕರಿಸಿಕೊಂಡು ಜಿ.ಎಸ್.ಬಿ. ಐಟಂ ಗೆ ಜಾಬ್ ಮಿಕ್ಸ್ ಫಾರ್ಮುಲ ಹಾಗೂ ಕಾಂಕ್ರೀಟ್ ಐಟಂ ಗಳಿಗೆ ವಿನ್ಯಾಸ ಮಿಶ್ರಣವನ್ನು ನೀಡಿರುತ್ತಾರೆ. ಹಾಗೂ ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಸ್ಥಳಕ್ಕೆ ಗುಣ ನಿಯಂತ್ರಣ ಸಿಬ್ಬಂದಿ ಭೇಟಿ ನೀಡಿ ಗುಣಮಟ್ಟದ ಪರೀಕ್ಷೆಯನ್ನು ನಡೆಸಿರುತ್ತಾರೆ.
ಈ)	ಈ ಕಾಮಗಾರಿಗೆ ಆದೇಶಿಸಿದ ಅನುದಾನ ಎಷ್ಟು; ಭೂಸ್ವಾಧೀನಕ್ಕೆ ಎಷ್ಟು ಮೊತ್ತ ಮೀಸಲಿಡಲಾಗಿದೆ; ಪ್ರಸ್ತುತ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಕಾಮಗಾರಿ – ಭೂಸ್ವಾಧೀನ ಸೇರಿದಂತೆ ಸಂಪೂರ್ಣ ವಿವರ ನೀಡುವುದು)	ರಾಷ್ಟ್ರೀಯ ಹೆದ್ದಾರಿ 169 ಎ ರ ಪರ್ಕಳ - ಮಲ್ಪೆ ವಿಭಾಗದ ಪರ್ಕಳ – ಉಡುಪಿ ನಗರ ವ್ಯಾಪ್ತಿಯ ಕಿ.ಮೀ. 76.040 ರಿಂದ ಕಿ.ಮೀ. 85.20 ವರೆಗಿನ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ರೂ. 98.46 ಕೋಟಿಗಳಿಗೆ ಅನುಮೋದನೆ ದೊರೆತಿದ್ದು, ಅನುಮೋದಿತ ಅಂದಾಜು ಪಟ್ಟಿಯಲ್ಲಿ ಭೂಸ್ವಾಧೀನಕ್ಕಾಗಿ ರೂ. 7.84 ಕೋಟಿಗಳನ್ನು ಮೀಸಲಿಡಲಾಗಿದೆ. ಪ್ರಸ್ತುತ, ಸದರಿ ಕಾಮಗಾರಿಗೆ ರೂ. 64.12 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಯು 3 (D) ಹಂತದಲ್ಲಿರುವ ಕಾರಣ ಭೂಸ್ವಾಧೀನಕ್ಕೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಕಡತ ಸಂಖ್ಯೆ: ಲೋಇ 87 ಸಿಎನ್‌ಹೆಚ್ 2021 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಇಲಾಖೆ.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2227
2	ಸದಸ್ಯರ ಹೆಸರು	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ ಯಾದಗಿರಿ ಮತಕ್ಷೇತ್ರದ ವಡಗೇರ ಮತ್ತು ಶಹಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೋಜಿಣಿ ಸಲುವಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ಅರ್ಜಿಗಳನ್ನು ವಿಲೇ ವಾರಿ ಮಾಡಲಾಗಿದೆ; ಉಳಿದಿರುವ ಅರ್ಜಿಗಳೆಷ್ಟು; (ಪೂರ್ಣ ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಿಂದ(2018-19 ರಿಂದ 2020-21) ಯಾದಗಿರಿ ಮತಕ್ಷೇತ್ರದ ವಡಗೇರ ಮತ್ತು ಶಹಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮೋಜಿಣಿ ಸಲುವಾಗಿ ಸ್ವೀಕೃತಿಯಾದ ಅರ್ಜಿಗಳ ಪ್ರಗತಿ ವಿವರ
<table>
<tr><th>ತಾಲ್ಲೂಕು</th><th>ಪ್ರಾ.ಶಿಲ್ಕು</th><th>ಸ್ವೀಕೃತಿ</th><th>ಒಟ್ಟು</th><th>ವಿಲೇ</th><th>ಬಾಕಿ</th></tr>
<tr><td>ವಡಗೇರ</td><td>1355</td><td>5652</td><td>7007</td><td>4571</td><td>2436</td></tr>
<tr><td>ಶಹಾಪುರ</td><td>2478</td><td>10333</td><td>12811</td><td>9421</td><td>3390</td></tr>
</table></td></tr>
<tr><td>ಆ)</td><td>ಬಾಕಿ ಉಳಿದ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ವಿಲೇವಾರಿ ಮಾಡಲಾಗುವುದು (ಪೂರ್ಣ ವಿವರ ನೀಡುವುದು)</td><td>ಬಾಕಿ ಉಳಿದ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.
1) ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿ ಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು. ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದೆ, ಪ್ರಕರಣವು ಅಳತೆಗೆ ಯೋಗ್ಯವಾಗಿದ್ದಲ್ಲಿ FIFO (ಸರದಿ ಸಾಲಿನಂತೆ) ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಆನ್‌ಲೈನ್‌ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್‌ಲೈನ್‌ನಲ್ಲೇ ನಿರ್ವಹಿಸಲಾಗುತ್ತಿದೆ. ತಂತ್ರಾಂಶದ ಮುಖಾಂತರ ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.
2) ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಾಲಕಾಲಕ್ಕೆ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ
3) ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಕಡತಗಳನ್ನು ಕ್ಯಾಟ್-ಲಾಗ್ ಮತ್ತು ಇಂಡೆಕ್ಸಿಂಗ್ ಮಾಡಲು ಸೂಚಿಸಲಾಗಿದೆ.
4) ನಿಯಮಿತವಾಗಿ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಸೂಚನೆ ನೀಡಲಾಗುತ್ತಿದೆ.</td></tr>
</table>

		5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 6) ಹೊಸದಾಗಿ 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ: 1-2-2021 ಮತ್ತು ದಿನಾಂಕ: 2-2-2021 ರಂದು ಪರೀಕ್ಷೆಯನ್ನು ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಸದರಿ ಅಭ್ಯರ್ಥಿಗಳಿಗೆ ತರಬೇತಿ ನಂತರ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡಲಾಗುವುದು. ಇದರಿಂದ ಬಾಕಿ ಪ್ರಕರಣಗಳ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ.

ಸಂಖ್ಯೆ: ಕಂಇ 36 ಎಸ್‌ಎಸ್‌ಸಿ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2232
ಸದಸ್ಯರ ಹೆಸರು	:	ಶ್ರೀ ಮಂಜುನಾಥ ಹೆಚ್.ಪಿ(ಹುಣಸೂರು)
ಉತ್ತರಿಸುವ ದಿನಾಂಕ	:	15.03.2021
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮೈಸೂರು ಜಿಲ್ಲೆಯ ಹುಣಸೂರು ತಾಲೂಕು ವ್ಯಾಪ್ತಿಯಲ್ಲಿ ಬರುವ ಕೆಲವು ಹಳ್ಳಿಗಳಿಗೆ ಸ್ಮಶಾನ ಭೂಮಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ</td><td>ಹೌದು.
ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಏಳು ಗ್ರಾಮಗಳಲ್ಲಿ ಸ್ಮಶಾನ ಭೂಮಿ ಲಭ್ಯವಿರುವುದಿಲ್ಲ.</td></tr>
<tr><td>(ಆ)</td><td>ಬಂದಿದ್ದಲ್ಲಿ, ಯಾವ ಯಾವ ಹಳ್ಳಿಗಳಿಗೆ ಸ್ಮಶಾನ ಭೂಮಿ ಇರುವುದಿಲ್ಲ(ವಿವರ ನೀಡುವುದು)</td><td>ಹುಣಸೂರು ತಾಲ್ಲೂಕಿನಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇರುವುದಿಲ್ಲ.<table><tr><th>ಕ್ರ.ಸಂ.</th><th>ಗ್ರಾಮಗಳು</th></tr><tr><td>1.</td><td>ಕಿರಿಜಾಜಿ</td></tr><tr><td>2.</td><td>ಚಿಕ್ಕಹುಣಸೂರು</td></tr><tr><td>3.</td><td>ಮೈದನಹಳ್ಳಿ</td></tr><tr><td>4.</td><td>ಶ್ರವಣನಹಳ್ಳಿ</td></tr><tr><td>5.</td><td>ಪೆಂಜಹಳ್ಳಿ</td></tr><tr><td>6.</td><td>ಹರವೆ</td></tr><tr><td>7.</td><td>ಹಿರಿಕ್ಯಾತನಹಳ್ಳಿ</td></tr></table></td></tr>
<tr><td>(ಇ)</td><td>ಸ್ಮಶಾನ ಭೂಮಿ ಇಲ್ಲದ ಹಳ್ಳಿಗಳಲ್ಲಿ ಅಂತ್ಯ ಸಂಸ್ಕಾರಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು)</td><td>ಸ್ಮಶಾನ ಭೂಮಿ ಇಲ್ಲದಿರುವ ಗ್ರಾಮಗಳಲ್ಲಿ ಸೂಕ್ತ ಸರ್ಕಾರಿ ಜಮೀನು ಗುರುತಿಸಲು ಹಾಗೂ ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಸೂಕ್ತ ಖಾಸಗಿ ಜಮೀನುಗಳನ್ನು ಗುರುತಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ತಹಶೀಲ್ದಾರ್, ಹುಣಸೂರು ಇವರಿಗೆ ನಿರ್ದೇಶನ ನೀಡಲಾಗಿದೆ.</td></tr>
<tr><td>(ಈ)</td><td>ಸ್ಮಶಾನ ಭೂಮಿ ಇಲ್ಲದ ಹಳ್ಳಿಗಳಿಗೆ ಯಾವಾಗ ಸ್ಮಶಾನ ಭೂಮಿ ಮಂಜೂರು ಮಾಡಲಾಗುವುದು; ಈ ಬಗ್ಗೆ ಮನವಿಗಳು ಸ್ವೀಕೃತವಾಗಿದ್ದರೂ ಮಂಜೂರು ಮಾಡಲು ವಿಳಂಬವಾಗಲು ಕಾರಣಗಳೇನು(ವಿವರ ನೀಡುವುದು)</td><td>ಸ್ಮಶಾನ ಇಲ್ಲದಿರುವ ಗ್ರಾಮಗಳಲ್ಲಿ ಸೂಕ್ತ ಸರ್ಕಾರಿ ಜಮೀನು ಗುರುತಿಸಲು ಹಾಗೂ ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಸೂಕ್ತ ಖಾಸಗಿ ಜಮೀನುಗಳನ್ನು ಗುರುತಿಸಿ, ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.</td></tr>
<tr><td>(ಉ)</td><td>ಹಾಲಿ ಇರುವ ಸ್ಮಶಾನಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು)</td><td>ಸ್ಮಶಾನ ಅಭಿವೃದ್ಧಿಗೆ ಸರ್ಕಾರವು ಪ್ರತಿವರ್ಷ ಅನುದಾನ ಬಿಡುಗಡೆ ಮಾಡುತ್ತಿದ್ದು, ಇದನ್ನು ಸಮನಾಗಿ ಪ್ರತಿ ತಾಲ್ಲೂಕಿಗೆ ಬಿಡುಗಡೆ ಮಾಡಲಾಗುತ್ತಿದೆ.</td></tr>
<tr><td>(ಊ)</td><td>ಕಳೆದ ಮೂರು ವರ್ಷಗಳಿಂದ ಸ್ಮಶಾನ ಭೂಮಿ ಅಭಿವೃದ್ಧಿಪಡಿಸಲು ಸರ್ಕಾರದಿಂದ ಮಂಜೂರು ಮಾಡಿರುವ ಹಣ ಎಷ್ಟು; ಮಂಜೂರಾದ ಹಣದಲ್ಲಿ ಕೈಗೊಂಡಿರುವ ಅಭಿವದ್ಧಿ ಕಾರ್ಯಗಳಾವುವು(ವಿವರ ನೀಡುವುದು)?</td><td>ಕಳೆದ ಮೂರು ವರ್ಷಗಳಿಂದ ಸ್ಮಶಾನ ಭೂಮಿ ಅಭಿವೃದ್ಧಿಪಡಿಸಲು ಸರ್ಕಾರದಿಂದ ಮಂಜೂರಾದ ಅನುದಾನ ಹಾಗೂ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
</table>

(ಕಡತ ಸಂಖ್ಯೆ:ಕಂಇ 28 ಎಲ್‌ಜಿಎಂ 2021)

(ಆರ್.ಅಶೋಕ)
ಕಂದಾಯ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೆಚ್.ಪಿ. ಮಂಜುನಾಥ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2232ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಸಾಲು	ಮಂಜೂರಾದ ಅನುದಾನ	ಸ್ಮಶಾನದ ವಿವರ
1.	2017-18	ರೂ.85,000/-	ಅನುದಾನ ಹಂಚಿಕೆ ಮಾಡಲಾಗಿದ್ದು, ತಹಶೀಲ್ದಾರರಿಂದ ಪ್ರಸ್ತಾವನೆ ನಿರೀಕ್ಷಣೆಯಲ್ಲಿದೆ
2.	2018-19	ರೂ.2,14,286/-	ಗಾವಡಗೆರೆ ಗ್ರಾಮದ ಸ.ನಂ.61ರಲ್ಲಿ 1.00 ಎಕರೆ ಜಮೀನಿನ ಸ್ಮಶಾನ ಅಭಿವೃದ್ಧಿ
3.	2019-20	ರೂ.71,428/	ಬನ್ನಿಕುಪ್ಪೆ ಗ್ರಾಮದ ಸ.ನಂ.75ರಲ್ಲಿ 0.25 ಗುಂಟೆ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಸ್ಮಶಾನ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿದೆ

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2234**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ 3 ವರ್ಷಗಳಿಂದ ಹುಣಸೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಹಾಡಿಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರಿಗೆ ಎಷ್ಟು ಮನೆಗಳನ್ನು ನೀಡಲಾಗಿದೆ ;	2017-18 ರಿಂದ ಇಲ್ಲಿಯವರೆಗೆ ಹುಣಸೂರು ವಿಧಾಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಹಾಡಿಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರನ್ನು ಒಳಗೊಂಡಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದವರಿಗೆ ಒಟ್ಟು **510** ಮನೆಗಳನ್ನು ನೀಡಲಾಗಿದೆ. ಈ ಪೈಕಿ **256** ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, **139** ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ವಿವರ ಕೆಳಕಂಡಂತಿದೆ.

ಯೋಜನೆ	ಮಂಜೂರಾದ ಮನೆಗಳು	ಪೂರ್ಣ ಗೊಂಡ ಮನೆಗಳು	ವಿವಿಧ ಹಂತದಲ್ಲಿರುವ ಒಟ್ಟು ಮನೆಗಳು
ಡಾ|| ಬಿ.ಆರ್ ಅಂಬೇಡ್ಕರ್ ನಿವಾಸ್	353	152	106
ಪಿಎಂಎವೈ (ಗ್ರಾಮೀಣ)	157	104	33
ಒಟ್ಟು	**510**	**256**	**139**

ಕ್ರ. ಸಂ.	ಪ್ರಶ್ನೆ	ಉತ್ತರ
(ಆ)	ಮಂಜೂರು ಮಾಡಲಾಗಿರುವ ಮನೆಗಳಲ್ಲಿ ಎಷ್ಟು ಮನೆಗಳು ಪೂರ್ಣವಾಗಿವೆ ; ಅಪೂರ್ಣಗೊಂಡಿರುವ ಮನೆಗಳೆಷ್ಟು ; (ವಿವರ ನೀಡುವುದು)	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 2017-18 ನೇ ಸಾಲಿನಿಂದ ಇಲ್ಲಿಯವರೆಗೆ ಹುಣಸೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಹಾಡಿಗಳಲ್ಲಿ ವಾಸಿಸುತ್ತಿರುವ ಮೂಲನಿವಾಸಿ ಬುಡಕಟ್ಟು ಜೇನುಕುರುಬ ಜನಾಂಗದವರಿಗೆ ಸಿ.ಸಿ.ಡಿ ಯೋಜನೆಯಡಿ 54 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆಂದು ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವು ವರದಿ ನೀಡಿರುತ್ತದೆ.
(ಇ)	ಅಪೂರ್ಣಗೊಂಡಿರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)	"**ಮನೆ**" ಮಾರ್ಗಸೂಚಿಯ ಪ್ರಕಾರ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಮನೆಗಳನ್ನು ಪ್ರಾರಂಭಿಸಿ ಒಂದು ವರ್ಷದೊಳಗೆ ಪೂರ್ಣಗೊಳಿಸಬೇಕಿರುತ್ತದೆ. ಆದರೆ ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಿಸಿ ಕೊಳ್ಳುತ್ತಿರುವುದರಿಂದ ಮನೆ ನಿರ್ಮಾಣವು ವಿಳಂಬವಾಗುತ್ತಿರುವುದರಿಂದ ಗ್ರಾಮ ಪಂಚಾಯತ್ ಮಟ್ಟದಲ್ಲಿ ಫಲಾನುಭವಿಗಳಿಗೆ ಕಾಲಕಾಲಕ್ಕೆ ನೋಟೀಸ್ ಜಾರಿ ಮಾಡಿ ಮನೆಗಳನ್ನು ಪೂರ್ಣಗೊಳಿಸುವಂತೆ ತಿಳಿಸಲಾಗುತ್ತಿದೆ.

(ಈ)	ಈಗಾಗಲೇ ನೀಡಲಾಗಿರುವ ಮನೆಗಳಲ್ಲಿ ಕೆಲವು ಮನೆಗಳು ತುಂಬಾ ಹಾಳಾಗಿದ್ದು, ಹೊಸದಾಗಿ ಪುನ: ಮನೆ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ನೀಡಲಾಗುವುದು;	ಯಾವುದೇ ವಸತಿ ಯೋಜನೆಯಡಿ ಒಂದು ಬಾರಿ ಆಯ್ಕೆಯಾಗಿ ವಸತಿ ಸೌಲಭ್ಯ ಪಡೆದ ಕುಟುಂಬವನ್ನು ಮರು ಆಯ್ಕೆಗೊಳಿಸಲು ಅವಕಾಶವಿರುವುದಿಲ್ಲ. ಆದರೆ ವಸತಿ ಯೋಜನೆಯಡಿ ಈಗಾಗಲೇ ವಸತಿ ಸೌಲಭ್ಯವನ್ನು ಹೊಂದಿದ ಕುಟುಂಬವು ಸರ್ಕಾರದ ಅನುದಾನ ಪಡೆದು ನಿರ್ಮಾಣ ಮಾಡಿಕೊಂಡ ಮನೆಯು ಕನಿಷ್ಠ 20 ವರ್ಷಗಳಾಗಿದ್ದು, ಸದರಿ ಮನೆಯು ಶೀಥಿಲಗೊಂಡಿದ್ದಲ್ಲಿ, ಮನೆ ಶಿಥಿಲಗೊಂಡಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ದೃಢೀಕರಣವನ್ನು ಪಡೆದು ವಿವಿಧ ವಸತಿ ಯೋಜನೆಗಳಡಿ ಮಂಜೂರು ಮಾಡಿರುವ ಮನೆಗಳ ಗುರಿಯೊಳಗೆ ನಿಯಮಾನುಸಾರ ಆಯ್ಕೆಗೊಳಿಸಿ ಆಯಾ ವಸತಿ ಯೋಜನೆಗಳ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಬಹುದಾಗಿರುತ್ತದೆ.
(ಉ)	ಇಲ್ಲದಿದ್ದಲ್ಲಿ, ಹೊಸದಾಗಿ ಮನೆ ನೀಡಲು ಅವಕಾಶವಿದೆಯೇ? (ವಿವರ ನೀಡುವುದು)	

ಸಂಖ್ಯೆ :ವಇ 119 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2238
ಉತ್ತರಿಸಬೇಕಾದ ದಿನಾಂಕ	:	15.03.2021
ಸದಸ್ಯರ ಹೆಸರು	:	ಶ್ರೀ ಮಂಜುನಾಥ್ ಹೆಚ್. ಪಿ. (ಹುಣಸೂರು)
ಉತ್ತರಿಸುವ ಸಚಿವರು	:	ಮಾನ್ಯ ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಿಂದ ಹುಣಸೂರು ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಷ್ಟು ಜನ ರೈತರಿಗೆ ಪಹಣಿಗಳನ್ನು ದೋಷ ಮುಕ್ತಗೊಳಿಸಲಾಗಿದೆ (ವಿವರ ನೀಡುವುದು);	ಹುಣಸೂರು ತಾಲ್ಲೂಕಿನಲ್ಲಿ ಆರ್.ಟಿ.ಸಿ ತಿದ್ದುಪಡಿಗೆ ಮೂರು ವರ್ಷಗಳಿಂದ ಇಲ್ಲಿಯವರೆಗೆ ಸ್ವೀಕೃತವಾಗಿರುವ ಅರ್ಜಿಗಳು 3050. ಆ ಪೈಕಿ 2700 ಅರ್ಜಿಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ.
ಆ	ಬಾಕಿ ಇರುವ ಪಹಣಿಗಳನ್ನು ಯಾವಾಗ ದೋಷಮುಕ್ತಗೊಳಿಸ ಲಾಗುವುದು;	ಹೋಬಳಿ ಮಟ್ಟದಲ್ಲಿ ಕಂದಾಯ ಅದಾಲತ್ ಕಾರ್ಯಕ್ರಮದ ಮೂಲಕ ಇತ್ಯರ್ಥಪಡಿಸಲಾಗುತ್ತಿದ್ದು, ಬಾಕಿ ಇರುವ ಪಹಣಿಗಳನ್ನು ಕೂಡಲೇ ದಾಖಲೆಗಳನ್ನು ಪರಿಶೀಲಿಸಿ ಇತ್ಯರ್ಥಪಡಿಸಲು ಕ್ರಮವಹಿಸಲಾಗುತ್ತಿದೆ.
ಇ	ದೋಷ ಮುಕ್ತಗೊಳಿಸಲು ವಿಳಂಬವಾಗಲು ಕಾರಣಗಳೇನು (ವಿವರ ನೀಡುವುದು);	ಅರ್ಜಿದಾರರು ತಿದ್ದುಪಡಿ ಮಾಡಲು ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸದೇ ಇರುವುದರಿಂದ ಅರ್ಜಿದಾರರಿಗೆ ತಿಳುವಳಿಕೆ ನೋಟೀಸನ್ನು ನೀಡಿ ದಾಖಲೆಗಳನ್ನು ಪಡೆದು ಕ್ರಮವಹಿಸ ಬೇಕಾಗಿರುವುದರಿಂದ ವಿಳಂಬವಾಗುತ್ತಿರುತ್ತದೆ. ಈ ತಾಲ್ಲೂಕಿನಲ್ಲಿ ಸರ್ಕಾರಿ ಸ.ನಂ.ಗಳು ಹೆಚ್ಚು ಇರುವುದರಿಂದ ಸದರಿ ಜಮೀನುಗಳ ಪಹಣಿ ಕಾಲಂ 9ರಲ್ಲಿ ಹೆಚ್ಚುವರಿ ಖಾತೆದಾರರ ವಿವರವು ನಮೂದಾಗಿರುವುದರಿಂದ ಭೂಮಂಜೂರಾತಿ ದಾಖಲೆ ಗಳ ಪರಿಶೀಲನೆ ಮಾಡಿ ಹಾಗೂ ಸ್ಕೆಚ್ ತಾಂತ್ರಿಕ ವರದಿಯನ್ನು ಪಡೆದು ಕ್ರಮವಹಿಸ ಬೇಕಾಗಿರುವುದರಿಂದ ವಿಳಂಬವಾಗುತ್ತಿರುತ್ತಿರುತ್ತದೆ. ಭೂಮಿ ತಂತ್ರಾಂಶದಲ್ಲಿ ಯಾವುದೇ ಸ.ನಂ.ಗೆ ಸಂಬಂಧಿಸಿದಂತೆ ಒಂದು ವಹಿವಾಟು ಮುಗಿದ ನಂತರ ಮಾತ್ರ ಕ್ರಮವಹಿಸಲು ಅವಕಾಶವಿರುವುದರಿಂದ ಮ್ಯುಟೇಷನ್ ಪೆಂಡಿಂಗ್‌ನ ಕಾರಣದಿಂದಾಗಿ ವಿಳಂಬವಾಗುತ್ತಿರುತ್ತದೆ.

ಈ	ವಿಳಂಬವಾದ ಪ್ರಕರಣಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?	ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಎಂಆರ್‌ಆರ್ 2020 ದಿನಾಂಕ 09-03-2021ರಲ್ಲಿ ಕಂದಾಯ ಅದಾಲತ್‌ಗಳನ್ನು ನಡೆಸಿ, ಪಹಣಿ ತಿದ್ದುಪಡಿ ಪ್ರಕರಣಗಳನ್ನು ತಹಶೀಲ್ದಾರ್ ಹಂತದಲ್ಲಿಯೇ ತ್ವರಿತಗತಿಯಲ್ಲಿ ವಿಲೇವಾರಿಗೊಳಿಸಲು ದಿನಾಂಕ 31-12-2021ರವರೆಗೆ ವಿಸ್ತರಿಸಿ ಅವಕಾಶ ಕಲ್ಪಿಸಲಾಗಿರುತ್ತದೆ.

ಕಂಇ 56 ಎಂ ಆರ್ ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1375**
ಉತ್ತರಿಸಬೇಕಾದ ದಿನಾಂಕ	:	15.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಉಡುಪಿ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತ್‌ಗಳಲ್ಲಿ ವಸತಿ ಯೋಜನೆಯಡಿ ವಿವಿಧ ಕಾರಣಗಳಿಂದ ಬ್ಲಾಕ್ ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಉಡುಪಿ ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಕಾರಣಗಳಿಂದ ಒಟ್ಟು 3575 ಮನೆಗಳನ್ನು ಬ್ಲಾಕ್ ಮಾಡಿ ರದ್ದುಪಡಿಸಲಾಗಿರುತ್ತದೆ.

ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>(ಆ)</td><td>ಕಾಪು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಹಂತಗಳಲ್ಲಿ ಬ್ಲಾಕ್ ಆಗಿರುವ ಪ್ರಕರಣಗಳೆಷ್ಟು; (ವರ್ಷವಾರು ಹಾಗೂ ಯೋಜನಾವಾರು ಮಾಹಿತಿ ನೀಡುವುದು)</td><td>ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಒಟ್ಟು 738 ಫಲಾನುಭವಿಗಳ ಮನೆಗಳನ್ನು ಬ್ಲಾಕ್ ಮಾಡಿ ರದ್ದುಪಡಿಸಲಾಗಿರುತ್ತದೆ. ವರ್ಷವಾರು ಮತ್ತು ಯೋಜನಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಯೋಜನೆ</th><th>ಶ್ರೇಣಿ</th><th>ಬ್ಲಾಕ್ ಮಾಡಿ ರದ್ದಾದ ಮನೆಗಳು</th></tr>
<tr><td rowspan="5">ಬಸವ ವಸತಿ ಯೋಜನೆ</td><td>2013-2014</td><td>166</td></tr>
<tr><td>2015-2016</td><td>178</td></tr>
<tr><td>2016-2017</td><td>106</td></tr>
<tr><td>2017-2018</td><td>183</td></tr>
<tr><td>2018-2019</td><td>1</td></tr>
<tr><td rowspan="3">ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ</td><td>2015-2016</td><td>39</td></tr>
<tr><td>2016-2017</td><td>10</td></tr>
<tr><td>2017-2018</td><td>16</td></tr>
<tr><td>ವಾಜಪೇಯಿ ನಗರ ವಸತಿ ಯೋಜನೆ</td><td>2017-2018</td><td>39</td></tr>
<tr><td colspan="2">ಒಟ್ಟು</td><td>738</td></tr>
</table></td></tr>
<tr><td>(ಇ)</td><td>ಪ್ರಸ್ತುತ ಬ್ಲಾಕ್ ಆದ ಮನೆಗಳ ಪಟ್ಟಿಯಲ್ಲಿ ನೈಜ ಫಲಾನುಭವಿಗಳು ಇದ್ದಲ್ಲಿ ಅಂತಹ ಫಲಾನುಭವಿಗಳಿಗೆ ಮತ್ತೊಂದು ಅವಕಾಶ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ ಸದರಿ ಫಲಾನುಭವಿಗಳಿಗೆ ಹೊಸ ಗುರಿಯಡಿ ಸೇರ್ಪಡೆಗೆ ಅವಕಾಶ ನೀಡಲಾಗುವುದೇ;</td><td>ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪ್ರಾರಂಭಮಾಡಿಕೊಳ್ಳದ ಮನೆಗಳನ್ನು ಮನೆ ಮಾರ್ಗಸೂಚಿಗಳನ್ವಯ ಬ್ಲಾಕ್ ಮಾಡಲಾಗಿರುತ್ತದೆ.

ಜನ ಪ್ರತಿನಿದಿಗಳ ಕೋರಿಕೆಯಂತೆ ಸರಕಾರವು ದಿನಾಂಕ:14.02.2020 ರಂದು ಆದೇಶ ಹೊರಡಿಸಿ ವಿವಿಧ ವಸತಿ ಯೋಜನೆಗಳಡಿ ನಿಗದಿತ ಸಮಯದಲ್ಲಿ ಪ್ರಾರಂಭಗೊಳ್ಳದೇ ಬ್ಲಾಕ್ ಆಗಿದ್ದ ಮನೆಗಳನ್ನು ತೆರವುಗೊಳಿಸಿ, ವಾಸ್ತವವಾಗಿ ಪ್ರಾರಂಭವಾಗಿರುವ ಮನೆಗಳ ಛಾಯಾಚಿತ್ರಗಳನ್ನು ಜಿಪಿಎಸ್ ಗೆ ಅಳವಡಿಸಲು ಒಂದೂವರೆ ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಈ ಅವಧಿಯಲ್ಲಿ ಜಿ.ಪಿ.ಎಸ್. ಮಾಡಿರುವ</td></tr>
</table>

ಕ್ರ. ಸಂ.	ಪ್ರಶ್ನೆ	ಉತ್ತರ
		ಫಲಾನುಭವಿಗಳನ್ನು ಪ್ರಗತಿಗೆ ಪರಿಗಣಿಸಿ ಉಳಿದ ಎಲ್ಲಾ ಮನೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ವಇ 12 ಹೆಚ್‌ಎಹೆಚ್ 2020, ದಿನಾಂಕ:19.05.2020 ರನ್ವಯ ರದ್ದುಪಡಿಸಲಾಗಿದೆ. ಸದರಿ ಫಲಾನುಭವಿಗಳು ಅರ್ಹರಿದ್ದಲ್ಲಿ ಹೊಸ ಗುರಿಯಡಿ ಸೇರ್ಪಡೆಗೆ ಅವಕಾಶ ಇದೆ.
(ಈ)	ಪ್ರಸ್ತುತ ವಸತಿ ಯೋಜನೆಯಡಿ ಮನೆ ನಿರ್ಮಿಸಿಕೊಳ್ಳಲು ತೊಂದರೆ ಅನುಭವಿಸುತ್ತಿರುವ ಅರ್ಹ ವಸತಿ ರಹಿತ ಕುಟುಂಬಗಳಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?	ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳ ಪೈಕಿ ಪ್ರಗತಿಯಲ್ಲಿರುವ ಮನೆಗಳಲ್ಲಿ ಕೆಲವು ಮನೆಗಳು ಅನರ್ಹ ಫಲಾನುಭವಿಗಳ ಆಯ್ಕೆ ಕಂಡುಬಂದಿರುವುದರಿಂದ ಸರ್ಕಾರವು ವಿವಿಧ ವಸತಿ ಯೋಜನೆಗಳಡಿ ಅನುದಾನ ದುರ್ಬಳಕೆಯನ್ನು ತಡೆಹಿಡಿಯುವ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ:ವಇ 54 ಹೆಚ್‌ಎಎಂ 2019, ದಿನಾಂಕ:16.11.2019 ರಲ್ಲಿ ಪ್ರಗತಿಯಲ್ಲಿರುವ ಮನೆಗಳನ್ನು ಇಂದಿರಾ ಮನೆ ಮೊಬೈಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹಗೊಂಡ ನಂತರ ಸದರಿ ಮನೆಗಳ ಪ್ರಗತಿಯನ್ನು ಮತ್ತೊಮ್ಮೆ Geo ಆಧಾರಿತ ವಿಜಿಲ್ ಆಪ್ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರು ಪರಿಶೀಲಿಸಿ ಅರ್ಹಗೊಂಡ ಮನೆಗಳಿಗೆ ಆಧಾರ್ ಜೋಡಣೆಯಾದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಅನುದಾನ ಬಿಡುಗಡೆ ಮಾಡಲಾಗುತ್ತಿತ್ತು. ವಿಜಿಲ್ ಆಪ್ ಮೂಲಕ ಪರಿಶೀಲಿಸಿ, ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಆಗುತ್ತಿರುವ ವಿಳಂಬವನ್ನು ಗಮನಿಸಿ ಸರ್ಕಾರವು ಆದೇಶ ಸಂಖ್ಯೆ :ವಇ 12 ಹೆಚ್‌ಎಹೆಚ್ 2020, ದಿನಾಂಕ:01.02.2021 & 02.02.2021 ರಲ್ಲಿ ವಿಜಿಲ್ ಆಪ್ ಮೂಲಕ ಪರಿಶೀಲಿಸುವುದಕ್ಕೆ ದಿನಾಂಕ:31.03.2021 ರವರಗೆ ವಿನಾಯಿತಿ ನೀಡಲಾಗಿದ್ದು, ಅದರಂತೆ ಪ್ರಸ್ತುತ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವ ವಿಧಾನಗಳನ್ನು ಸರಳೀಕರಣಗೊಳಿಸಿ ಭೌತಿಕ ಪ್ರಗತಿಗನುಗುಣವಾಗಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಸಂಖ್ಯೆ :ವಇ 101 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು

ಅನುಬಂಧ
LAQ-1375

District	Taluk	Scheme	SeriesYear	Blocked
Udupi	Brahmavara	Basava Housing Scheme	2013-2014	81
Udupi	Brahmavara	Basava Housing Scheme	2015-2016	120
Udupi	Brahmavara	Basava Housing Scheme	2016-2017	44
Udupi	Brahmavara	Basava Housing Scheme	2017-2018	137
Udupi	Brahmavara	Basava Housing Scheme_Additional	2013-2014	36
Udupi	Brahmavara	Basava Housing Scheme_Additional	2016-2017	18
Udupi	Brahmavara	Basava Housing Scheme_Additional	2017-2018	50
Udupi	Brahmavara	Dr.B.R Ambedkar Nivas Yojana Rural	2015-2016	26
Udupi	Brahmavara	Dr.B.R Ambedkar Nivas Yojana Rural	2016-2017	27
Udupi	Brahmavara	Dr.B.R Ambedkar Nivas Yojana Rural	2017-2018	25
	Brahmavara Total			**564**
Udupi	Bynduru	Basava Housing Scheme	2013-2014	49
Udupi	Bynduru	Basava Housing Scheme	2015-2016	69
Udupi	Bynduru	Basava Housing Scheme	2016-2017	24
Udupi	Bynduru	Basava Housing Scheme	2017-2018	107
Udupi	Bynduru	Basava Housing Scheme_Additional	2013-2014	29
Udupi	Bynduru	Basava Housing Scheme_Additional	2016-2017	12
Udupi	Bynduru	Basava Housing Scheme_Additional	2017-2018	41
Udupi	Bynduru	Dr.B.R Ambedkar Nivas Yojana Rural	2015-2016	25
Udupi	Bynduru	Dr.B.R Ambedkar Nivas Yojana Rural	2016-2017	25
Udupi	Bynduru	Dr.B.R Ambedkar Nivas Yojana Rural	2017-2018	13
	Bynduru Total			**394**
Udupi	Hebri	Basava Housing Scheme	2013-2014	15
Udupi	Hebri	Basava Housing Scheme	2015-2016	11
Udupi	Hebri	Basava Housing Scheme	2016-2017	2
Udupi	Hebri	Basava Housing Scheme	2017-2018	7
Udupi	Hebri	Basava Housing Scheme_Additional	2016-2017	0
Udupi	Hebri	Basava Housing Scheme_Additional	2017-2018	9
Udupi	Hebri	Dr.B.R Ambedkar Nivas Yojana Rural	2015-2016	0
Udupi	Hebri	Dr.B.R Ambedkar Nivas Yojana Rural	2016-2017	4
Udupi	Hebri	Dr.B.R Ambedkar Nivas Yojana Rural	2017-2018	1
	Hebri Total			**49**
Udupi	Kapu	Basava Housing Scheme	2013-2014	40
Udupi	Kapu	Basava Housing Scheme	2015-2016	125
Udupi	Kapu	Basava Housing Scheme	2016-2017	47
Udupi	Kapu	Basava Housing Scheme	2017-2018	129
Udupi	Kapu	Basava Housing Scheme_Additional	2013-2014	30
Udupi	Kapu	Basava Housing Scheme_Additional	2016-2017	20
Udupi	Kapu	Basava Housing Scheme_Additional	2017-2018	3
Udupi	Kapu	Dr.B.R Ambedkar Nivas Yojana Rural	2015-2016	26
Udupi	Kapu	Dr.B.R Ambedkar Nivas Yojana Rural	2016-2017	5
Udupi	Kapu	Dr.B.R Ambedkar Nivas Yojana Rural	2017-2018	6
	Kapu Total			**431**
Udupi	Karkala	Basava Housing Scheme	2013-2014	56
Udupi	Karkala	Basava Housing Scheme	2015-2016	117
Udupi	Karkala	Basava Housing Scheme	2016-2017	102

ಅನುಬಂಧ

LAQ-1375

District	Taluk	Scheme	SeriesYear	Blocked
Udupi	Karkala	Basava Housing Scheme	2017-2018	220
Udupi	Karkala	Basava Housing Scheme_Additional	2016-2017	24
Udupi	Karkala	Basava Housing Scheme_Additional	2017-2018	73
Udupi	Karkala	Dr.B.R Ambedkar Nivas Yojana Rural	2015-2016	26
Udupi	Karkala	Dr.B.R Ambedkar Nivas Yojana Rural	2016-2017	49
Udupi	Karkala	Dr.B.R Ambedkar Nivas Yojana Rural	2017-2018	40
	Karkala Total			707
Udupi	Kundapura	Basava Housing Scheme	2013-2014	90
Udupi	Kundapura	Basava Housing Scheme	2015-2016	246
Udupi	Kundapura	Basava Housing Scheme	2016-2017	93
Udupi	Kundapura	Basava Housing Scheme	2017-2018	235
Udupi	Kundapura	Basava Housing Scheme	2018-2019	4
Udupi	Kundapura	Basava Housing Scheme_Additional	2013-2014	43
Udupi	Kundapura	Basava Housing Scheme_Additional	2016-2017	26
Udupi	Kundapura	Basava Housing Scheme_Additional	2017-2018	167
Udupi	Kundapura	Dr.B.R Ambedkar Nivas Yojana Rural	2015-2016	66
Udupi	Kundapura	Dr.B.R Ambedkar Nivas Yojana Rural	2016-2017	67
(ಇ)	ಪ್ಯಾಕೇಜ್-4ರ ಅಡಿಯಲ್ಲಿ ಕೆಲ ಪ್ರದೇಶಗಳಲ್ಲಿ ಸ್ವತ್ತಿಗೆ ಸಂಬಂಧಿಸಿದಂತೆ ವಿವಾದವಿದ್ದು, ಕಾಮಗಾರಿಗಾಗಿ ಚಾಲನೆ ನೀಡದೆ ಇರುವುದರಿಂದ ಉಳಿಕೆ ಮನೆಗಳನ್ನು ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮನೆ	ಪ್ಯಾಕೇಜ್- 4 ರಡಿಯಲ್ಲಿ ಬರುವ 7446 ಬಹುಮಹಡಿ ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು ಅಗತ್ಯವಿರುವ ಜಮೀನುಗಳು ಲಭ್ಯವಿರುತ್ತವೆ. ಸದರಿ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ

	ನಿರ್ಮಾಣಕ್ಕೆ ಯೋಗ್ಯವಾದ ಸವಲತ್ತುಗಳು ಗುರುತಾಗಿದ್ದು, ಸದರಿ ಸ್ಥಳಗಳಲ್ಲಿ ಶೀಘ್ರ ಮನೆ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದೇ ; ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಸದರಿ ಕಾರ್ಯ ಪೂರ್ಣಗೊಳಿಸಲಾಗುವುದು ; (ವಿವರ ನೀಡುವುದು)	ಮೊದಲನೇ ಹಂತದಡಿ ಗಾಣಿಗರಹಳ್ಳಿ ಸರ್ವೆ ನಂ.74 ರಲ್ಲಿ ಈಗಾಗಲೇ 931 ಬಹುಮಹಡಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಮತ್ತು ಶೆಟ್ಟಿಹಳ್ಳಿ ಸರ್ವೆ ನಂ.59 ರ ಜಮೀನಿನಲ್ಲಿ ಎರಡನೇ ಹಂತದಲ್ಲಿ 336 ಜಿ+3 ಮಾದರಿಯ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕ:08.03.2021 ರಂದು ಟೆಂಡರ್ ಕರೆಯಲಾಗಿದೆ. ಸದರಿ ಯೋಜನೆಗೆ ಜಮೀನಿನ ಅವಶ್ಯಕತೆ ಇರುವುದರಿಂದ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ಸರ್ಕಾರಿ ಜಮೀನು ಮುಫತ್ತಾಗಿ ಲಭ್ಯವಾದಲ್ಲಿ, ಎರಡನೇ ಹಂತದಲ್ಲಿ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.
(ಈ)	ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈವರೆಗೆ ನಿರಾಶ್ರಿತ ಮನೆಗಳಿಗೆ ಸುಮಾರು 3800 ಅರ್ಜಿಗಳು ದಾಖಲಾಗಿದ್ದು, 1267 ಮನೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದ್ದು, ಇನ್ನುಳಿದವರಿಗೆ ವಸತಿ ಸೌಲಭ್ಯ ಕಲ್ಪಿಸಲು ಹೆಚ್ಚುವರಿ ಮನೆಗಳನ್ನು ಕ್ಷೇತ್ರ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಲು ಸರ್ಕಾರದ ಶೀಘ್ರವೇ ಕ್ರಮ ಜರಿಗಿಸುವುದು ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ? (ವಿವರ ನೀಡುವುದು)	ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗಾಣಿಗರಹಳ್ಳಿ ಸರ್ವೆ ನಂ.74 ರಲ್ಲಿ 1 BHK ಯ 796 ಬಹುಮಹಡಿ ಮನೆಗಳನ್ನು ಮತ್ತು 2 BHK ಯ135 ಬಹುಮಹಡಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಸದರಿ 931 ಬಹುಮಹಡಿ ಮನೆಗಳನ್ನು ಮೂಲಭೂತ ಸೌಲಭ್ಯಗಳೊಂದಿಗೆ ಜೂನ್-2022 ರೊಳಗೆ ಪೂರ್ಣಗೊಳಿಸಲು ಕ್ರಮ ಜರುಗಿಸಿದೆ. ಶೆಟ್ಟಿಹಳ್ಳಿ ಸರ್ವೆ ನಂ. 59 ರಲ್ಲಿ 1 BHK ಯ 336 ಮನೆಗಳನ್ನು ಜಿ+3 ಮಾದರಿಯಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು ದಿನಾಂಕ:08.03.2021 ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಅರ್ಹ ಗುತ್ತಿಗೆದಾರರಿಗೆ ವಹಿಸಿ ಜೂನ್-2023 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ. ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ಸರ್ಕಾರಿ ಜಮೀನು ಮುಫತ್ತಾಗಿ ಲಭ್ಯವಾದಲ್ಲಿ ಇನ್ನುಳಿದವರಿಗೆ ವಸತಿ ಸೌಲಭ್ಯ ಕಲ್ಪಿಸಲು ಹೆಚ್ಚುವರಿ ಮನೆಗಳನ್ನು ಜೂನ್-2023 ರೊಳಗೆ ನಿರ್ಮಿಸಲು ಕ್ರಮ ಜರುಗಿಸಲಾಗುವುದು.

ಸಂಖ್ಯೆ : ವಇ 57 ಹೆಚ್‌ಎಫ್‌ಎ 2021

(ವಿ. ಸೋಮಣ್ಣ)
ವಸತಿ ಸಚಿವರು

ಅನುಬಂಧ--1

ಕ್ರ. ಸ.	ವಸತಿ ಘಟಕ (ಕಾರ್ಪೆಟ್ ಏರಿಯಾ)	ಗುತ್ತಿಗೆ ವಹಿಸಿದ ಪ್ರತಿ ಮನೆಯ ಘಟಕ ವೆಚ್ಚ ಮೂಲಭೂತ ಸೌಲಭ್ಯಗಳು ಸೇರಿದಂತೆ (ರೂ. ಲಕ್ಷಗಳು)	ಪಿಎಂಎವೈ (ನಗರ) ಯೋಜನೆ ಅಡಿ ಕೇಂದ್ರ ಸರ್ಕಾರದ ಅನುದಾನ (ರೂ. ಲಕ್ಷಗಳು)	ಡಾ.ಬಿ.ಆರ್ ಅಂಬೇಡ್ಕರ್ / ವಾಜಪೇಯಿ ವಸತಿ ಯೋಜನೆಯಡಿ ರಾಜ್ಯ ಸರ್ಕಾರದ ಅನುದಾನ (ರೂ. ಲಕ್ಷಗಳು)	ಫಲಾನುಭವಿ ಭರಿಸಬೇಕಾದ ಬಾಕಿ ಮೊತ್ತ (ರೂ. ಲಕ್ಷಗಳು)
1	1 ಬಿಹೆಚ್‌ಕೆ (EWS) 30 ಚ.ಮೀ.	10.60	1.50	ರೂ. 2.00 ಲಕ್ಷಗಳು (ಪ.ಜಾತಿ/ಪ.ವರ್ಗಕ್ಕೆ) ರೂ. 1.20 ಲಕ್ಷಗಳು (ಸಾಮಾನ್ಯ ವರ್ಗ ಕ್ಕೆ)	ರೂ. 7.10 ಲಕ್ಷಗಳು (ಪ.ಜಾತಿ/ಪ.ವರ್ಗ)ಕ್ಕೆ ರೂ. 7.90 ಲಕ್ಷಗಳು (ಸಾಮಾನ್ಯ ವರ್ಗ)
2	2 ಬಿಹೆಚ್‌ಕೆ (LIG) 45 ಚ.ಮೀ.	15.00 (ಜಮೀನಿನ ಮೊತ್ತ ಹೊರತುಪಡಿಸಿ)	ಇಲ್ಲ	ಇಲ್ಲ	ರೂ.15 ಲಕ್ಷಗಳು ಅಥವಾ ಬಿಡ್ ಮೊತ್ತ ಯಾವುದು ಹೆಚ್ಚು ಇದೆಯೋ ಅದು

09/03/21
ಮುಖ್ಯ ಅಭಿಯಂತರರು
ರಾ.ಗಾಂ.ವ.ನಿ.ನಿ

ಅನುಬಂಧ-2

ಕ್ರ ಸಂ	ಸ್ಥಳ	ವಿಸ್ತೀರ್ಣ (ಎ-ಗು)	ಮನೆಗಳ ಮಾದರಿ	ಮನೆಗಳ ಸಂಖ್ಯೆ			ಕಾಮಗಾರಿ ಪ್ರಾರಂಭಿಸಿರುವ ಮನೆಗಳ ಸಂಖ್ಯೆ	ಭೌತಿಕ ಪ್ರಗತಿಯ ವಿವರಗಳು				
				1ಬಿಹೆಚ್‌ಕೆ	2ಬಿಹೆಚ್‌ಕೆ	ಒಟ್ಟು		ಜಮೀನು ಸಮತಟ್ಟು	ಮಣ್ಣು ಅಗೆತ	ತಳಪಾಯ	ಪ್ಲಿಂಥ್	ಛಾವಣಿ
1	ಅಗ್ರಹಾರಪಾಳ್ಯ ಸ.ನಂ.30	05–00	G+3	488	0	488	488	110	55	213	110	0
2	ಲಕ್ಷ್ಮೀಪುರ ಸ.ನಂ.69	02–00	G+3	286	0	286	286	286	0	0	0	0
3	ಪಿಲ್ಲಹಳ್ಳಿ ಸ.ನಂ.53	03–17	G+3	306	0	306	306	0	0	259	47	0
4	ಗಾಣಿಗರಹಳ್ಳಿ ಸ.ನಂ.74	05–00	S+11 & S+13	796	135	931	931	0	0	510	421	0
5	ಗೋವಿಂದಪುರ ಸ.ನಂ.2	05–00	S+7	701	0	701	701	422	279	0	0	0
6	ಸಿಂಗನಾಯಕನಹಳ್ಳಿ ಸ.ನಂ.111	03–30	S+13	653	0	653	0	0	0	0	0	0
7	ಬಿಳಿಜಾಜಿ ಸ.ನಂ.27	18–00	S+14	3592	0	3592	3592	3592	0	0	0	0
8	ನಾಗದಾಸನಹಳ್ಳಿ ಸ.ನಂ.63	04–01	S+7	0	489	489	0	0	0	0	0	0
	ಒಟ್ಟು	**46–08**		**6822**	**624**	**7446**	**6304**	**4410**	**334**	**982**	**578**	**0**

09/07/21

ಮುಖ್ಯ ಅಭಿಯಂತರರು
ರಾ.ಗಾಂ.ವ.ನಿ.ನಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2128
ಸದಸ್ಯರ ಹೆಸರು	:	ಶ್ರೀ ಬೆಳ್ಳಿಪ್ರಕಾಶ್ [ಕಡೂರು]
ವಿಷಯ	:	ಪಿಂಚಣಿ ಪಡೆಯುವಲ್ಲಿ ಆಗುತ್ತಿರುವ ತೊಂದರೆಗಳು
ಉತ್ತರಿಸಬೇಕಾದ ದಿನಾಂಕ	:	15/3/2021
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

	ಪ್ರಶ್ನೆ	ಉತ್ತರ
ಅ	ದಿನಾಂಕ : 1/5/2018 ರಿಂದ 28/2/2021 ರವರೆಗೆ ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಎಷ್ಟು ಜನ ಫಲಾನುಭವಿಗಳು ವಿವಿಧ ಬಗೆಯ ಪಿಂಚಣಿಗಳನ್ನು ಪಡೆದು ಕೊಂಡಿರುತ್ತಾರೆ : [ಪಿಂಚಣಿಯ ವಿಧದೊಂದಿಗೆ ವರ್ಷವಾರು ಫಲಾನುಭವಿಗಳ ಅಂಗವಾರು ಅಂಕಿ-ಅಂಶದ ವಿವರಗಳನ್ನು ನೀಡುವುದು]	ದಿನಾಂಕ : 1/5/2018 ರಿಂದ 28/2/2021 ರವರೆಗೆ ಕಡೂರು ತಾಲ್ಲೂಕಿನಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿಯಲ್ಲಿ ಒಟ್ಟು 16790 ಜನ ಫಲಾನುಭವಿಗಳು ವಿವಿಧ ಬಗೆಯ ಪಿಂಚಣಿಗಳನ್ನು ಪಡೆದು ಕೊಂಡಿರುತ್ತಾರೆ : ಪಿಂಚಣಿಯ ವಿಧದೊಂದಿಗೆ ವರ್ಷವಾರು ಫಲಾನುಭವಿಗಳ ಅಂಗವಾರು ಅಂಕಿ-ಅಂಶದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ	ವಿವಿಧ ಪಿಂಚಣಿಗಳ ಯೋಜನೆಯಡಿಯಲ್ಲಿ ಮಾಸಿಕ ನೀಡಲಾಗುತ್ತಿರುವ ಪಿಂಚಣಿ ಹಣದ ಮೊತ್ತವೆಷ್ಟು : ಪ್ರತಿ ತಿಂಗಳು ಯಾವ ದಿನಾಂಕದಂದು ಫಲಾನುಭವಿಗಳಿಗೆ ಪಿಂಚಣಿ ಸಂದಾಯವಾಗುತ್ತಿದೆ : ಕಳೆದ ಮೂರ್‍ನಾಲ್ಕು ತಿಂಗಳುಗಳಿಂದ ಕೆಲ ಪಿಂಚಣಿದಾರರಿಗೆ ಸರಿಯಾಗಿ ಪಿಂಚಣಿ ಸಂದಾಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ವಿವಿಧ ಪಿಂಚಣಿಗಳ ಯೋಜನೆಯಡಿಯಲ್ಲಿ ಮಾಸಿಕ ನೀಡಲಾಗುತ್ತಿರುವ ಪಿಂಚಣೀ ಹಣದ ವಿವರ ಕೆಳಕಂಡಂತಿದೆ :
ಇ	ಹಾಗಿದ್ದಲ್ಲಿ ನಿಗದಿತ ಸಮಯದಲ್ಲಿ ಪಿಂಚಣಿ ಸಂದಾಯ ಮಾಡಲಾಗುವುದೇ : ಈ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? [ವಿವರ ನೀಡುವುದು]	

ಕ್ರಮ ಸಂಖ್ಯೆ	ಯೋಜನೆ	ಪಿಂಚಣಿ ಮೊತ್ತ [ರೂ.ಗಳಲ್ಲಿ]
1	ವೃದ್ಧಾಪ್ಯ ವೇತನ [60 ರಿಂದ 64 ವರ್ಷದೊಳಗಿನವರಿಗೆ]	600
	ವೃದ್ಧಾಪ್ಯ ವೇತನ [65 ವರ್ಷ ಮೇಲ್ಪಟ್ಟವರಿಗೆ]	1000
2	ವಿಧವಾ ವೇತನ	600
3	ಅಂಗವಿಕಲ ವೇತನ [ಶೇಕಡ 40 ರಷ್ಟು ಅಂಗವಿಕಲತೆಯುಳ್ಳವರಿಗೆ]	600
	ಅಂಗವಿಕಲ ವೇತನ [ಶೇಕಡ 75 ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳವರಿಗೆ]	1400
4	ಸಂಧ್ಯಾ ಸುರಕ್ಷಾ ಯೋಜನೆ	1000
5	ಮನಸ್ವಿನಿ	600
6	ಮೈತ್ರಿ	600
7	ಸಾಲ ಬಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ವಿಧವಾ ವೇತನ	2000
8	ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಯೋಜನೆ	3000

		ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ / *IFSC CODE* / *PIN CODE* ಮಾಹಿತಿಯನ್ನು ನಿಖರವಾಗಿ ನೀಡದೆ ಇರುವ ಕಾರಣ *NO SUCH ACCOUNT / INVALID BANK DETAILS* ಮತ್ತು *INVALID ADDRESS* ಕಾರಣದಿಂದ ಪಿಂಚಣಿ ಪಾವತಿಯಾಗದೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಗತ್ಯ ಮಾಹಿತಿ ಸಂಗ್ರಹಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಫಲಾನುಭವಿಗಳು ಅಗತ್ಯ ಮಾಹಿತಿ ನೀಡಿದಲ್ಲಿ ನ್ಯೂನತೆಯನ್ನು ಸರಿಪಡಿಸಿ ತಂತ್ರಾಂಶದಲ್ಲಿ ಮೇಲ್ಕಂಡ ನ್ಯೂನ್ಯತೆಗಳನ್ನು ಸರಿಪಡಿಸಿ ಪಿಂಚಣಿ ಪಾವತಿ ಚಾಲನೆಗೊಳಿಸಲು ತಹಸೀಲ್ದಾರ್‌ರರಿಗೆ ಅವಕಾಶ ಕಲ್ಪಿಸಲಾಗಿದ್ದು ತಹಸೀಲ್ದಾರ್‌ರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮ ವಹಿಸಲಾಗುತ್ತಿದೆ. ನಿಗದಿತ ಸಮಯದಲ್ಲಿ ಪಿಂಚಣಿ ಸಂದಾಯ ಮಾಡಲಾಗುತ್ತಿದೆ

ಸಂಖ್ಯೆ : ಡಿಎಸ್‌ಎಸ್‌ಪಿ - ಎಲ್‌ಎಕ್ಯೂ 11/2021

[ಆರ್. ಅಶೋಕ],
ಕಂದಾಯ ಸಚಿವರು

ಶ್ರೀ ಬೆಳ್ಳಿಪ್ರಕಾಶ್ [ಕಡೂರು]ರವರ ಚುಕ್ಕೆ ಗುರುತಿಲ್ಲದ ವಿಧಾನಸಭೆ ಪ್ರಶ್ನೆ ಸಂಖ್ಯೆ : 2128ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಯೋಜನೆಗಳ ವಿವರ	2019		2020		2021	
		ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ
1	ವೃದ್ಧಾಪ್ಯ ವೇತನ	1359	1243	624	596	52	45
2	ವಿಧವಾ ವೇತನ	-	536	-	402	-	53
3	ಅಂಗವಿಕಲ ವೇತನ	187	115	124	86	20	19
4	ಸಂಧ್ಯಾ ಸುರಕ್ಷಾ ಯೋಜನೆ	1359	1170	1255	1281	140	134
5	ಮನಸ್ವಿನಿ	-	90	-	46	-	6
6	ಮೈತ್ರಿ	-	-	-	2	-	-
7	ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ ವಿಧವಾ ವೇತನ	-	3	-	7	-	1
8	ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಯೋಜನೆ	-	-	-	-	-	-
9	ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಾಸಾಶನ	-	-	-	-	-	-

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2129
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಬೆಳ್ಳಿ ಪ್ರಕಾಶ್ (ಕಡೂರು)
ಉತ್ತರಿಸುವ ದಿನಾಂಕ : 15-03-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾದ ವಿವಿಧ ರೀತಿಯ ಭವನಗಳು ಎಷ್ಟು; (ವರ್ಷವಾರು ಮಂಜೂರಾದ ಭವನಗಳ ಸಂಪೂರ್ಣ ವಿವರಗಳನ್ನು ನೀಡುವುದು)	2017-18ನೇ ಸಾಲಿನಿಂದ 2019-20ನೇ ಸಾಲಿನ ವರೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಒಟ್ಟಾರೆ 09 ಡಾ॥ ಬಿ.ಆರ್ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಂ / ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ / ತಾತ್ವಿಕ ಮಂಜೂರಾತಿ ನೀಡಲಾಗಿದ್ದು, ವರ್ಷವಾರು ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. 2020-21ನೇ ಸಾಲಿನಲ್ಲಿ ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಭವನಗಳ ಮಂಜೂರಾತಿ ಕೋರಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ)	ಅವುಗಳಲ್ಲಿ ಎಷ್ಟು ಭವನಗಳಿಗೆ ತಾತ್ವಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ದೊರಕಿದೆ; ಆಡಳಿತಾತ್ಮಕ ಮಂಜೂರಾತಿಯೊಂದಿಗೆ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಿರುವ ಭವನಗಳು ಎಷ್ಟು; (ವರ್ಷವಾರು ಪೂರ್ಣ ವಿವರಗಳನ್ನು ನೀಡುವುದು)	ಮಂಜೂರಾದ 09 ಭವನಗಳ ಪೈಕಿ 2017-18ನೇ ಸಾಲಿನಲ್ಲಿ ತಾತ್ವಿಕ ಮಂಜೂರಾತಿ ನೀಡಲಾದ 05 ಭವನಗಳ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಲಭ್ಯವಿಲ್ಲದ ಕಾರಣ ಸದರಿ 05 ಭವನಗಳ ತಾತ್ವಿಕ ಮಂಜೂರಾತಿಯನ್ನು ರದ್ದುಪಡಿಸಲಾಗಿರುತ್ತದೆ. ಉಳಿದಂತೆ, 2019-20ನೇ ಸಾಲಿನಲ್ಲಿ ಮಂಜೂರಾದ 04 ಭವನಗಳ ನಿರ್ಮಾಣಕ್ಕಾಗಿ ಭಾಗಶಃ ಅನುದಾನವನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿರುತ್ತದೆ. ಈ ಪೈಕಿ 2 ಭವನಗಳ ನಿರ್ಮಾಣ ಸಂಬಂಧವಾಗಿ ಜಿಲ್ಲಾ ಹಂತದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ, ಕಾಮಗಾರಿ ಪ್ರಾರಂಭಿಸಲು ಕ್ರಮವಹಿಸಲಾಗಿರುತ್ತದೆ. ಬಾಕಿ 02 ಭವನಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿವೇಶನ ಸಮಸ್ಯೆ ಇರುವುದರಿಂದ ಸೂಕ್ತ ಬದಲಿ ನಿವೇಶನ ಪಡೆಯಲು ಕ್ರಮವಹಿಸಲಾಗುತ್ತಿದೆ. ಭವನವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.
ಇ)	ತಾತ್ವಿಕ ಮಂಜೂರಾತಿ ದೊರೆತು ಆಡಳಿತಾತ್ಮಕ ಮಂಜೂರಾತಿ ದೊರೆಯದೇ ಹಾಗೂ ಅನುದಾನ ಬಿಡುಗಡೆಯಾಗದಿರುವ ಭವನಗಳು ಎಷ್ಟು; ಆಡಳಿತಾತ್ಮಕ ಮಂಜೂರಾತಿ ನೀಡುವುದಕ್ಕೆ ಬಾಕಿ ಇರಲು ಕಾರಣಗಳೇನು; (ವರ್ಷವಾರು ಪೂರ್ಣ ವಿವರಗಳನ್ನು ನೀಡುವುದು)	

ಈ	ಮಂಜೂರಾಗಿರುವ ಭವನಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವುದಾದರೂ ಕಾಲಮಿತಿ ನಿಗದಿಪಡಿಸಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?	ಮಂಜೂರಾತಿ ನೀಡಲಾದ ಭವನಗಳ ನಿರ್ಮಾಣ ಸಂಬಂಧವಾಗಿ ಸೂಕ್ತ ನಿವೇಶನವನ್ನು ಗುರುತಿಸಿ. ಇಲಾಖೆಯ ವಶಕ್ಕೆ ಪಡೆದು, ನಂತರ ಲಭ್ಯವಿರುವ ನಿವೇಶನಕ್ಕನುಗುಣವಾಗಿ ಸರ್ಕಾರಿ ನಿರ್ಮಾಣ ಏಜೆನ್ಸಿಗಳ ವತಿಯಿಂದ ಕ್ರಮ ವಹಿಸಲಾಗುವುದು. ಕಾಮಗಾರಿಗಳನ್ನು ಪ್ರಾರಂಭಿಸುವ ಹಂತದಲ್ಲಿ ನಿವೇಶನದ ಒಡೆತನಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳು ಉದ್ಭವವಾಗುವುದರಿಂದ ಭವನಗಳ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು ಕಷ್ಟಸಾಧ್ಯವಾಗುತ್ತಿದೆ. ಮಂಜೂರಾತಿ ಮೊತ್ತಕ್ಕೆ ಅನುಗುಣವಾಗಿ ಭವನಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಯನ್ನು ಆಧರಿಸಿ ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.

ಸಕಇ 109 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬೆಳ್ಳಿ ಪ್ರಕಾಶ್ (ಕಡೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2129ಕ್ಕೆ ಅನುಬಂಧ

2017-18ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ಡಾ: ಬಿ.ಆರ್.ಅಂಬೇಡ್ಕರ್ ಭವನ / ಡಾ: ಬಾಬು ಜಗಜೀವನ ರಾಂ ಭವನ / ಸಮುದಾಯ ಭವನಗಳ ವಿವರ.

ರೂ ಲಕ್ಷಗಳಲ್ಲಿ

ಕ್ರ. ಸಂ	ಮಂಜೂರಾದ ವರ್ಷ	ಭವನದ ವಿವರ	ಮಂಜೂರಾದ ಸ್ಥಳ	ಮಂಜೂರಾತಿ ಮೊತ್ತ	ಬಿಡುಗಡೆ ಮೊತ್ತ	ಕಾಮಗಾರಿ ಹಂತ	ಷರಾ
1	2	3	4	5	6	7	8
1	2017-18	ಅಂಬೇಡ್ಕರ್ ಭವನ	ಡಿ.ಕಾರೇಹಳ್ಳಿ	12.00	0.00	–	ಸದರಿ ಸ್ಥಳಗಳಲ್ಲಿ ಸೂಕ್ತ ನಿವೇಶನ ಲಭ್ಯವಿಲ್ಲದ ಕಾರಣ ಸದರಿ ಭವನಗಳ ತಾತ್ವಿಕ ಮಂಜೂರಾತಿಯನ್ನು ರದ್ದುಪಡಿಸಲಾಗಿರುತ್ತದೆ
2	2017-18	ಸಮುದಾಯ ಭವನ	ರಾಂಪುರ	12.00	0.00	–	
3	2017-18	ಸಮುದಾಯ ಭವನ	ಸೀತಾಪುರ	12.00	0.00	–	
4	2017-18	ಸಮುದಾಯ ಭವನ	ಗುಜ್ಜೇನಹಳ್ಳಿ	12.00	0.00	–	
5	2017-18	ಸಮುದಾಯ ಭವನ	ಮರವಂಜಿ	12.00	0.00	–	
6	2019-20	ಅಂಬೇಡ್ಕರ್ / ಜಗಜೀವನರಾಂ ಭವನ	ಹೋರಿತಿಮ್ಮನಹಳ್ಳಿ	20.00	6.00	ತಳಪಾಯ ಪ್ರಗತಿಯಲ್ಲಿದೆ	ಜಿಲ್ಲಾ ಹಂತದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ, ಏಜೆನ್ಸಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.
7	2019-20		ಸೋಮನಹಳ್ಳಿ ಕೆಳತಾಂಡ್ಯ	20.00	6.00	ಕಾಮಗಾರಿ ಪ್ರಾರಂಭಿಸಬೇಕಿದೆ	
8	2019-20		ಮಲ್ಲದೇವಿಹಳ್ಳಿ	20.00	6.00	ನಿವೇಶನ ಸಮಸ್ಯೆ	ಸದರಿ ಗ್ರಾಮಗಳಲ್ಲಿ ಸೂಕ್ತ ಬದಲಿ ನಿವೇಶನಗಳನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ.
9.	2019-20		ಜಿಗಣೇಹಳ್ಳಿ	20.00	6.00	ನಿವೇಶನ ಸಮಸ್ಯೆ	
ಒಟ್ಟು				145.00	30.00		

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್ (ಕಡೂರು)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2130

ಉತ್ತರಿಸಬೇಕಾದ ದಿನಾಂಕ : 15.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಪಶು ಸಂಗೋಪನೆಯ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಗುರಿ ಮತ್ತು ಉದ್ದೇಶಗಳೇನು ವಿವರ ನೀಡುವುದು	ಪಶು ಸಂಗೋಪನಾ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ಉದ್ದೇಶಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ಕಡೂರು ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳಿಗೆ ನಿಗದಿಪಡಿಸಿದ ಮತ್ತು ಸಾಧಿಸಿದ ಗುರಿಗಳೇನು; (ಯೋಜನೆವಾರು ವಿವರ ನೀಡುವುದು)	ಕಡೂರು ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳಿಗೆ ನಿಗದಿಪಡಿಸಿದ ಮತ್ತು ಸಾಧಿಸಿದ ಗುರಿಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಇ	ರಾಜ್ಯದಲ್ಲಿ ಪಶು ಸಂಗೋಪನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅವಲಂಬಿಸಿರುವ ಜಿಲ್ಲೆಗಳು ಯಾವುವು ಹಾಗೂ ಆ ಜಿಲ್ಲೆಗಳಿಗೆ ಸರ್ಕಾರದಿಂದ ಜಾರಿಗೊಳಿಸಲಾಗುತ್ತಿರುವ ನೂತನ ಯೋಜನೆಗಳು ಯಾವುವು; (ವಿವರ ನೀಡುವುದು)	ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಪಶು ಸಂಗೋಪನೆಯನ್ನು ಅವಲಂಭಿಸಲಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಅವಲಂಭಿಸಿರುವ ಜಿಲ್ಲೆಗಳ ವಿವರಗಳನ್ನು ಅನುಬಂಧ-3 ರಲ್ಲಿ ಇಳಿಕೆ ಪ್ರಮಾಣದಲ್ಲಿ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಗಳಿಗೆ ಯಾವುದೇ ನೂತನ ಯೋಜನೆಗಳನ್ನು ಜಾರಿಗೊಳಿಸಿರುವುದಿಲ್ಲ.
ಈ	ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ಪಶುಸಂಗೋಪನೆಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಾವುವು; ಗುರಿಗಳನ್ನು ಹೆಚ್ಚಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ? (ಪೂರ್ಣ ಮಾಹಿತಿ ನೀಡುವುದು)	2020-2021 ನೇ ಸಾಲಿನಲ್ಲಿ ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ಪಶುಸಂಗೋಪನೆಗೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ವಿವರ: 1. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ 2. ರಾಷ್ಟ್ರೀಯ ಜಾನುವಾರು ವಿಮಾ ಯೋಜನೆಯಡಿ ಜಾನುವಾರು ವಿಮೆ 3. ಗಿರಿರಾಜ ಕೋಳಿ ಮರಿಗಳ ವಿತರಣೆ 4. ಮೇವು ಅಭಿವೃದ್ಧಿಗಾಗಿ ಉಚಿತ ಮಿನಿಕಿಟ್‌ಗಳ ವಿತರಣೆ 5. ರಾಷ್ಟ್ರೀಯ ಜಾನುವಾರು ಮಿಷನ್ ಅಡಿಯಲ್ಲಿ ಕುರಿ, ಮೇಕೆ ಮತ್ತು ಹಂದಿ ಸಾಕಾಣಿಕೆಗೆ ಸಹಾಯಧನ 6. ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಪ್ರಸ್ತುತ ಗುರಿಗಳನ್ನು ಹೆಚ್ಚಿಸುವ ಕುರಿತು ಚಿಂತನೆ ಇರುವುದಿಲ್ಲ.

ಪಸಂಮೀ ಇ-81 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಅನುಬಂಧ-1

(ಅ) ಪಶು ಸಂಗೋಪನಾ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಹಾಗೂ ಉದ್ದೇಶಗಳ ವಿವರ

1. **ಲಸಿಕಾ ಕಾರ್ಯಕ್ರಮ:** ಸಾಂಕ್ರಾಮಿಕ ರೋಗಗಳ ವಿರುದ್ಧ (ಕಾಲುಬಾಯಿಜ್ವರ, ಕರುಳುಬೇನೆ, ಗಳಲೇ ರೋಗ, ನೆರಡಿರೋಗ, ಕಂದು ರೋಗ) ಲಸಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

2. **10+1 ಕುರಿ ಮತ್ತು ಮೇಕೆ ಘಟಕ ವಿತರಿಸುವುದು:** ನಿಗಮದಲ್ಲಿ ನೊಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ 10+1 ಕುರಿ/ಮೇಕೆ ಘಟಕ ವಿತರಿಸಲಾಗುವುದು.

3. **ಪರಿಕರಗಳ ಕಿಟ್‌ಗಳ ವಿತರಣೆ:** ವಲಸೆ ಕುರಿಗಾಗರಿಗೆ ಸಂಚಾರಿ ಟೆಂಟ್, ಸೋಲಾರ್ ಟಾರ್ಚ್, ರಬ್ಬರ್ ಪ್ಲೋರ್ ಮ್ಯಾಟ್ ಮತ್ತು ರೇನ್ ಕೋಟ್ ಸೇರಿದಂತೆ ಪರಿಕರಗಳ ಕಿಟ್‌ಗಳ ವಿತರಣೆ ಮಾಡಲಾಗುವುದು.

4. **ಜಾನುವಾರು ವಿಮಾ ಯೋಜನೆ:** ಬಿಪಿಎಲ್ ಕುಟುಂಬಗಳು ಮತ್ತು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಫಲಾನುಭವಿಗಳಿಗೆ ಜಾನುವಾರು ವಿಮೆಯ ಪ್ರೀಮಿಯಂ ಮೊತ್ತದ ಶೇ.70 ರಷ್ಟು ಸಹಾಯಧನದಲ್ಲಿ ಜಾನುವಾರು ವಿಮೆ ಒದಗಿಸಲಾಗುವುದು.

5. **ವಿಸ್ತರಣಾ ಚಟುವಟಿಕೆಗಳು:** ರೈತರಿಗೆ ಹಾಲು ಕರೆಯುವ ಸ್ಪರ್ಧೆ, ಮಿಶ್ರ ತಳಿ ಕರು ಪ್ರದರ್ಶನ, ಏರ್ಪಡಿಸಲಾಗುವುದು. ಇಲಾಖಾ ತರಬೇತಿ ಕೇಂದ್ರಗಳಲ್ಲಿ ಹೈನುಗಾರಿಕೆ, ಕುರಿ/ಮೇಕೆ ಸಾಕಾಣಿಕೆ ಮತ್ತು ಕುಕ್ಕುಟ ಸಾಕಾಣಿಕೆ ಕುರಿತು ರೈತರಿಗೆ ತರಬೇತಿ ನೀಡಲಾಗುವುದು.

6. **ಹಾಲು ಉತ್ಪಾದಕರಿಗೆ ಉತ್ತೇಜನ:** ಕರ್ನಾಟಕ ಹಾಲು ಮಹಾ ಮಂಡಳಿಗೆ ಹಾಲು ಸರಬರಾಜು ಮಾಡುವ ಸದಸ್ಯರಿಗೆ ಪ್ರತಿ ಲೀಟರ್ ಹಾಲಿಗೆ ರೂ.5/- ರಂತೆ ಪ್ರೋತ್ಸಾಹಧನ ನೀಡಲಾಗುವುದು.

7. **ಪಶುಭಾಗ್ಯ ಯೋಜನೆ:** ರೈತರ ಆರ್ಥಿಕ ಅಭಿವೃದ್ಧಿಗಾಗಿ ಹೈನು ಘಟಕ, 3 ಕುರಿ ಅಥವಾ 3 ಮೇಕೆ ಘಟಕ, ಹಂದಿ ಘಟಕಗಳನ್ನು ವಿತರಿಸಲಾಗುವುದು.

8. **ಆರ್.ಐ.ಡಿ.ಎಫ್. ಯೋಜನೆ ಅಡಿಯಲ್ಲಿ ಕಟ್ಟಡ ನಿರ್ಮಾಣ:** ಆರ್.ಐ.ಡಿ.ಎಫ್. ಯೋಜನೆ ಅಡಿಯಲ್ಲಿ ಪಶುವೈದ್ಯ ಸಂಸ್ಥೆಗಳ ನೂತನ ಕಟ್ಟಡ ನಿರ್ಮಾಣ.

9. **ಗೊಡ್ಡು/ಬಂಜೆ ಜಾನುವಾರುಗಳ ಶಿಬಿರದ ವ್ಯವಸ್ಥೆ:** ಜಾನುವಾರುಗಳಲ್ಲಿ ಸಂತಾನೋತ್ಪತ್ತಿ ಪ್ರಮಾಣ ಹೆಚ್ಚಿಸುವ ಸಲುವಾಗಿ, ಉಚಿತ ಜಾನುವಾರು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾನುವಾರುಗಳಲ್ಲಿನ ಬಂಜೆತನ ನಿವಾರಣೆ ಮಾಡುವುದು.

10. **ಗಿರಿರಾಜ ಕೋಳಿ ಸಾಕಾಣಿಕೆ:** ಹಿತ್ತಲ ಕೋಳಿ ಸಾಕಾಣಿಕೆ ಪ್ರೋತ್ಸಾಹಿಸಲು ಗಿರಿರಾಜ ಕೋಳಿ ಮರಿಗಳನ್ನು ವಿತರಿಸಲಾಗುವುದು.

ಯೋಜನೆಗಳ ಉದ್ದೇಶಗಳು:

- ಜಾನುವಾರು ರೋಗಗಳ ನಿಯಂತ್ರಣ, ನಿವಾರಣೆ, ರೋಗಪತ್ತೆ ಹಾಗೂ ಔಷಧೋಪಚಾರ.
- ಹೈನುಗಾರಿಕೆ, ಕುರಿ–ಮೇಕೆ, ಕುಕ್ಕುಟ ಮತ್ತು ಹಂದಿ ಸಾಕಣೆದಾರರಿಗೆ ಉತ್ತೇಜನ.
- ಹಾಲು, ಮಾಂಸ ಮತ್ತು ಮೊಟ್ಟೆ ಉತ್ಪಾದನೆಯನ್ನು ಹೆಚ್ಚಿಸುವುದು
- ಪ್ರಾಣಿಜನ್ಯ ರೋಗಗಳ ನಿರ್ಮೂಲನೆ ಮತ್ತು ನಿಯಂತ್ರಣ
- ದೇಶಿ ಜಾನುವಾರು ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಹಾಗು ಪಶುವೈದ್ಯಕೀಯ ಸಂಸ್ಥೆಗಳ ಸ್ಥಾಪನೆ ಮತ್ತು ಬಲವರ್ಧನೆ.
- ಪಶು ವಿಸ್ತರಣಾ ಹಾಗೂ ಪಶುವೈದ್ಯಕೀಯ ಶಿಕ್ಷಣ ಚಟುವಟಿಕೆಗಳು.

ಅನುಬಂಧ–2

ಕ್ರಮ ಸಂಖ್ಯೆ	ವಿಧಾನ ಸಭಾ ಕ್ಷೇತ್ರ	ಕಾರ್ಯಕ್ರಮ	2017–18		2018–19		2019–20	
			ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	ಕಡೂರು	ಪಶುಭಾಗ್ಯ ಯೋಜನೆ	230	230	300	300	48	47
		ಲಸಿಕಾ ಕಾರ್ಯಕ್ರಮ						
		ಕಾಲುಬಾಯಿ ಜ್ವರ	84853	75830	87528	80447	87962	78733
		ಇ.ಟಿ.ಲಸಿಕೆ	59783	58650	66069	52641	59268	50540
		ಪಿ.ಪಿ.ಆರ್ ಲಸಿಕೆ	59783	59783	66069	66069	69953	69953
		ಎನ್.ಎಲ್.ಎಂ ಕುರಿ ಮೇಕೆ ಹಂದಿ ಸಾಕಾಣಿಕೆ	0	0	0	0	3	3
		ಎನ್.ಎಲ್.ಎಂ ವಿಮೆ	0	0	0	0	165	165
		ಗಿರಿರಾಜ ಕೋಳಿ ಸಾಕಾಣಿಕೆ	0	0	150	150	418	418
		ಹಾಲು ಕರೆಯುವ ಸ್ಪರ್ಧೆ	0	0	0	0	1	1
		ಮಿಶ್ರ ತಳಿ ಕರು ಪ್ರದರ್ಶನ	0	0	1	1	3	3
		ಗೊಡ್ಡು/ಬಂಜೆ ಜಾನುವಾರುಗಳ ಶಿಬಿರದ ವ್ಯವಸ್ಥೆ	13	13	13	13	13	13
		ಆರ್.ಐ.ಡಿ.ಎಫ್. ಯೋಜನೆ ಅಡಿಯಲ್ಲಿ ಕಟ್ಟಡ ನಿರ್ಮಾಣ:	0	1	0	0	0	6

ಅನುಬಂಧ-3

ರಾಜ್ಯದಲ್ಲಿ ಪಶು ಸಂಗೋಪನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಅವಲಂಭಿಸಿರುವ ಜಿಲ್ಲೆಗಳ (ಇಳಿಕೆ ಕ್ರಮದಲ್ಲಿ) ವಿವರ

Sl. No.	district_name	Total (including Cattle, Buffalo, sheep, goat and pig population)
1	Belagaum	2874915
2	Tumkur	2297188
3	Bellary	2088837
4	Chitradurga	2078229
5	Bagalkot	1484403
6	Bijapur	1314820
7	Raichur	1314529
8	Mandya	1182400
9	Koppal	1101476
10	Gulbarga	1061564
11	Chikballapur	1044278
12	Yadgir	1005218
13	Hassan	986547
14	Mysore	933298
15	Kolar	819059
16	Haveri	808082
17	Gadag	793922
18	Shimoga	747621
19	Davangere	649610
20	Ramanagara	592366
21	Bidar	588784
22	Chamarajanagar	540805
23	Chikmagalur	464794
24	Uttar Kannad	430690
25	Bangalore Rural	415721
26	Dharwad	391570
27	Bengaluru Urban	338412
28	Dakshin Kannad	291264
29	Udupi	263580
30	Kodagu	93538

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2140
ಮಾನ್ಯ ಸದಸ್ಯರ ಹೆಸರು	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	15.03.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ನಿಗಧಿ ಮಾಡಿರುವ ಅನುದಾನ ಎಷ್ಟು; (ಲೆಕ್ಕಶೀರ್ಷಿಕೆವಾರು ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ನಿಗಧಿ ಮಾಡಿರುವ ಲೆಕ್ಕ ಶೀರ್ಷಿಕೆವಾರು ಅನುದಾನದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ಹಿಂದುಳಿದ ವರ್ಗಗಳ ಉಪ್ಪಾರ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಮಾನ್ಯ ಶಾಸಕರು ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ ರವರು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಿಗೆ ಸಲ್ಲಿಸಿರುವ ಮನವಿಯಲ್ಲಿ ಒಟ್ಟು 6 ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ರೂ. 100.00 ಲಕ್ಷಗಳನ್ನು ಮಂಜೂರು ಮಾಡುವಂತೆ ಕೋರಲಾಗಿರುತ್ತದೆ.
ಇ)	ಬಂದಿದ್ದಲ್ಲಿ, ಈ ಸಮುದಾಯ ಭವನ ನಿರ್ಮಾಣಕ್ಕೆ ಅನುಮೋದನೆ ನೀಡಿ ಕಾರ್ಯದೇಶ ನೀಡಲು ಕ್ರಮವಹಿಸದೇ ಇರಲು ಕಾರಣವೇನು?	ಮಾನ್ಯ ಶಾಸಕರು ಪಿರಿಯಾಪಟ್ಟಣ ವಿಧಾನ ಸಭಾ ಕ್ಷೇತ್ರ ರವರ ಕೋರಿಕೆಯನ್ವಯ ಸಂಬಂಧಿಸಿದ ಸಂಸ್ಥೆಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡುವ ಸಂಬಂಧ ಸರ್ಕಾರದ ಮಾರ್ಗಸೂಚಿಗಳನ್ವಯ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಸೂಚಿಸಿ ದಿನಾಂಕ : 07.08.2019 ರಂದು ಪತ್ರ ಬರೆಯಲಾಗಿರುತ್ತದೆ. ಸಂಸ್ಥೆಯವರಿಂದ ಯಾವುದೇ ಪ್ರಸ್ತಾವನೆ/ದಾಖಲೆಗಳು ಈವರೆಗೂ ಸ್ವೀಕೃತವಾಗಿರುವುದಿಲ್ಲ. ಸಂಸ್ಥೆಯವರು ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಸರ್ಕಾರ ಮಾರ್ಗಸೂಚಿಗಳನ್ವಯ ಪರಿಶೀಲಿಸಿ, ಸದರಿ ಸಂಸ್ಥೆಗಳು ಅರ್ಹತೆ ಹೊಂದಿದಲ್ಲಿ, ಸದರಿ ಯೋಜನೆಯಡಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಸಹಾಯಧನ ಮಂಜೂರು ಮಾಡಲು ಕ್ರಮವಹಿಸಲಾಗುದು.

ಸಂಖ್ಯೆ:ಹಿಂವಕ 183 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕೋಟ ಶ್ರೀನಿವಾಸ ಪೂಜಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು
ಹಿಂದೂ ಧಾರ್ಮಿಕ ಹಾಗೂ
ಧರ್ಮಾದಾಯ ದತ್ತಿ ಸಚಿವರು

ಅನುಬಂಧ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮಹದೇವ.ಕೆ (ಪಿರಿಯಾಪಟ್ಟಣ) ಇ
ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2140

ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಆಯವ್ಯಯದಲ್ಲಿ ನಿಗದಿ ಮಾಡಿರುವ ಲೆಕ್ಕಶೀರ್ಷಿಕೆವಾರು ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾರ್ಯಕ್ರಮದ ಹೆಸರು	ಒದಗಿಸಿದ ಅನುದಾನ
1	2	3
	ರಾಜ್ಯವಲಯ	
1	ನಿರ್ದೇಶನ ಮತ್ತು ಆಡಳಿತ 2225-03-001-0-01	529.00
2	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-53	21106.00
3	ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿಗಳು 2225-03-277-3-11	2042.00
4	ಹಿಂದುಳಿದ ವರ್ಗದವರಿಗೆ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ 2225-03-277-2-62	18600.00
5	ದೇವರಾಜ ಅರಸು ಸಂಶೋಧನಾ ಸಂಸ್ಥೆ ಹಾಗೂ ಇತರೆ ಕಾರ್ಯಕ್ರಮಗಳು 2225-03-277-2-08	139.00
6	ಆಹಾರ ಮತ್ತು ವಸತಿ ಸಹಾಯ - ವಿದ್ಯಾಸಿರಿ 2225-03-283-0-03	8000.00
7	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ (ಕೇಂ.ಪು.ಯೋ) 2225-03-277-2-51	18000.00
8	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇಂ.ಪು.ಯೋ) 2225-03-277-2-52	11500.00
9	ತರಬೇತಿ, ಅರಿವು ಮತ್ತು ಪ್ರೋತ್ಸಾಹ- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	1800.00
10	ಅಲೆಮಾರಿ / ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ ಕಾರ್ಯಕ್ರಮಗಳು 2225-03-102-0-12	4633.00
11	ಹಾಸ್ಟೆಲ್‌ಗಳ ಕಟ್ಟಡಗಳ ನಿರ್ಮಾಣ 4225-03-277-2-06	12000.00
12	ವಸತಿ ಶಾಲೆಗಳ ನಿರ್ಮಾಣ - ನವೋದಯ 4225-03-277-2-04	5781.00

13	ನಬಾರ್ಡ್ ಕಾಮಗಾರಿಗಳು 4225-03-277-2-11	893.00
14	ದೇವರಾಜ ಅರಸು ಭವನ ನಿರ್ಮಾಣ (ತಾಲ್ಲೂಕು ಕಛೇರಿ) 4225-03-283-0-01	584.00
15	ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	4000.00
16	ಅಲೆಮಾರಿ ಜನಾಂಗದವರಿಗೆ 4 ಸಮುದಾಯ ಭವನಗಳ ನಿರ್ಮಾಣ 4225-03-800-0-05	400.00
17	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2225-03-001-0-06	59.00
	ಒಟ್ಟು	**110066.00**
	<u>ಜಿಲ್ಲಾವಲಯ</u>	
1	ಕಾರ್ಯ ನಿರ್ವಾಹಕ ಸಿಬ್ಬಂದಿ 2225-00-103-0-39	1854.92
2	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು -2225-00-103-0-74	1190.92
3	ಹಿಂದುಳಿದ ವರ್ಗ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-103-0-26	67491.73
4	ಆಶ್ರಮಶಾಲೆಗಳು -2225-00-103-0-41	348.10
5	ಅನಾಥಾಲಯಗಳಿಗೆ ಸಹಾಯಧನ 2225-00-103-0-73	738.00
6	ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78	55.08
7	ಇತರೆ ಹಿಂದುಳಿದ ವರ್ಗಗಳಿಗೆ ಇತರ ರಿಯಾಯ್ತಿಗಳು 2225-00-103-0-28	38500.00
8	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ 2225-00-103-0-53	209.00
9	ವಕೀಲರಿಗೆ ಪ್ರೋತ್ಸಾಹಧನ - 2225-00-103-0-58	576.00
10	ದೇವರಾಜ ಅರಸುರವರ ಹುಟ್ಟು ಹಬ್ಬದ ದಿನಾಚರಣೆ ಮತ್ತು 15 ಅಂಶಗಳ ಕಾರ್ಯಕ್ರಮದ ಮೇಲೆ ವಿಚಾರಗೋಷ್ಠಿ 2225-00-103-0-56	30.00
11	ಕಟ್ಟಡಗಳ ನಿರ್ವಹಣೆ - 2225-00-103-0-40	1500.00
	ಒಟ್ಟು	**112493.75**
	ಒಟ್ಟು ಎಲ್ಲಾ ಕಾರ್ಯಕ್ರಮಗಳು ಸೇರಿ	**222559.75**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2155
ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ (ಹೊಳೇನರಸೀಪುರ)
ಉತ್ತರಿಸುವ ದಿನಾಂಕ : 15-03-2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅಕ್ರಮ ಸಕ್ರಮದ ಅಡಿಯಲ್ಲಿ 53 ಮತ್ತು 57 ಅರ್ಜಿಗಳ ವಿಲೇವಾರಿ ಮಾಡಲು ಬಾಕಿ ಇರುವ ಪ್ರಕರಣಗಳು ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94(ಎ) ರಡಿಯಲ್ಲಿ ನಮೂನೆ 50, ಕಲಂ 94(ಬಿ) ರಡಿಯಲ್ಲಿ ನಮೂನೆ 53 ಹಾಗೂ ಕಲಂ 94(ಎ)(4) ರಡಿಯಲ್ಲಿ 57 ರ ಬಾಕಿ ಇರುವ ಅರ್ಜಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಈ ಅರ್ಜಿಗಳನ್ನು ವಿಲೇವಾರಿ ಮಾಡಲು ಸರ್ವೋಚ್ಛ ನ್ಯಾಯಾಲಯ ನೀಡಿರುವ ಆದೇಶದ ಮಾನದಂಡಗಳನ್ನು ಪಾಲಿಸಲಾಗುತ್ತಿದೆಯೇ;	ಹೌದು.
ಇ)	ಸರ್ವೋಚ್ಛ ನ್ಯಾಯಾಲಯ ನೀಡಿರುವ ಆದೇಶದ ಅನ್ವಯ ವಿಲೇವಾರಿಯಾದ ಒಟ್ಟು ಪ್ರಕರಣಗಳೇಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಅನುಬಂಧದಲ್ಲಿ ಒದಗಿಸಲಾಗಿದೆ.
ಈ)	ರಾಜ್ಯದಲ್ಲಿ ಅಕ್ರಮ-ಸಕ್ರಮ ಅಡಿಯಲ್ಲಿ 53 ಮತ್ತು 57 ಅರ್ಜಿಗಳ ವಿಲೇವಾರಿ ಮಾಡಲು ರೈತು ಎಷ್ಟು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಯಾವ ವೈಜ್ಞಾನಿಕ ಕ್ರಮಗಳನ್ನು ಈವರೆಗೆ ಅನುಸರಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ರೈತರು ಎಷ್ಟು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಸಾಂಪ್ರದಾಯಿಕವಾಗಿ ಗ್ರಾಮಲೆಕ್ಕಾಧಿಕಾರಿ, ರಾಜಸ್ವ ನಿರೀಕ್ಷಕರು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಗ್ರಾಮಸ್ಥರ ಮಹಜರ್ ನಡೆಸಿ ಕ್ರಮವಹಿಸಲಾಗುತ್ತಿದೆ.
ಉ)	ಈ ಅರ್ಜಿಗಳ ವಿಲೇವಾರಿ ಮಾಡಲು ಉಪಗ್ರಹ ಆಧಾರಿತ ಸರ್ವೆ ಹಾಗೂ ಯಾವ ವೈಜ್ಞಾನಿಕ ಕ್ರಮಗಳನ್ನು ಅನುಸರಣೆ ಮಾಡಲಾಗುತ್ತಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಇಲ್ಲ.

ಸಂಖ್ಯೆ: ಆರ್‌ಡಿ 49 ಎಲ್‌ಜಿಕ್ಯೂ 2021

(ಆರ್.ಅಶೋಕ)
ಕಂದಾಯ ಸಚಿವರು.

ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94–ಎ ರಡಿಯಲ್ಲಿ ನಮೂನೆ 50 ಅರ್ಜಿಗಳ ಪ್ರಗತಿ ವಿವರ

ಕ್ರಸಂ	ಜಿಲ್ಲೆಯ ಹೆಸರು	ಸ್ವೀಕರಿಸಿದ ಅರ್ಜಿಗಳು ಸಂಖ್ಯೆ	ಸಕ್ರಮ ಅರ್ಜಿಗಳ ಸಂಖ್ಯೆ	ತಿರಸ್ಕೃತ ಅರ್ಜಿಗಳ ಸಂಖ್ಯೆ	ಒಟ್ಟು ವಿಲೇವಾರಿಯಾದ ಅರ್ಜಿಗಳ ಸಂಖ್ಯೆ	ಬಾಕಿ ಅರ್ಜಿಗಳ ಸಂಖ್ಯೆ
1	ಬೆಂಗಳೂರು ನಗರ	23200	3671	19529	23200	0
2	ಬೆಂಗಳೂರು ಗ್ರಾಮಾಂತರ	24303	12726	11577	24303	0
3	ಕೋಲಾರ	37053	18952	18101	37053	0
4	ಚಿಕ್ಕಬಳ್ಳಾಪುರ	50649	24197	26452	50649	0
5	ರಾಮನಗರ	33524	16275	17249	33524	0
6	ಶಿವಮೊಗ್ಗ	110739	21816	88923	110739	0
7	ಚಾಮರಾಜನಗರ	20280	6621	11299	17920	2360
8	ಉಡುಪಿ	50358	12470	37546	50016	342
9	ಹಾಸನ	94908	41169	53437	94606	302
10	ಉತ್ತರ ಕನ್ನಡ	39016	1661	37355	39016	0
11	ಮಂಡ್ಯ	52917	20175	32742	52917	0
12	ದಕ್ಷಿಣ ಕನ್ನಡ	113730	46595	67066	113661	69
13	ಮೈಸೂರು	56364	23181	33183	56364	0
14	ಚಿಕ್ಕಮಗಳೂರು	65087	13970	51117	65087	0
15	ಕೊಡಗು	14612	5463	5354	10817	3795
16	ಬೆಳಗಾವಿ	13728	1622	12106	13728	0
17	ಬಾಗಲಕೋಟೆ	4021	61	3960	4021	0
18	ವಿಜಯಪುರ	2034	238	1794	2032	2
19	ಚಿತ್ರದುರ್ಗ	52222	17529	34693	52222	0
20	ದಾವಣಗೆರೆ	33256	8508	23063	31571	1685
21	ತುಮಕೂರು	89960	44712	43393	88105	1855
22	ಗದಗ	5326	633	4693	5326	0
23	ಧಾರವಾಡ	5094	299	4795	5094	0
24	ಹಾವೇರಿ	15802	2467	13335	15802	0
25	ರಾಯಚೂರು	6293	3327	2966	6293	[illegible]
26	ಕೊಪ್ಪಳ	8622	4130	4492	8622	[illegible]
27	ಬೀದರ್	13395	6501	6751	13252	143
28	ಕಲಬುರಗಿ	15211	9469	5742	15211	0
29	ಯಾದಗಿರಿ	9481	4032	5434	9466	15
30	ಬಳ್ಳಾರಿ	28083	8010	20073	28083	[illegible]
	ಒಟ್ಟು	1089268	380480	698220	1078700	1056[illegible]

ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94–ಬಿ ರಡಿಯಲ್ಲಿ ನಮೂನೆ 53 ಅರ್ಜಿಗಳ ಪ್ರಗತಿ ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಸ್ವೀಕರಿಸಿದ ಅರ್ಜಿಗಳು ಸಂಖ್ಯೆ	ಸಕ್ರಮ ಅಜಿಗಳ ಸಂಖ್ಯೆ	ತಿರಸ್ಕೃತ ಅರ್ಜಿಗಳ ಸಂಖ್ಯೆ	ಒಟ್ಟು ವಿಲೇವಾರಿಯಾದ ಅರ್ಜಿಗಳ ಸಂಖ್ಯೆ	ಬಾಕಿ ಅರ್ಜಿಗಳ ಸಂಖ್ಯೆ
1	ಬೆಂಗಳೂರು ನಗರ	19770	1693	18077	19770	0
2	ಬೆಂಗಳೂರು ಗ್ರಾಮಾಂತರ	38582	9664	27981	37645	937
3	ಕೋಲಾರ	31341	15259	7584	22843	8498
4	ಚಿಕ್ಕಬಳ್ಳಾಪುರ	40390	8879	22184	31063	9327
5	ರಾಮನಗರ	33669	7569	18939	26508	7161
6	ಶಿವಮೊಗ್ಗ	145601	18649	126952	145601	0
7	ಚಾಮರಾಜನಗರ	13706	2180	9519	11699	2007
8	ಉಡುಪಿ	59477	13316	35321	48637	10840
9	ಹಾಸನ	85468	19595	40886	60481	24987
10	ಉತ್ತರ ಕನ್ನಡ	26258	800	25458	26258	0
11	ಮಂಡ್ಯ	66049	4723	38493	43216	22833
12	ದಕ್ಷಿಣ ಕನ್ನಡ	111387	32736	71739	104475	6912
13	ಮೈಸೂರು	56025	4716	48714	53430	2595
14	ಚಿಕ್ಕಮಗಳೂರು	77178	14398	53183	67581	9597
15	ಕೊಡಗು	14321	3194	6801	9995	4326
16	ಬೆಳಗಾವಿ	8482	523	7567	8090	392
17	ಬಾಗಲಕೋಟೆ	3729	117	3612	3729	0
18	ವಿಜಯಪುರ	2908	248	2655	2903	5
19	ಚಿತ್ರದುರ್ಗ	60742	9620	43742	53362	7380
20	ದಾವಣಗೆರೆ	36324	5572	26644	32216	4108
21	ತುಮಕೂರು	88711	22501	53442	75943	12768
22	ಗದಗ	1865	32	1829	1861	4
23	ಧಾರವಾಡ	2695	161	2534	2695	0
24	ಹಾವೇರಿ	10902	609	10215	10824	78
25	ರಾಯಚೂರು	5503	1465	3267	4732	771
26	ಕೊಪ್ಪಳ	7485	2070	0	2070	5415
27	ಬೀದರ್	9340	4494	2757	7251	2089
28	ಕಲಬುರಗಿ	9570	2240	5288	7528	2042
29	ಯಾದಗಿರಿ	3325	1272	2033	3305	20
30	ಬಳ್ಳಾರಿ	27594	6822	20019	26841	753
	ಒಟ್ಟು	1098397	215117	737435	952552	145845

ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94–ಎ(4) ರಡಿಯಲ್ಲಿ ನಮೂನೆ 57 ಅರ್ಜಿಗಳ ಪ್ರಗತಿ ವಿವರ

ಕ್ರಸಂ	ಜಿಲ್ಲೆಯ ಹೆಸರು	ಸ್ವೀಕರಿಸಿದ ಅರ್ಜಿಗಳು ಸಂಖ್ಯೆ	ಸಕ್ರಮ ಅಜಿಗಳ ಸಂಖ್ಯೆ	ತಿರಸ್ಕೃತ ಅರ್ಜಿಗಳ ಸಂಖ್ಯೆ	ಒಟ್ಟು ವಿಲೇವಾರಿಯಾದ ಅರ್ಜಿಗಳ ಸಂಖ್ಯೆ	ಬಾಕಿ ಅರ್ಜಿಗಳ ಸಂಖ್ಯೆ
1	ಬೆಂಗಳೂರು ನಗರ	1841	0	0	0	1841
2	ಬೆಂಗಳೂರು ಗ್ರಾಮಾಂತರ	19455	0	0	0	19455
3	ಕೋಲಾರ	44402	16	0	16	44386
4	ಚಿಕ್ಕಬಳ್ಳಾಪುರ	38187	0	0	0	38187
5	ರಾಮನಗರ	23394	0	0	0	23394
6	ಶಿವಮೊಗ್ಗ	78461	0	0	0	78461
7	ಚಾಮರಾಜನಗರ	10611	0	0	0	10611
8	ಉಡುಪಿ	38019	0	6	6	38013
9	ಹಾಸನ	76463	0	0	0	76463
10	ಉತ್ತರ ಕನ್ನಡ	1842	0	5	5	1837
11	ಮಂಡ್ಯ	24872	0	0	0	24872
12	ದಕ್ಷಿಣ ಕನ್ನಡ	90533	25	0	25	90508
13	ಮೈಸೂರು	23714	0	0	0	23714
14	ಚಿಕ್ಕಮಗಳೂರು	86511	93	17	110	86401
15	ಕೊಡಗು	14249	0	0	0	14249
16	ಬೆಳಗಾವಿ	469	0	0	0	469
17	ಬಾಗಲಕೋಟೆ	1217	0	0	0	1217
18	ವಿಜಯಪುರ	1529	0	0	0	1529
19	ಚಿತ್ರದುರ್ಗ	49465	0	0	0	49465
20	ದಾವಣಗೆರೆ	15051	0	0	0	15051
21	ತುಮಕೂರು	94574	0	53	53	94521
22	ಗದಗ	323	0	0	0	323
23	ಧಾರವಾಡ	888	0	0	0	888
24	ಹಾವೇರಿ	2631	0	0	0	2631
25	ರಾಯಚೂರು	6129	0	0	0	6129
26	ಕೊಪ್ಪಳ	7076	0	0	0	7076
27	ಬೀದರ್	2487	0	0	0	2487
28	ಕಲಬುರಗಿ	5407	0	0	0	5407
29	ಯಾದಗಿರಿ	4749	0	0	0	4749
30	ಬಳ್ಳಾರಿ	37675	0	0	0	37675
	ಒಟ್ಟು	802224	134	81	215	802009

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಡಾ: ಯತೀಂದ್ರ ಸಿದ್ದರಾಮಯ್ಯ (ವರುಣ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2152

ಉತ್ತರಿಸಬೇಕಾದ ದಿನಾಂಕ : 15.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

<table>
<tr><th>ಕ್ರಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಪಶುಭಾಗ್ಯ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ, ವೆಚ್ಚ ಮಾಡಿದ ಮೊತ್ತ ವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಪಶುಭಾಗ್ಯ ಯೋಜನೆಯಡಿ ವೆಚ್ಚ ಹಾಗೂ ಫಲಾನುಭವಿಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.
<table>
<tr><th></th><th>2017-18</th><th>2018-19</th><th>2019-20</th></tr>
<tr><td>ವೆಚ್ಚ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)</td><td>8221.90</td><td>20225.56</td><td>1699.06</td></tr>
<tr><td>ಫಲಾನುಭವಿಗಳ ಸಂಖ್ಯೆ</td><td>26354</td><td>39846</td><td>7777</td></tr>
</table>
ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಪಶುಭಾಗ್ಯ ಯೋಜನೆಯನ್ನು 2020-21 ನೇ ಸಾಲಿನಲ್ಲಿ ಜಾರಿಗೊಳಿಸದೇ ಇರಲು ಕಾರಣವೇನು? ಈ ಯೋಜನೆಯನ್ನು ಜಾರಿಗೊಳಿಸಿದ್ದಲ್ಲಿ 2020-21ನೇ ಸಾಲಿನ ಆಯವ್ಯಯದಲ್ಲಿ ಶೇಕಡ. ಎಷ್ಟು ಮೊತ್ತದ ಹೊರೆಯಾಗುತ್ತಿತ್ತು. (ಮಾಹಿತಿ ನೀಡುವುದು)</td><td>2020-21 ನೇ ಸಾಲಿನ ಆಯವ್ಯಯದಲ್ಲಿ ಪಶುಭಾಗ್ಯ ಯೋಜನೆಗೆ ಅನುದಾನ ನಿಗದಿಯಾಗದ ಕಾರಣ ಜಾರಿಗೊಳಿಸಿರುವುದಿಲ್ಲ.
ಯೋಜನೆಯನ್ನು ಜಾರಿಗೊಳಿಸಿದ್ದಲ್ಲಿ ಇಲಾಖೆಯ ಆಯವ್ಯಯದಲ್ಲಿ ಶೇ.0.69 ರಷ್ಟು ಹೆಚ್ಚಳವಾಗುತ್ತಿತ್ತು.</td></tr>
<tr><td>ಇ</td><td>ಈ ಯೋಜನೆಯನ್ನು 2020-21 ನೇ ಸಾಲಿನಲ್ಲಿ ಜಾರಿಗೊಳಿಸದ ಕಾರಣ ಕೋವಿಡ್ 19 ರ ಸಮಯದಲ್ಲಿ ಹೈನುಗಾರಿಕೆಯನ್ನೇ ಅವಲಂಬಿಸಿದ ಕುಟುಂಬದವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ. ಯಾವಾಗ ಯೋಜನೆಯನ್ನು ಜಾರಿಗೊಳಿಸಲಾಗುವುದು. (ವಿವರ ನೀಡುವುದು)</td><td>ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.</td></tr>
</table>

ಪಸಂಮೀ ಇ-85 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಅನುಬಂಧ

ವಿಧಾನ ಸಭೆ ಸದಸ್ಯರಾದ ಡಾ: ಯತೀಂದ್ರ ಸಿದ್ದರಾಮಯ್ಯ (ವರುಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2152

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಪಶುಭಾಗ್ಯ ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲಾಗಿದೆ ಹಾಗೂ ವೆಚ್ಚ ಮಾಡಲಾಗಿದೆ. (ಮಾಹಿತಿ ನೀಡುವುದು)

ಕ್ರ ಸಂ	ಜಿಲ್ಲೆ	2017–18		2018–19		2019–20	
		ವೆಚ್ಚ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)	ಫಲಾನುಭವಿಗಳ ಸಂಖ್ಯೆ	ವೆಚ್ಚ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)	ಫಲಾನುಭವಿಗಳ ಸಂಖ್ಯೆ	ವೆಚ್ಚ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)	ಫಲಾನುಭವಿಗಳ ಸಂಖ್ಯೆ
1	ಬೆಂಗಳೂರು	352.74	1011	241.81	591	43.47	164
2	ಬೆಂಗಳೂರು (ಗ್ರಾ)	322.45	441	394.89	633	34.24	128
3	ಚಿತ್ರದುರ್ಗ	190.27	857	743.94	1782	77.88	324
4	ಚಿಕ್ಕಬಳ್ಳಾಪುರ	260.59	692	2851	612	57.00	220
5	ದಾವಣಗೆರೆ	213.3	935	619.76	1476	86.17	314
6	ಕೋಲಾರ	298.57	1014	577.50	1393	62.67	232
7	ರಾಮನಗರ	223.68	752	493.85	1207	34.29	138
8	ಶಿವಮೊಗ್ಗ	224.05	928	396.29	971	48.48	207
9	ತುಮಕೂರು	458.374	518	1260.75	385	107.33	1327
10	ಚಾಮರಾಜನಗರ	185.73	686	510.3	1186	46.54	180
11	ಚಿಕ್ಕಮಗಳೂರು	242.49	933	427.01	998	43.46	172
12	ದಕ್ಷಿಣ ಕನ್ನಡ	152.34	639	282.34	711	32.46	149
13	ಹಾಸನ	1138.76	2658	643.49	1508	55.20	239
14	ಕೊಡಗು	89.22	364	196.05	466	17.03	70
15	ಮೈಸೂರು	489.48	1503	754.19	1732	89.83	355

16	ಮಂಡ್ಯ	238.4	1015	454.89	1092	50.99	222
17	ಉಡುಪಿ	68.17	324	124.91	354	16.22	93
18	ಬೆಳಗಾವಿ	311.93	1346	982.66	2435	122.27	535
19	ಬಾಗಲಕೋಟೆ	192.05	801	510.76	1234	54.03	232
20	ಧಾರವಾಡ	279.03	887	226.93	552	22.32	110
21	ಗದಗ್	107.7	283	315.16	1351	28.85	126
22	ಹಾವೇರಿ	85.76	239	504.65	393	37.08	126
23	ಉತ್ತರ ಕನ್ನಡ	391.57	1464	191.24	497	24.85	124
24	ಬಿಜಾಪುರ	276.78	822	476.32	1175	97.60	242
25	ಬಳ್ಳಾರಿ	376.38	1379	1090.71	2568	89.43	359
26	ಬೀದರ್	306.54	1032	996.36	2245	53.44	294
27	ಕೊಪ್ಪಳ	148.43	594	827.03	1923	54.25	229
28	ಗುಲ್ಬರ್ಗ	201.18	923	887.99	2087	91.65	371
29	ರಾಯಚೂರು	270.02	981	1362.65	3077	67.06	280
30	ಯಾದಗಿರಿ	125.92	333	880.13	3212	52.97	215
	ಒಟ್ಟು	8221.90	26354	20225.56	39846	1699.06	7777

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀರಂಗನಾಥ ಹೆಚ್ .ಡಿ ಡಾ॥ (ಕುಣಿಗಲ್)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2160

ಉತ್ತರಿಸಬೇಕಾದ ದಿನಾಂಕ : 15.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಕ್ಷೀರ ಭಾಗ್ಯಯೋಜನೆ ಅಡಿ ಶಾಲಾ ಮಕ್ಕಳಿಗೆ ಗ್ರಾಮೀಣ ಭಾಗದಲ್ಲಿ ಹಾಲಿನ ಪುಡಿಯ ಬದಲಾಗಿ ಸ್ಥಳೀಯವಾಗಿಯೇ, ರೈತರಿಂದ ಹಾಲನ್ನು ಖರೀದಿಸಿ ವಿತರಿಸುವ ಆಲೋಚನೆ ಸರ್ಕಾರದ ಮುಂದಿದೆಯೇ;	ಕ್ಷೀರ ಭಾಗ್ಯಯೋಜನೆ ಅಡಿ ಶಾಲಾ ಮಕ್ಕಳಿಗೆ ಗ್ರಾಮೀಣ ಭಾಗದಲ್ಲಿ ಹಾಲಿನ ಪುಡಿಯ ಬದಲಾಗಿ ಸ್ಥಳೀಯವಾಗಿಯೇ, ರೈತರಿಂದ ಹಾಲನ್ನು ಖರೀದಿಸಿ ವಿತರಿಸುವ ಆಲೋಚನೆ ಯಾವುದು ಇರುವುದಿಲ್ಲ.
ಆ	ಲಾಕ್‌ಡೌನ್ ಸಂದರ್ಭದಲ್ಲಿ ಎಷ್ಟು ಜನ ಶಾಲಾ ಮಕ್ಕಳಿಗೆ ಈ ಯೋಜನೆ ಅಡಿ ಹಾಲನ್ನು ವಿತರಿಸಲಾಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)	ಕೋವಿಡ್-19 ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಪಿ-19 ಎಂಎಂಎಸ್ 2020, ಬೆಂಗಳೂರು, ದಿನಾಂಕ:11.06.2020 ಮತ್ತು ಆದೇಶ ಸಂಖ್ಯೆ:ಎಂ20 ಎಂಎಂಎಸ್ 2020(ಭಾಗ-1), ಬೆಂಗಳೂರು, ದಿನಾಂಕ:02.07.2020 ರಂತೆ ವಿಧ್ಯಾರ್ಥಿಗಳಿಗೆ ಮಧ್ಯಾಹ್ನದ ಉಪಾಹಾರ ಯೋಜನೆ ಕಾರ್ಯಕ್ರಮದಡಿ ಬೇಸಿಗೆ ರಜೆ ಅವಧಿಯಲ್ಲಿ ಬಿಸಿ ಊಟದ ಬದಲಾಗಿ ಆಹಾರ ಧಾನ್ಯಗಳ ಜೊತೆ ಹಾಲಿನ ಪುಡಿಯನ್ನು ಎಂಟು ಜಿಲ್ಲೆಗಳಲ್ಲಿ, 5.99 ಲಕ್ಷ ಶಾಲಾ ಮಕ್ಕಳಿಗೆ ಏಪ್ರಿಲ್, ಜೂನ್, ಜುಲೈ ಮತ್ತು ಆಗಸ್ಟ್-2020 ರ ಮಾಹೆಗಳಲ್ಲಿ ವಿತರಿಸಲಾಗಿದ್ದು, **ಅನುಬಂಧ-1 ರಲ್ಲಿ** ವಿವರಿಸಲಾಗಿದೆ.
ಇ	ಹಾಲಿನ ಪುಡಿಗಿಂತ ನೈಜ ಹಾಲಿನಲ್ಲಿ ಗುಣಮಟ್ಟ ಹೆಚ್ಚಾಗಿರುತ್ತದೆ ಎಂಬ ತಜ್ಞರಅಭಿಪ್ರಾಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಂಸ್ಕರಿಸಲಾದ ನೈಜ ಹಾಲು ಮತ್ತು ಹಾಲಿನ ಪುಡಿಯಿಂದ ತಯಾರಿಸಿದ ಹಾಲು ಹೋಲಿಕೆ ಮಾಡಿದಾಗ ಪ್ರಮುಖ ಪೋಷಕಾಂಶಗಳಾದ ಪ್ರೋಟೀನ್, ಜಿಡ್ಡು, ಲ್ಯಾಕ್ಟೋಸ್, ಖನಿಜಾಂಶಗಳಲ್ಲಿ ಯಾವುದೇ ವ್ಯತ್ಯಾಸಗಳಿರುವುದಿಲ್ಲ.
ಉ	ನಂದಿನಿ ತುಪ್ಪವನ್ನು ಪ್ರತಿ ತಿಂಗಳು ದೇಶದ/ರಾಜ್ಯದ ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿದೆ; (ಕಳೆದ ಮೂರು ವರ್ಷಗಳ ಮಾಹಿತಿಒದಗಿಸುವುದು)	2018 ರಿಂದ 2021ನೇ ಸಾಲಿನವರೆಗೆ ತಿರುಪತಿ ತಿರುಮಲ ದೇವಸ್ಥಾನ, ಮಹಾವೀರ್ ಸ್ಥಾನ್ ನ್ಯಾಸ್ ಸಮಿತಿ, ಪಟ್ನಾ, ಮಲೇಮಹದೇಶ್ವರಬೆಟ್ಟ ಹಾಗೂ ಮಂತ್ರಾಲಯಗಳಿಗೆ ಒಟ್ಟು 20ಲಕ್ಷ ಕೆ.ಜಿ.ಗಳಷ್ಟು ಪ್ರಮಾಣದ ತುಪ್ಪವನ್ನು ಕರ್ನಾಟಕ ಹಾಲು ಮಹಾಮಂಡಳದಿಂದ ಸರಬರಾಜು ಮಾಡಲಾಗಿರುತ್ತದೆ.
ಊ	ಇದರಿಂದಾಗಿ ಇಲಾಖೆಗೆ ಬಂದಂತಹ ಆದಾಯದ ಮೊತ್ತವೆಷ್ಟು?	ದೇವಸ್ಥಾನಗಳಿಗೆ ತುಪ್ಪವನ್ನು ಅತೀ ಕಡಿಮೆ ಆದಾಯದಲ್ಲಿ/ ಉತ್ಪಾದನಾ ವೆಚ್ಚದಲ್ಲಿಯೇ ನೀಡಲಾಗಿರುತ್ತದೆ.

ಪಸಂಮೀ ಇ-88 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಅನುಬಂಧ–1

ಶಾಲಾ ಮಕ್ಕಳಿಗೆ ಕೆನೆ ಭರಿತ ಹಾಲಿನ ಪುಡಿ ಸರಬರಾಜು ಮಾಡಿದ ಪ್ರಮಾಣ ವಿವರ.

(ಜಿಲ್ಲಾವಾರು ವಿವರ (ಪ್ರಮಾಣ ಕೆ.ಜಿ.ಗಳಲ್ಲಿ)

ಕ್ರ.ಸಂ.	ಜಿಲ್ಲೆಗಳು	ಏಪ್ರಿಲ್–20		ಜೂನ್–20		ಜುಲೈ–20		ಆಗಸ್ಟ್–20		ಯೋಜನೆಗೆ ವಿತರಣೆಯಾದ ಒಟ್ಟು ಹಾಲಿನ ಪುಡಿ ಪ್ರಮಾಣ
		ಪ್ರಮಾಣ	ಮಕ್ಕಳ ಸಂಖ್ಯೆ	ಪ್ರಮಾಣ	ಮಕ್ಕಳ ಸಂಖ್ಯೆ	ಪ್ರಮಾಣ	ಮಕ್ಕಳ ಸಂಖ್ಯೆ	ಪ್ರಮಾಣ	ಮಕ್ಕಳ ಸಂಖ್ಯೆ	
1	ರಾಮನಗರ					37270	103528	29	81	37299
2	ಬಳ್ಳಾರಿ					30771	85475	3310	9194	34081
3	ರಾಯಚೂರು					31296	86933		0	31296
4	ಬಿಜಾಪುರ						0	16819	46719	16819
5	ದಕ್ಷಿಣ ಕನ್ನಡ						0	19673	54647	19673
6	ಧಾರವಾಡ			15022	41728		0		0	15022
7	ಕಾರವಾರ	11479	31886	8917	24769		0		0	20396
8	ಚಿಕ್ಕಮಂಗಳೂರು					41079	114108		0	41079
		11479	31886	23939	66497	140416	390044	39831	110642	215665

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2166
ಸದಸ್ಯರ ಹೆಸರು	:	ಶ್ರೀ ರಾಜೀವ್ ಪಿ.(ಕುಡಚಿ)
ಉತ್ತರಿಸುವ ದಿನಾಂಕ	:	15.03.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ 3 ವರ್ಷಗಳಲ್ಲಿ ಸಮೃದ್ಧಿ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದುಕೊಂಡಿರುವವರ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು)	ಕಳೆದ 3 ವರ್ಷಗಳಲ್ಲಿ ಸಮೃದ್ಧಿ ಯೋಜನೆಯಡಿ ಸೌಲಭ್ಯ ಪಡೆದುಕೊಂಡ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ.
(ಆ)	ಕಳೆದ 3 ವರ್ಷಗಳಲ್ಲಿ ಈ ಯೋಜನೆಯಡಿ ಕುಡುಚಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸೌಲಭ್ಯ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು? (ಫಲಾನುಭವಿಗಳ ಸಂಪೂರ್ಣ ಮಾಹಿತಿ ನೀಡುವುದು)	ಕುಡುಚಿ ಮತಕ್ಷೇತ್ರದಲ್ಲಿ ಸಮೃದ್ಧಿ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

ಸಂಖ್ಯೆ: ಸಕಇ 130 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಅನುಭಂಧ -1

ಡಾ: ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

ಸಮೃದ್ಧಿ ಯೋಜನೆಯಡಿ ಸೌಲಭ್ಯ ಪಡೆದುಕೊಂಡ ಫಲಾನುಭವಿಗಳ ವಿವರ

ಕ್ರ.ಸಂ	ಜಿಲ್ಲೆ	ಭೌತಿಕ	ಆರ್ಥಿಕ
	ಬೆಂಗಳೂರು ವಿಭಾಗ		
1	ಬೆಂಗಳೂರು(ನಗರ)	75	75000000
2	ಬೆಂಗಳೂರು(ಗ್ರಾಮಾಂತರ)	5	5000000
3	ಚಿತ್ರದುರ್ಗ	17	17000000
4	ಚಿಕ್ಕಬಳ್ಳಾಪುರ	11	11000000
5	ಕೋಲಾರ	10	10000000
6	ದಾವಣಗೆರೆ	8	8000000
7	ರಾಮನಗರ	1	1000000
8	ಶಿವಮೊಗ್ಗ	4	4000000
9	ತುಮಕೂರು	5	5000000
	ಒಟ್ಟು-1	136	136000000
	ಮೈಸೂರು ವಿಭಾಗ		
10	ಚಾಮರಾಜನಗರ	3	3000000
11	ಚಿಕ್ಕಮಗಳೂರು	3	3000000
12	ದಕ್ಷಿಣ ಕನ್ನಡ	13	13000000
13	ಹಾಸನ	1	1000000
14	ಕೊಡಗು	10	10000000
15	ಮಂಡ್ಯ	10	10000000
16	ಮೈಸೂರು	21	21000000
17	ಉಡುಪಿ	1	1000000
	ಒಟ್ಟು-2	62	62000000
	ಬೆಳಗಾವಿ ವಿಭಾಗ		
18	ಬಾಗಲಕೋಟೆ	0	0
19	ಬೆಳಗಾವಿ	25	25000000
20	ವಿಜಯಾಪುರ	15	15000000
21	ಧಾರವಾಡ	2	2000000
22	ಗದಗ	6	6000000
23	ಹಾವೇರಿ	3	3000000
24	ಉತ್ತರ ಕನ್ನಡ	3	3000000
	ಒಟ್ಟು-3	54	54000000
	ಕಲಬುರಗಿ ವಿಭಾಗ		
25	ಬಳ್ಳಾರಿ	19	19000000
26	ಬೀದರ್	11	11000000
27	ಕಲಬುರಗಿ	39	39000000
28	ಕೊಪ್ಪಳ	1	1000000
29	ರಾಯಚೂರು	15	15000000
30	ಯಾದಗಿರಿ	10	10000000
	ಒಟ್ಟು-4	95	95000000
	ಒಟ್ಟು (1+2+3+4)	347	347000000

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ಸಮೃದ್ಧಿ ಯೋಜನೆ-2018-19

ಅನುಬಂಧ-1

ಕ್ರ ಸಂ	ಜಿಲ್ಲೆ	ಪಪಂ ಜನಸಂಖ್ಯೆ	ಗುರಿ (ಜನಸಂಖ್ಯೆಗನುಗುಣವಾಗಿ)	ಸಾಧನೆ
1	ಬಾಗಲಕೋಟೆ	97203	18	5
2	ಬೆಂಗಳೂರು ಗ್ರಾ	52903	10	9
3	ರಾಮನಗರ	22946	4	0
4	ಬೆಂಗಳೂರು ನಗರ	190239	36	13
5	ಬೆಳಗಾವಿ	297198	56	4
6	ಬಳ್ಳಾರಿ	451406	85	16
7	ಬೀದರ್	235822	44	1
8	ವಿಜಯಪುರ	39314	7	0
9	ಚಾಮರಾಜನಗರ	120219	23	4
10	ಚಿಕ್ಕಮಗಳೂರು	44970	8	2
11	ಚಿತ್ರದುರ್ಗ	302554	57	17
12	ದಕ್ಷಿಣ ಕನ್ನಡ	82268	15	1
13	ಧಾರವಾಡ	87548	16	2
14	ದಾವಣಗೆರೆ	233112	44	4
15	ಗದಗ	61654	12	1
16	ಕಲಬುರಗಿ	65259	15	0
17	ಯಾದಗಿರಿ	146849	28	3
18	ಹಾಸನ	32329	6	0
19	ಹಾವೇರಿ	141380	27	6
20	ಕೊಡಗು	58054	11	0
21	ಕೋಲಾರ	78875	15	0
22	ಚಿಕ್ಕಬಳ್ಳಾಪುರ	156487	29	8
23	ಕೊಪ್ಪಳ	164271	31	0
24	ಮಂಡ್ಯ	22402	4	0
25	ಮೈಸೂರು	334547	63	6
26	ರಾಯಚೂರು	367071	69	10
27	ಶಿವಮೊಗ್ಗ	65412	12	1
28	ತುಮಕೂರು	209559	39	3
29	ಉಡುಪಿ	52897	10	0
30	ಉತ್ತರ ಕನ್ನಡ	34239	6	0
	ಒಟ್ಟು	4248987	800	116

Managing Director

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಪ್ರಧಾನ ಕಛೇರಿ, ಬೆಂಗಳೂರು

ಅನುಬಂಧ-1

ಸಮೃದ್ಧಿ ಯೋಜನೆಯ ಫಲಾನುಭವಿಗಳ ಸಂಖ್ಯೆ 2018-19 ರಿಂದ 2020-21 28-02-2021 ರ ವರೆಗೆ

ಕ್ರ.ಸಂ	ಜಿಲ್ಲೆಗಳು	ಫಲಾನುಭವಿಗಳ ಸಂಖ್ಯೆ
1	ಬೆಂಗಳೂರು ನಗರ	6
2	ಬೆಂಗಳೂರು ಗ್ರಾಮಾಂತರ	1
3	ರಾಮನಗರ	1
4	ಚಾಮರಾಜನಗರ	1
5	ವಿಜಯಪುರ	2
6	ರಾಯಚೂರು	3
7	ಬಾಗಲಕೋಟೆ	1
8	ಕೋಲಾರ	3
9	ಮಂಡ್ಯ	1
10	ಉಡುಪಿ	1
11	ಉತ್ತರ ಕನ್ನಡ	1
12	ತುಮಕೂರು	1
13	ಹಾವೇರಿ	1
14	ಯಾದಗಿರಿ	1
15	ದಾವಣಗೆರೆ	3
16	ಬೀದರ್	1
17	ಹಾಸನ	1
18	ಬೆಳಗಾವಿ	3
19	ಶಿವಮೊಗ್ಗ	4
20	ಧಾರವಾಡ	1
21	ಕಲಬುರಗಿ	4
22	ಕೊಪ್ಪಳ	1
23	ಗದಗ	1
24	ಚಿತ್ರದುರ್ಗ	3
25	ಮೈಸೂರು	2
26	ಕೊಡಗು	1
27	ಚಿಕ್ಕಮಗಳೂರು	1
28	ದಕ್ಷಿಣ ಕನ್ನಡ	1
29	ಬಳ್ಳಾರಿ	0
30	ಚಿಕ್ಕ ಬಳ್ಳಾಪುರ	5
ಒಟ್ಟು		56

ವ್ಯವಸ್ಥಾಪಕ ನಿರ್ದೇಶಕರು

ಅನುಭಂಧ –2

ಡಾ:: ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ, ಬೆಳಗಾವಿ ಜಿಲ್ಲೆ

ಕ್ರ.ಸಂ	ಫಲಾನುಭವಿಗಳ ಹೆಸರು	ವಿಳಾಸ	ತಾಲ್ಲೂಕು	ಮತಕ್ಷೇತ್ರ	ಕಂಪನಿ ಹೆಸರು
1	ಜಯಪಾಲ ಸುಭಾಷ ಹಿಪ್ಪರಗಿ	ಮುಗಳಖೋಡ	ರಾಯಾಬಾಗ	ಕುಡಚಿ	ಲೇಟ್ಸ್ ಟ್ರಾನ್ಸಪೋರ್ಟ
2	ಪುಟ್ಟವ್ವಾ ಪ್ರಕಾಶ ಕಾಂಬಳೆ	ಹಾರೂಗೇರಿ	ರಾಯಾಬಾಗ	ಕುಡಚಿ	ಪೀಜಿಟಲ್
3	ರಾಜು ಮಹಾದೇವ ಕಾಂಬಳೆ	ನಿಲಜಿ	ರಾಯಾಬಾಗ	ಕುಡಚಿ	ಗ್ಲೋಬಲ್
4	ರಮೇಶ ಪಂಡಿತ ಶಾಹುಗೋಳ	ಮುಗಳಖೋಡ	ರಾಯಾಬಾಗ	ಕುಡಚಿ	ಜ್ಯೂಸ್ ಲಾಬಿಜ್
5	ರಾಯಪ್ಪ ನಿಂಗಪ್ಪ ಕಾಂಬಳೆ	ನಿಡಗುಂದಿ	ರಾಯಾಬಾಗ	ಕುಡಚಿ	ಪಂಪ್ ಕಾಟ್
6	ಕರೇಪ್ಪ ಸದಾಶಿವ ಕಾಂಬಳೆ	ಹಾರೂಗೇರಿ	ರಾಯಾಬಾಗ	ಕುಡಚಿ	ಪಂಪ್ ಕಾಟ್
7	ಸುರೇಖಾ ಸಂಗಪ್ಪಾ ಕಾಂಬಳೆ	ಹಾರೂಗೇರಿ	ರಾಯಾಬಾಗ	ಕುಡಚಿ	ರೋಮನ ಐಲ್ಯಾಂಡ
8	ಶಿವರಾಜ ಜಯಪಾಲ ಗೋಳಸಂಗಿ	ಮುಗಳಖೋಡ	ರಾಯಾಬಾಗ	ಕುಡಚಿ	ಬ್ಲ್ಯಾಕ ಬರ್ಡ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ,ಬೆಳಗಾವಿ ಜಿಲ್ಲೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ರಾಜೀವ್ ಪಿ. (ಕುಡಚಿ) ರವರು ಮಂಡಿಸಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 2166ಕ್ಕೆ ಉತ್ತರ

ಸಮೃದ್ಧಿ ಯೋಜನೆಯಡಿ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿದ ವಿವರ

ಕ್ರ.ಸಂ	ಜಿಲ್ಲೆ	ಅರ್ಜಿ ಸಂಖ್ಯೆ	ಹೆಸರು	ಗ್ರಾಮ	ತಾಲ್ಲೂಕು	ವಿಧಾನಸಭಾ ಕ್ಷೇತ್ರ	Gender	ಮೊಬೈಲ ನಂ	ಉಪಜಾತಿ	1ನೇ ಕಂತು			2ನೇ ಕಂತು			ಉದ್ದೇಶ	Status (ELIGIBLE/IN ELIGIBLE)	Final Merit Value	Age	TOPMerit District wise as per Target
										ಚೆಕ್ಕಸಂಖ್ಯೆ	ಮೊತ್ತ	ದಿನಾಂಕ	ಚೆಕ್ಕಸಂಖ್ಯೆ	ಮೊತ್ತ	ದಿನಾಂಕ					
1	ಬೆಳಗಾವಿ	13472	ಶ್ರೀ ಭರಮಪ್ಪ ಸುರೇಶ ಪಟಗಸ್ತಿ	ಕುಡಚಿ	ರಾಯಭಾಗ	ಕುಡಚಿ	Male	8792649850	ನಾಯಕ	524267	500000	05.01.21	810951	500000	06.03.21	ಟೀಂ ಟಾಯರ್ಸ್	ELIGIBLE	25	31	TOP
2	ಬೆಳಗಾವಿ	13366	ಶ್ರೀ ಶಿವಾಜಿ ಸುರೇಶ ಪಟಗಸ್ತಿ	ಕುಡಚಿ	ರಾಯಭಾಗ	ಕುಡಚಿ	Male	9986563065	ನಾಯಕ	810946	500000	18.02.21				ಸ್ವೀಟ್ಸ್ & ಕ್ಯಾಂಡಿಮೆಂಟ್ಸ್				
										ಒಟ್ಟು	1000000			500000						

Managing Director
Karnataka ... Scheduled
Tribes ... Corporation Ltd.
Bangalore

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಬೆಳಗಾವಿ ಜಿಲ್ಲೆ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಾಜೀವ್ ಪಿ (ಕುಡಚಿ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2166 ಕ್ಕೆ ಉತ್ತರ

ಅನುಬಂಧ –2 ಕುಡಚಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ಆಯ್ಕೆಯಾದ ಫಲಾನುಭವಿಗಳ ವಿವರ					
ಕ್ರ.ಸಂ	ಫಲಾನುಭವಿಗಳ ಹೆಸರು	ವಿಳಾಸ	ತಾಲ್ಲೂಕು	ಮತಕ್ಷೇತ್ರ	ಕಂಪನಿ ಹೆಸರು
1	ಈರವ್ವಾ ಭೀಮಪ್ಪಾ ವಡ್ಡರ	ಮುಗಳಖೋಡ	ರಾಯಾಬಾಗ	ಕುಡಚಿ	ತ್ರಮರ್ ಪ್ಯಾಶನ್

ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ (ನಿ.)
ಬೆಳಗಾವಿ ಜಿಲ್ಲೆ

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2169
2	ಸದಸ್ಯರ ಹೆಸರು	ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದಿರೆ)
3	ಉತ್ತರಿಸಬೇಕಾದ ದಿನಾಂಕ	15.03.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೂಡಬಿದರೆ ಮತ್ತು ಮೂಲ್ಕಿ ತಾಲ್ಲೂಕು ಪ್ರದೇಶದ ಸರ್ಕಾರಿ ಕಾರ್ಯಾಲಯಗಳಿಗೆ ಸಿಬ್ಬಂದಿ ವರ್ಗದವರ ನೇಮಕಾತಿಗೆ ಸರ್ಕಾರದ ಸಕಾಲಿಕ ಕ್ರಮಗಳೇನು;</td>
<td rowspan="2">ಸರ್ಕಾರದ ದಿನಾಂಕ:11-01-2018 ರ ಅಧಿಸೂಚನೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಡಬಿದಿರೆ ಹೊಸ ತಾಲ್ಲೂಕು ಅಸ್ತಿತ್ವಕ್ಕೆ ಬಂದಿರುತ್ತದೆ. ಈ ತಾಲ್ಲೂಕಿನಲ್ಲಿ ಕಂದಾಯ ಇಲಾಖೆ ವತಿಯಿಂದ ಪ್ರಾರಂಭಿಸಿರುವ ತಾಲ್ಲೂಕು ಕಚೇರಿಯಲ್ಲಿ ಮಂಜೂರಾಗಿರುವ, ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ವಿವರ ಕೆಳಕಂಡಂತಿದೆ.
<table>
<tr><th>ಅಧಿಕಾರಿ/ನೌಕರರ ವಿವರ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>ತಹಸೀಲ್ದಾರ್ ಗ್ರೇಡ್-1</td><td>01</td><td>-</td><td>01</td></tr>
<tr><td>ತಹಸೀಲ್ದಾರ್ ಗ್ರೇಡ್-2</td><td>01</td><td>01</td><td>-</td></tr>
<tr><td>ಶಿರಸ್ತೇದಾರ್</td><td>02</td><td>01</td><td>01</td></tr>
<tr><td>ಪ್ರಥಮ ದರ್ಜೆ ಸಹಾಯಕ</td><td>03</td><td>01</td><td>02</td></tr>
<tr><td>ಆಹಾರ ನಿರೀಕ್ಷಕರು</td><td>01</td><td>-</td><td>01</td></tr>
<tr><td>ದ್ವಿ.ದ.ಸಹಾಯಕರು</td><td>04</td><td>02</td><td>02</td></tr>
<tr><td>ಗ್ರಾಮ ಲೆಕ್ಕಗರು (ಭೂಮಿ ಶಾಖೆ ಸೇರಿ)</td><td>23</td><td>21</td><td>02</td></tr>
<tr><td>ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್</td><td>01</td><td>-</td><td>01</td></tr>
<tr><td>ಗ್ರೂಪ್ ಡಿ ನೌಕರರು</td><td>03</td><td>-</td><td>03</td></tr>
<tr><td>ವಾಹನ ಚಾಲಕರು</td><td>01</td><td>-</td><td>01</td></tr>
<tr><td>ಒಟ್ಟು</td><td>40</td><td>26</td><td>14</td></tr>
</table>
ಮುಂದುವರಿದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಲ್ಕಿ ತಾಲ್ಲೂಕು ಸರ್ಕಾರದ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕ:25-02-2021 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಈ ತಾಲ್ಲೂಕಿಗೆ ಕಂದಾಯ ಇಲಾಖೆ ವತಿಯಿಂದ ತಾಲ್ಲೂಕು ಕಚೇರಿಯನ್ನು ಹಾಗೂ ಇನ್ನುಳಿದ ಇಲಾಖೆಗಳು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.</td></tr>
<tr><td>ಆ)</td><td>ನೂತನ ತಾಲ್ಲೂಕು ರಚಿಸಿದ ನಂತರ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಕಾರ್ಯಗಳು ಇರುವುದರಿಂದ ಸರ್ಕಾರವು ನಿಗದಿ ಪಡಿಸಿದ ಸಂಖ್ಯೆಗೆ ಅನುಗುಣವಾಗಿ ವಿವಿಧ ದರ್ಜೆಯ ಸಿಬ್ಬಂದಿ ವರ್ಗದವರ ನೇಮಕಾತಿಯು ಅತ್ಯಾವಶ್ಯಕವಾಗಿದ್ದು ಸರ್ಕಾರ ಈ ಕುರಿತು ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ;</td></tr>
</table>

ಇ)	ನೂತನ ತಾಲ್ಲೂಕು ಕಾರ್ಯಾಲಯವೂ ಸೇರಿದಂತೆ ವಿವಿಧ ಇಲಾಖಾ ಕಾರ್ಯಾಲಯಗಳೂ ಸಾರ್ವಜನಿಕರಿಗೆ ಇಲಾಖಾ ವ್ಯಾಪ್ತಿಯ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದ್ದು, ತ್ವರಿತವಾಗಿ ನಿಗದಿತ ಸಿಬ್ಬಂದಿ ವರ್ಗದವರ ನೇಮಕಾತಿಗೆ ವಿಳಂಬವಿಲ್ಲದಂತೆ ಸರ್ಕಾರ ಕ್ರಮ ಜರುಗಿಸುವುದೆ?	ಮೂಡಬಿದರೆ ತಾಲ್ಲೂಕಿನಲ್ಲಿ ಪ್ರಾರಂಭವಾಗಿರುವ ವಿವಿಧ ಇಲಾಖೆಗಳ ಕಚೇರಿ ವಿವರ ಹಾಗೂ ಅಧಿಕಾರಿ/ ಸಿಬ್ಬಂದಿ ವರ್ಗದವರ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಸಂಖ್ಯೆ: ಕಂಇ 22 ಎಲ್‌ಆರ್‌ಡಿ 2021

(ಆರ್.ಅಶೋಕ)
ಕಂದಾಯ ಸಚಿವರು

ಅನುಬಂಧ -1

ಕ್ರ.ಸಂ	ಮೂಡುಬಿದಿರೆ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಹೆಸರು	ಮಂಜೂರಾದ ಸಿಬ್ಬಂದಿ				ಪ್ರಸ್ತುತ ಇರುವ ಹುದ್ದೆ				ಮಂಜೂರು ಮಾಡಬೇಕಾದ ಸಿಬ್ಬಂದಿ				ಕಛೇರಿ ವಿಸ್ತೀರ್ಣ			ಷರಾ
		ಎ	ಬಿ	ಸಿ	ಡಿ	ಎ	ಬಿ	ಸಿ	ಡಿ	ಎ	ಬಿ	ಸಿ	ಡಿ	ಸ್ವಂತ	ತಾತ್ಕಾಲಿಕ ಸರ್ಕಾರಿ	ಬಾಡಿಗೆ	
1	ಕಂದಾಯ ಇಲಾಖೆ	0	2	34	1	0	1	26	0	0	1	8	1	ಹೌದು	-	-	
2	ಭೂಮಾಪನ ಇಲಾಖೆ	0	0	7	2	0	0	3	1	0	0	4	1	ಹೌದು	-	-	
3	ಉಪನೋಂದಣಿ ಇಲಾಖೆ	0	1	5	2	0	1	1	0	0	0	4	2	ಹೌದು	-	-	
4	ಪತ್ರಾಂಕಿತ ಉಪಖಜಾನೆ ಇಲಾಖೆ	0	1	4	1	0	1	2	0	0	0	2	1	ಹೌದು	-	-	
5	ಕಾನೂನು ಮಾಪನ ಶಾಸ್ತ್ರ ಇಲಾಖೆ	0	0	2	2	0	0	1	1	0	0	1	1	ಹೌದು	-	-	
6	ತಾಲೂಕು ಪಂಚಾಯತ್	1	3	16	5	0	0	0	0	1	3	16	5		-	-	
7	ಕೃಷಿ ಇಲಾಖೆ	1	7	6	3	0	3	0	0	1	4	6	3	ಹೌದು	-	-	ಶಾಲೆ ಕಟ್ಟಡದಲ್ಲಿ ಕಾರ್ಯನಿರ್ಹಿಸುತ್ತಿದ್ದಾರೆ
8	ತೋಟಗಾರಿಕಾ ಇಲಾಖೆ	1	2	4	1	0	1	0	0	1	1	4	1	ಹೌದು	-	-	
9	ಪಶು ಸಂಗೋಪನಾ ಇಲಾಖೆ	3	1	6	2	1	0	1	2	2	1	5	0	ಹೌದು	-	-	
10	ಆರೋಗ್ಯ ಇಲಾಖೆ	1	0	6	1	0	0	0	0	1	0	6	1	ಹೌದು	-	-	
11	ಶಿಕ್ಷಣ ಇಲಾಖೆ	1	2	14	4	1	2	13	2	0	0	1	2	ಹೌದು	-	-	
12	ಅಬಕಾರಿ ಇಲಾಖೆ	0	0	13	0	0	0	13	0	0	0	0	0	ಹೌದು	-	-	
13	ವಾಣಿಜ್ಯ ತೆರಿಗೆ ಇಲಾಖೆ	0	1	4	1	0	1	3	0	0	0	1	1	ಹೌದು	-	-	
14	ಗ್ರಂಥಾಲಯ	0	0	2	1	0	0	1	0	0	0	1	1	ಹೌದು	-	-	
15	ಅಗ್ನಿಶಾಮಕ ದಳ ಇಲಾಖೆ	0	0	27	0	0	0	13	0	0	0	14	0	ಹೌದು	-	-	

ಜಿಲ್ಲಾಧಿಕಾರಿಯವರ ಪರವಾಗಿ
ದಕ್ಷಿಣ ಕನ್ನಡ, ಮಂಗಳೂರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 2170

ಉತ್ತರಿಸಬೇಕಾದ ದಿನಾಂಕ : 15.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿನ ಪಶುಸಂಗೋಪನಾ ವಲಯವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಪಶುವೈದ್ಯಕೀಯ ಸೇವೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? ಪಶುವೈದ್ಯಕೀಯ ಆಸ್ಪತ್ರೆಗಳನ್ನು ಪ್ರಾರಂಭಿಸಿ ಮೂಲಭೂತ ಸೌಲಭ್ಯ / ಸೌಕರ್ಯಗಳು, ವಿಶೇಷತೆ, ಸೂಕ್ತ ಸಿಬ್ಬಂದಿ ವರ್ಗದವರ ವ್ಯವಸ್ಥೆಗಳನ್ನು ಒದಗಿಸಿಕೊಡಲು ಸರ್ಕಾರದ ಸಕಾಲಿಕ ಕ್ರಮಗಳೇನು?	ರಾಜ್ಯದಲ್ಲಿನ ಪಶುಸಂಗೋಪನಾ ವಲಯವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಪಶುವೈದ್ಯಕೀಯ ಸೇವೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ: 1. ರಾಜ್ಯದಲ್ಲಿ 4212 ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಂದ ಉತ್ತಮವಾದ ಚಿಕಿತ್ಸೆಯನ್ನು ಜಾನುವಾರುಗಳಿಗೆ ನೀಡಲಾಗುತ್ತಿದೆ. 2. 15 ಜಿಲ್ಲೆಗಳಲ್ಲಿ ಸುಸಜ್ಜಿತ ಚಿಕಿತ್ಸಾ ವಾಹನಗಳ ಮೂಲಕ (ಪಶು ಸಂಜೀವಿನಿ) ತಜ್ಞ ಪಶುವೈದ್ಯರ ಸೇವೆಯನ್ನು ಬಳಸಿಕೊಂಡು ಪಶುಪಾಲಕರ ಮನೆ ಬಾಗಿಲಲ್ಲಿ ಶಸ್ತ್ರಚಿಕಿತ್ಸೆ ಹಾಗೂ ವಿಶೇಷ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. 3. ಜಾನುವಾರುಗಳಿಗೆ ಕೃತಕ ಗರ್ಭಧಾರಣೆಯನ್ನು ಪಶುವೈದ್ಯಕೀಯ ಸಂಸ್ಥೆಗಳಿಂದ ಮಾಡಲಾಗುತ್ತಿದ್ದು, ಅವಶ್ಯವಿರುವ ಕಡೆ ಮನೆ ಬಾಗಿಲಿಗೆ ಕೃತಕ ಗರ್ಭಧಾರಣಾ ಸೇವೆಯನ್ನು ಒದಗಿಸಲಾಗುತ್ತಿದೆ. 4. ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿಯಲ್ಲಿ ರೈತರ ಆದಾಯ ಹೆಚ್ಚಿಸಲು ಹಾಗೂ ಪ್ರೋತ್ಸಾಹಿಸಲು ಕುರಿ, ಮೇಕೆ ಮತ್ತು ಹಂದಿಗಳ ಉತ್ಪಾದನೆ ಹೆಚ್ಚಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ. 5. ಜಾನುವಾರು ವಿಮಾ ಯೋಜನೆಯಡಿಯಲ್ಲಿ ರೈತರು ತಮ್ಮ ಹಾಲು ಹಿಂಡುವ ರಾಸುಗಳನ್ನು ಆಕಸ್ಮಿಕ ಮರಣ ಇಲ್ಲವೆ ಇತರೆ ಕಾರಣಗಳಿಂದ ಕಳೆದುಕೊಂಡಲ್ಲಿ ವಿಮಾ ಸಂಸ್ಥೆಗಳಿಂದ ವಿಮೆ ಮೊತ್ತಕ್ಕೆ ಅನುಗುಣವಾಗಿ ಪರಿಹಾರ ನೀಡಲಾಗುವುದು. 6. ಹಾಲು ಉತ್ಪಾದಕರಿಗೆ ಉತ್ತೇಜನ ನೀಡಲು ಸರ್ಕಾರದಿಂದ ಪ್ರತಿ ಲೀಟರ್‌ಗೆ ರೂ.5/- ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. 7. ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಯೋಜನೆ (NADCP) ಕಾರ್ಯದಡಿ ರಾಜ್ಯದಲ್ಲಿರುವ ಎಲ್ಲಾ ಜಾನುವಾರುಗಳಿಗೆ ಕಾಲುಬಾಯಿ ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮವನ್ನು

		ಹಮ್ಮಿಕೊಳ್ಳಲಾಗಿದೆ ಹಾಗೂ ವಿವಿಧ ಸಾಂಕ್ರಾಮಿಕ ರೋಗಗಳ ವಿರುದ್ಧ ಲಸಿಕೆ ಹಾಕಲಾಗುತ್ತಿದೆ. 8. RIDF ಯೋಜನೆಯಡಿ ಪಶುವೈದ್ಯಕೀಯ ಸಂಸ್ಥೆಗಳಿಗೆ ನೂತನ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ. 9. ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಖಾಲಿ ಇರುವ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಹಾಗೂ ಮುಖ್ಯ ಪಶುವೈದ್ಯಾಧಿಕಾರಿ ಮತ್ತು ಹಿರಿಯ ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಪಶುವೈದ್ಯಾಧಿಕಾರಿ ಹುದ್ದೆಯಿಂದ ಕಾಲಮಿತಿ ಪದೋನ್ನತಿ/ಮುಂಬಡ್ತಿ ಮುಖಾಂತರ ತುಂಬಲು ಕ್ರಮವಹಿಸಲಾಗಿದೆ. 10. ಇಲಾಖೆಯಲ್ಲಿ ಖಾಲಿ ಇರುವ 639 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಮುಖಾಂತರ ಭರ್ತಿ ಮಾಡುವ ಪ್ರಸ್ತಾವನೆಗೆ ಪ್ರಸ್ತುತ ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯು ಸಹಮತಿ ನೀಡಿರುವುದಿಲ್ಲ. ಆದುದರಿಂದ, ಆರ್ಥಿಕ ಇಲಾಖೆಯ ಮುಂದಿನ ಆದೇಶದವರೆಗೂ ಸದರಿ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿರುತ್ತದೆ. ಮುಂದುವರೆದು, ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂಬಂಧಿಸಿದಂತೆ ಅನುಚ್ಛೇಧ 371 (ಜೆ) ರಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ 61 ಪಶುವೈದ್ಯಾಧಿಕಾರಿ ಹುದ್ದೆಗಳನ್ನು, 32 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು, 83 ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ, ದಿನಾಂಕ:06.07.2020 ರ ಸುತ್ತೋಲೆಯಲ್ಲಿ ಆರ್ಥಿಕ ಇಲಾಖೆಯು ಆರ್ಥಿಕ ನಿರ್ಬಂಧಗಳ ಹಿನ್ನೆಲೆಯಲ್ಲಿ 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ-ಕರ್ನಾಟಕ ಭಾಗದ ಹುದ್ದೆಗಳು ಹಾಗೂ ಬ್ಯಾಕ್ ಲಾಗ್ ಹುದ್ದೆಗಳು ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ತಿಳಿಸಿದರ ಹಿನ್ನೆಲೆಯಲ್ಲಿ ಸದರಿ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು. ಪ್ರಸ್ತುತ ದಿನಾಂಕ:24.02.2021 ರಲ್ಲಿ ಆರ್ಥಿಕ ಇಲಾಖೆಯು ನೇಮಕಾತಿ ಪೂರ್ವ ಪ್ರಕ್ರಿಯೆಗಳನ್ನು ಮುಂದುವರೆಸಲು ಸಹಮತಿ ನೀಡಿದ್ದು, ಅದರಂತೆ, ನೇಮಕಾತಿ ಪೂರ್ವ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಆ	ಮೂಡಬಿದರೆ/ಮುಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶುಸಂಗೋಪನಾ ಇಲಾಖಾ ವ್ಯವಸ್ಥೆಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿ ಜಾನುವಾರುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸರ್ಕಾರದ ಕ್ರಮಗಳೇನು?	ಮೂಡಬಿದರೆ/ ಮುಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶುಸಂಗೋಪನಾ ಇಲಾಖಾ ವ್ಯವಸ್ಥೆಯಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿ ಜಾನುವಾರುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸರ್ಕಾರದ ಕ್ರಮಗಳು ಈ ಕೆಳಗಿನಂತಿವೆ: • ಮೂಡಬಿದರೆ / ಮುಲ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಜಾನುವಾರುಗಳಿಗೆ ಚಿಕಿತ್ಸೆ ಒದಗಿಸಿ ಸಂರಕ್ಷಣೆ ಮಾಡಲಾಗುತ್ತಿದೆ. ಪಶು ಆಸ್ಪತ್ರೆ: 03; ಪಶು ಚಿಕಿತ್ಸಾಲಯ: 06; ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ: 10; ಒಟ್ಟು: 19 • ಆರ್.ಐ.ಡಿ.ಎಫ್. ಯೋಜನೆಯ ಟ್ರಾಂಚ್ 20 ರ ನಿಡ್ಡೋಡಿ ಮತ್ತು ನೀರುಂಡೆ, ಟ್ರಾಂಚ್ 22 ರಡಿ ಕನ್ನಿಗೋಳಿ, ಟ್ರಾಂಚ್ 23 ರಡಿ ಮೂಡಬಿದರೆ, ಟ್ರಾಂಚ್ 24 ರಡಿ ಮುಲ್ಕಿ ಮತ್ತು ಬಜ್ಪೆ ಪಶುವೈದ್ಯಕೀಯ ಸಂಸ್ಥೆಗಳಿಗೆ ನೂತನ ಕಟ್ಟಡಗಳು ಮಂಜೂರಾಗಿರುತ್ತವೆ. • ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ವಿವಿಧ ಜಾನುವಾರು ಘಟಕಗಳನ್ನು ಹೊಂದಲು ಸಹಾಯ ಧನವನ್ನು ನೀಡಲಾಗುತ್ತಿದೆ. • ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಯೋಜನೆ (NADCP) ಕಾರ್ಯದಡಿ ಎಲ್ಲಾ ಜಾನುವಾರುಗಳಿಗೆ ಕಾಲುಬಾಯಿ ರೋಗದ ವಿರುದ್ಧ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ವಿವಿಧ ಸಾಂಕ್ರಾಮಿಕ ರೋಗದ ವಿರುದ್ಧ ಲಸಿಕೆ ಹಾಕಲಾಗುತ್ತಿದೆ. • ತುರ್ತು ರೋಗ ತಪಾಸಣೆಗಾಗಿ ಮಂಗಳೂರಿನಲ್ಲಿ ಪ್ರಾಣಿ ರೋಗ ಪ್ರಾದೇಶಿಕ ಪ್ರಾಯೋಗಾಲಯ ಮತ್ತು ಮಾಹಿತಿ ಕೇಂದ್ರ ಇದ್ದು, ಜಿಲ್ಲೆಯಲ್ಲಿರುವ ತಾಲ್ಲೂಕುಗಳಲ್ಲಿ ರೋಗ ಪತ್ತೆ ಮಾಡಲಾಗುತ್ತಿದ್ದು, ಅವಶ್ಯವಿದ್ದಲ್ಲಿ ತುರ್ತಾಗಿ ಲಸಿಕಾ/ಚಿಕಿತ್ಸೆ ನೀಡಲು ಕ್ರಮವಹಿಸಲಾಗುತ್ತಿದೆ.
ಇ	ಹೈನುಗಾರಿಕೆ, ಕೋಳಿ ಸಾಕಾಣೆ ವಲಯವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರದ ಪರಿಣಾಮಕಾರಿ ಯೋಜನಾನುಷ್ಠಾನಗಳು ಯಾವುವು: ಹೈನುಗಾರಿಕೆ ವಲಯದ ಅಭಿವೃದ್ಧಿಗಾಗಿ ಇಲಾಖಾ ವ್ಯಾಪ್ತಿಯಲ್ಲಿನ ಪ್ರೋತ್ಸಾಹಕ ಯೋಜನೆಗಳು ಯಾವುವು?	ಹೈನುಗಾರಿಕೆ, ಕೋಳಿ ಸಾಕಾಣೆ ವಲಯವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರದ ಪರಿಣಾಮಕಾರಿ ಯೋಜನಾನುಷ್ಠಾನಗಳು ಈ ಕೆಳಕಂಡಂತಿವೆ. ➢ ಹೈನುಗಾರಿಕೆಗೆ ಉತ್ತೇಜನ ನೀಡಲು 2403-00-101-0-30, ವಿಸ್ತರಣೆ ಕಾರ್ಯಕ್ರಮದಡಿ ಗೊಡ್ಡು, ಬಂಜೆ, ಜಾನುವಾರುಗಳ ಶಿಬಿರ, ಮಿಶ್ರತಳಿ ಕರುಗಳ ಪ್ರದರ್ಶನ, ಹೈನುಗಾರಿಕೆ ಕುರಿತು ರೈತರಿಗೆ ತರಬೇತಿ ನೀಡಲಾಗುತ್ತಿದೆ. ➢ ಹಿತ್ತಲ ಕೋಳಿ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ರೈತರಿಗೆ ಗಿರಿರಾಜ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ➢ ಅಸೀಲ್ ಕ್ರಾಸ್ ಕೋಳಿ ಮರಿಗಳನ್ನು ಉಚಿತವಾಗಿ ರೈತರಿಗೆ ವಿತರಿಸಲಾಗುತ್ತಿದೆ.

		➢ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿಯಲ್ಲಿ ರೈತರಿಗೆ ಶೇಕಡ 90 ಸಹಾಯಧನದೊಂದಿಗೆ ಆಡು / ಹಂದಿ ಘಟಕಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ➢ ಜಾನುವಾರು ಮಿಷನ್ ಕಾರ್ಯಕ್ರಮದಡಿ ಎ.ಪಿ.ಎಲ್./ ಬಿ.ಪಿ.ಎಲ್. ಕ್ರಮವಾಗಿ ಶೇಕಡ 50 ಮತ್ತು ಶೇಕಡ 70 ರ ಸಹಾಯಧನದೊಂದಿಗೆ ಜಾನುವಾರು ವಿಮಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ➢ ಹಾಲು ಉತ್ಪಾದಕರಿಗೆ ಉತ್ತೇಜನ ನೀಡಲು ಪ್ರತಿ ಲೀಟರ್‌ಗೆ ರೂ.5/– ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ➢ ಮಂಗಳೂರು ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾದಲ್ಲಿ ಜಾನುವಾರು ಸಂವರ್ಧನ ಮತ್ತು ತರಬೇತಿ ಕೇಂದ್ರದವತಿಯಿಂದ ನಾಟಿ ಮತ್ತು ಗಿರಿರಾಜ ಒಂದು ದಿನದ ಕೋಳಿ ಮರಿಗಳನ್ನು ರಿಯಾಯಿತಿ ದರಗಳಲ್ಲಿ ರೈತರಿಗೆ ವಿತರಿಸಲಾಗುತ್ತಿದೆ. ಆಸಕ್ತ ಹಂದಿ ಸಾಕಾಣಿಕಾ ರೈತರಿಗೆ ಮೂರು ತಿಂಗಳ ಹಂದಿ ಮರಿಗಳನ್ನು ರಿಯಾಯಿತಿ ದರಗಳಲ್ಲಿ ವಿತರಣೆ ಮಾಡಲಾಗುತ್ತಿದೆ. ಹೈನುಗಾರರಿಗೆ ಕ್ಷೇತ್ರದಲ್ಲಿ ಲಭ್ಯವಿರುವ ವಿವಿಧ ತಳಿಗಳ ಉನ್ನತೀಕರಿಸಿದ ಹುಲ್ಲುಕಡ್ಡಿ / ಹುಲ್ಲುಬೇರುಗಳನ್ನು ನಾಟಿ ಮಾಡಲು ರಿಯಾಯಿತಿ ದರಗಳಲ್ಲಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ.

ಪಸಂಮೀ ಇ–83 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2186
ವಿಧಾನಸಭೆ ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ : 15-03-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಿತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗದ ಜನಾಂಗದವರು ವಾಸಿಸುವ ಕಾಲೋನಿಗಳ ಅಭಿವೃದ್ಧಿ ಮತ್ತು ಅಂಬೇಡ್ಕರ್ ಭವನ, ವಾಲ್ಮೀಕಿ ಭವನ ಹಾಗೂ ಜಗಜೀವನರಾಂ ಭವನಗಳಿಗೆ ಬೇಡಿಕೆ ಇರುವುದು ನಿಜವೇ;	ಹೌದು.
ಆ)	ಹಾಗಿದ್ದಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರು ವಾಸಿಸುವ ಕಾಲೋನಿಗಳ ಅಭಿವೃದ್ಧಿ ಮತ್ತು ಅಂಬೇಡ್ಕರ್ ಭವನ, ವಾಲ್ಮೀಕಿ ಭವನ ಹಾಗೂ ಬಾಬು ಜಗಜೀವನರಾಂ ಭವನಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೆ ಸರ್ಕಾರದ ಕ್ರಮವೇನು;	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅನುದಾನ ಬಿಡುಗಡೆ ಮಾಡುವ ಕುರಿತು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪರಿಶಿಷ್ಟ ಪಂಗಡಗಳ ಇಲಾಖೆಯ ವತಿಯಿಂದ ಕಿತ್ತೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 10 ವಾಲ್ಮೀಕಿ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ವಿವರವನ್ನು ಅನುಬಂಧ-1ರಲ್ಲಿ ನೀಡಿದೆ. ಉಳಿದಂತೆ, ಡಾ: ಬಿ.ಆರ್. ಅಂಬೇಡ್ಕರ್ ಭವನ ಮತ್ತು ಡಾ: ಬಾಬು ಜಗಜೀವನ ರಾಂ ಭವನಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಸೂಕ್ತ ಪ್ರಸ್ತಾವನೆಯನ್ನು ಪಡೆದು ಅನುದಾನದ ಲಭ್ಯತೆಯನ್ನು ಆಧರಿಸಿ, ಅನುದಾನ ಬಿಡುಗಡೆ ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು.
ಇ)	2021-22ನೇ ಸಾಲಿನಲ್ಲಿ ಅನುದಾನ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	2021-22ನೇ ಸಾಲಿನ ಆಯವ್ಯಯದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಭವನ / ಡಾ: ಬಾಬು ಜಗಜೀವನ ರಾಂ ಭವನ ಮತ್ತು ಇತರೆ ಭವನಗಳ ನಿರ್ಮಾಣದ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗುವ ಅನುದಾನವನ್ನು ಆಧರಿಸಿ ಭವನಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲು ಕ್ರಮ ವಹಿಸಲಾಗುವುದು.

ಸಕಇ 115 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಅನುಬಂಧ-1

ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು) ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ:2186 ಕ್ಕೆ ಉತ್ತರ

ಕಿತ್ತೂರು ವಿಧಾನಸಭಾ ಕ್ಷೇತ್ರಕ್ಕೆ ವಾಲ್ಮೀಕಿ ಭವನ/ಸಮುದಾಯ ಭವನಗಳ ನಿರ್ಮಾಣ ಮಾಡಲು ಮಂಜೂರು/ಬಿಡುಗಡೆ ಮಾಡಿದ ಅನುದಾನ ವಿವರ

ಜಿಲ್ಲೆ: ಬೆಳಗಾವಿ

(ರೂ.ಲಕ್ಷಗಳಲ್ಲಿ)

ಕ್ರಸಂ	ವಿಧಾನಸಭಾ ಕ್ಷೇತ್ರ	ತಾಲ್ಲೂಕು	ಮಂಜೂರಾದ ಸ್ಥಳ	ಮಂಜೂರಾದ ವರ್ಷ	ನಿಗಧಿ ಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಕಾಮಗಾರಿ ಹಂತದ ವಿವರ
